ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 12

ಮಾರ್ಚ್ 23, 2003 ಬೆಲೆ ರೂ. 3.00




ತ್ರಿಪುರಾ ಎಡರಂಗದ ದಿಗ್ವಿಜಯ



ಕೋಮುವಾದದ ರಣಹದ್ದು ಹಾರುತಿದೆ ನೋಡಿ



ವಿದ್ಯುತ್ ಚಳುವಳಿ ಮತ್ತು ನಂತರ......




ಪ್ಲೇವಿನ್ ಲಾಟರಿ ಕೃಷ್ಣ ವೈಖರಿ ?

ಕೆ.ವಿ.ಎಸ್. ಇನ್ನಿಲ್ಲ

ಸಾವು- ಬದುಕಿನ ಹೋರಾಟದ ನಡುವೆ.....

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 19

ಹಿಂದಿನ ಸಂಚಿಕೆಯಲ್ಲಿ ದಮನಕೋರರು ಮತ್ತು ದಮನಿತರ ನಡುವೆ ಏಕತೆ ಅಸಾಧ್ಯ, ಪಾಳೇಗಾರರು ದೇಶದ ಅಧಿಕಾರ ಪಡೆದರೆ ಜನರ ಪರಿಸ್ಥಿತಿಯಲ್ಲಿ ಬದಲಾವಣೆ ಸಾಧ್ಯವಿಲ್ಲ ಎಂಬ ಚಿಂತನೆ, ನಾವು ಪ್ರತ್ಯೇಕ ಸಂಘಟನೆಗಳಾಗಿದ್ದುಕೊಂಡೇ ಸಹಕರಿಸೋಣ ಎಂಬ ಎನ್.ಸಿ.ಓ. ರ ಅಭಿಪ್ರಾಯ, ವೈಮಾನಿಕ ಸರಬರಾಜು ದಳದಲ್ಲಿ ಕಾರ್ಯ ನಿರ್ವಹಿಸಲು ಬರ್ಮಾಕ್ಕೆ ತೆರಳಿದ ಮೆ. ಜಯಪಾಲ್ ಸಿಂಗ್ ಈ ನಡುವೆ ತೀರಾ ಹದಗೆಟ್ಟ ಅವರ ಆರೋಗ್ಯ ಮತ್ತು ಜಪಾನಿಯರ ಜೊತೆ ಜಪಾನಿ ಭಾರತೀಯ ಪಡೆ ಮಣಿಪುರದ ಮೇಲೆ ಆಕ್ರಮಣ ಈ ಬಗ್ಗೆ ಓದಿರುವಿರಿ. ಮುಂದೆ....



ಕನ್ನಡಕ್ಕೆ: **ವಿಶ್ವ ಕುಂದಾಪುರ**

ದಿಮಾಪುರದಲ್ಲಿ ಆರ್.ಐ.ಎ.ಎಸ್.ಸಿ.ಯ ಕ್ಯಾಪ್ಟನ್ ಖನ್ನರನ್ನು ಭೇಟಿಯಾದೆ. ಜೆಐಎಫ್‌ಎಸ್ (ಐಎಸ್‌ಎ) ಬಗ್ಗೆ ಕೆಲವು ಮಾಹಿತಿ ಕಲೆ ಹಾಕಿದೆ.

ರಣರಂಗಕ್ಕೆ ಸರಬರಾಜು ಮಾಡುವ ಸಾಮಗ್ರಿಗಳನ್ನು ಅನ್‌ಲೋಡ್ ಮಾಡುವ ರೈಲ್ವೆಯಾರ್ಡ್‌ಗೆ ಖನ್ನಾ ನನ್ನನ್ನು ಕರೆದುಕೊಂಡು ಹೋದರು.

"ಹೌದು, ಈ ರಂಗದಲ್ಲಿ ನೇತಾಜಿ ಬೋಸ್‌ರ ಭಾರತೀಯ ಸೈನಿಕರಿದ್ದಾರೆ. ಆದರೆ ಈ ಸುದ್ದಿಯನ್ನು ರಹಸ್ಯವಾಗಿಡಲಾಗಿದೆ. ಯಾವುದೇ ಕೈದಿಗಳನ್ನು ಜೀವಂತವಾಗಿ ಒಯ್ಯಲಾಗುತ್ತಿಲ್ಲ ಜಪಾನೀಯರ ಕಡೆ ಹೋರಾಡುವ ಭಾರತೀಯ ಸೈನಿಕರನ್ನು ಬಂಧಿಸಿದಾಗ ಗುಂಡಿಟ್ಟು ಕೊಲ್ಲದಂತೆ 33 ಕಾರ್ಪ್ಸ್ ಕಮಾಂಡರ್ ಫೀಲ್ಡ್ ಕಮಾಂಡರ್‌ಗಳಿಗೆ ಆದೇಶಿಸಿದ್ದಾರೆ. ಸಾವಿರಾರು ಜನರನ್ನು ಕೊಲ್ಲಲಾಗುತ್ತಿದೆ".

ಕೆನ್ಯಾ ಅಥವಾ ಮಲಯಾದಲ್ಲಿ ಕ್ರಾಂತಿಕಾರಿ ಬಂಡಾಯದಲ್ಲಿ ಬ್ರಿಟೀಷ್ ಸೈನಿಕನೊಬ್ಬ ಸತ್ತಾಗ ರೂಪಿಸಿಕೊಳ್ಳಲಾದ ಯುದ್ಧದ ನೈತಿಕ ಪರಿಕಲ್ಪನೆ ಮೇಲೆ ಸಾಮ್ರಾಜ್ಯಶಾಹಿಗಳು ಕೆಲಸ ಮಾಡುತ್ತಿದ್ದರು. ಐಎಸ್‌ಎ ಮೇಲೆ ಕ್ರೌರ್ಯದ ಆರೋಪ ಹೇರಲಾಗಿತ್ತು. ಆದರೆ ಆ ದಿನಗಳಲ್ಲಿ ರಣರಂಗದಲ್ಲಿದ್ದ ಇಂದಿನ ಕೆಲವು ಜನರಲ್‌ಗಳು ಸೇರಿದಂತೆ, ಇಡೀ ಭಾರತಿಯ ಸೇನೆ ನನ್ನ ಆರೋಪವನ್ನು ಒಪ್ಪಿಕೊಳ್ಳುತ್ತದೆಂದು ಭಾವಿಸುತ್ತೇನೆ.

ಬ್ರಿಟೀಷ್ ಜನರಲ್‌ಗಳು ಐಎಸ್‌ಎ ಸೈನಿಕರಿಗೆ ಅಸಹನೀಯ ಕಿರುಕುಳ ಕೊಟ್ಟರು, ಕ್ರೌರ್ಯ ಮೆರೆದರು ಎನ್ನುವುದೇ ನನ್ನ ಆರೋಪ.

ನಮ್ಮ ತಾಯ್ನಾಡಿನ ಈ ಧೀರ ಪುತ್ರರು ಸಮವಸ್ತ್ರದಲ್ಲಿನ ಸೈನಿಕರಾಗಿದ್ದರು, ಒಂದು ನಿಯಮಿತ ಯುದ್ಧದಲ್ಲಿ ಪಾಲ್ಗೊಂಡಿದ್ದರು, ಯುದ್ಧಕೈದಿಗಳಾಗಿ ಪರಿಗಣಿಸುವಂತೆ ಕೇಳುವ ಹಕ್ಕು ಅವರಿಗಿತ್ತು. ಆದರೆ ಅವರನ್ನು ಯುದ್ಧಕೈದಿಗಳನ್ನಾಗಿ ಪರಿಗಣಿಸುವ ಬದಲು ಬ್ರಿಟೀಷ್ ಪಡೆಗಳು ಅವರನ್ನು ದಯೆಯಿಲ್ಲದೆ ಹಿಂಸಿಸಿ ಗುಂಡಿಟ್ಟು ಕೊಂದು ಹಾಕಿದರು.

ನಮ್ಮ ದೇಶದ ಜನರ ರಕ್ತದಿಂದ ತೊಯ್ದ ಬೆರಳುಗಳೇ ಈಗ ನಮ್ಮ ಸೇನಾ ಯೋಜನೆಯ ಸ್ವರೂಪದ ಮೇಲೆ ಆಡುತ್ತಿವೆ. ಕಾಮನ್ವೆಲ್ತ್ ಕಮಾಂಡರ್‌ಗಳ ಸಮ್ಮೇಳನದಲ್ಲಿ ಅವರು ನಮ್ಮ ಸೇನೆಯ ಯೋಜನೆಯನ್ನು ರೂಪಿಸುತ್ತಿದ್ದಾರೆ, ಆಲೋಚಿಸುತ್ತಿದ್ದಾರೆ. ಅತ್ಯಾಶ್ಚರ್ಯ!

ದೃಢಪಟ್ಟ ನೇತಾಜಿ ನಾಯಕತ್ವ

ನಾನು ಸಂತೋಷದಿಂದ ಮರಳಿದೆ. ಅದಕ್ಕೆ ಕಾರಣ ಸ್ಪಷ್ಟವಿತ್ತು. ನಾಗಾಬೆಟ್ಟಗಳಲ್ಲಿ ಈಗ ಹೋರಾಡುತ್ತಿರುವ ಸೇನೆಗೆ ನೇತಾಜಿ ನಾಯಕತ್ವ ವಹಿಸಿದ್ದರೆಂದು ಗಾಳಿ ಸುದ್ದಿ ಹರಡಿತ್ತು. ಅದೀಗ ದೃಢಪಟ್ಟಿತು. ಈ ಸೈನ್ಯದ ಬಗ್ಗೆ ರೇಡಿಯೋದಲ್ಲಿ ಸುದ್ದಿಯಾಗಿತ್ತು. ಆದರೆ ಇದೆಲ್ಲ ಜಪಾನಿನ ಯುದ್ಧ ಪ್ರಚಾರದ ತಂತ್ರವೆಂದೇ ನಾವು ಭಾವಿಸಿದ್ದೆವು.

ನೇತಾಜಿ ಬೋಸ್ ನಾಯಕತ್ವ ವಹಿಸಿದ್ದರೆ, ನಾಗಾ ಬೆಟ್ಟಗಳಲ್ಲಿ ಕಾಳಗ ನಡೆಯುತ್ತಿದೆ ಎಂಬ ಸುದ್ದಿಯೊಂದನ್ನು ಆ ದಿನ ಸಂಜೆ ಸಿದ್ಧಪಡಿಸಿದೆ. "ಇವು ಕೇವಲ ಗುಂಪುಗಳಲ್ಲ. ಇದೊಂದು ಸೈನ್ಯವೇ ಆಗಿದೆ" ಎಂದು ನಾನು ಬರೆದೆ.

ಇದಾದ ನಂತರ, ಐಎಸ್‌ಎಯ ತೆಮೊನನ್ ರೇಡಿಯೋ ಹಾಗೂ ಇತರ ನಿಸ್ತಂತು ಕೇಂದ್ರಗಳಿಂದ ಪ್ರಸಾರವಾಗುವ ಸುದ್ದಿಗಳನ್ನು ಆಲಿಸಿ ಅವುಗಳನ್ನು ಭಾರತೀಯ ಪಡೆಗಳ ಮಧ್ಯೆ ಹರಡುವುದು ಸಿಗ್ನಲ್ ಕಾರ್ಪ್ಸ್‌ನಲ್ಲಿನ ನಮ್ಮ ಘಟಕಗಳ ನಿಯಮಿತ ಕೆಲಸವಾಯಿತು.

ಸ್ವಲ್ಪ ದಿನಗಳ ನಂತರ, ಅರ್ಕಾಸ್ ಬೆಟ್ಟಗಳಲ್ಲಿ ವೈಮಾನಿಕ ಸರಬರಾಜು ಕರ್ತವ್ಯ ನಿಮಿತ್ತ ನಾನು ಪೆತಂಗಾ (ಚಿತ್ತಗಾಂಗ್)ಕ್ಕೆ ಹೋದೆ. ಎಸಿ 47 ವಿಮಾನ ಅನೇಕ ಭಾರತೀಯ ನಾಗರೀಕರ ಜತೆ ಇಳಿಯಿತು. ಇವರೆಲ್ಲರೂ ಐಎಸ್‌ಎ ಸೇನಾನಿಯಾಗಿದ್ದರು. ಸಮವಸ್ತ್ರ ತೆಗೆದು ನಾಗರೀಕ ವಸ್ತ್ರಗಳನ್ನು ತೊಡುವಂತೆ ಅವರಿಗೆ ಬಲವಂತಪಡಿಸಲಾಗಿತ್ತು. ಬರ್ಮಾದಲ್ಲಿ ನಿಯಮಿತ ಭಾರತೀಯ ಸೇನೆಯೊಂದು ತನ್ನನ್ನು ಎದುರಿಸುತ್ತಿದೆ ಎಂಬ ಸುದ್ದಿಯನ್ನು ಜೀರ್ಣಿಸಿಕೊಳ್ಳಲು ಸಾಮ್ರಾಜ್ಯಶಾಹಿಗೆ ಸಾಧ್ಯವಾಗಲಿಲ್ಲ. ಈ ಭಾರತೀಯರು ವಿಚಾರಿಸಿದಾಗ ದೂರಪೂರ್ವದಲ್ಲಿ ಜಪಾನಿಯರ ಜತೆ ಸಹಕರಿಸುತ್ತಿದ್ದ ನಾಗರೀಕರು ಎಂದು ಹೇಳಲಾಯಿತು. "ಕ್ಯಾಪ್ಟನ್, ಇವರು ಬೇಹುಗಾರರು" ಎಂದು ಬ್ರಿಟೀಷ್ ಸೈನಿಕನೊಬ್ಬ ನನ್ನ ಕಿವಿಯಲ್ಲಿ ಉಸುರಿದ. "ಹೌದೌದು, ನನಗೆ ಗೊತ್ತು, ಅವರು ಬೇಹುಗಾರರು" ನಾನು ಹಾಸ್ಯ ಮಾಡಿದೆ.

ಭಯ ವಿಹ್ವಲರಾಗಿದ್ದ ಈ ಧೀರ ಜನರು ಕರುಣೆಯ ಸೆಲೆಯೇನಾದರೂ ಕಾಣಿಸುವುದೋ ಏನೋ ಎಂದು ನನ್ನ ಕಣ್ಣುಗಳತ್ತ ದಿಟ್ಟಿಸಿದರು. ಅವರನ್ನು ಸ್ಥಳೀಯ ಕೈದಿಗಳ ಗೂಡಿಗೆ ಒಯ್ಯಲಾಯಿತು. ಅವರನ್ನು ಅಲ್ಲಿ ಸಂಪರ್ಕಿಸಲು ನಾನು ನಿರ್ಧರಿಸಿದೆ.

ಯಾಂಕಿಗಳು (ಅಮೇರಿಕ ಸೈನಿಕರು) ಕಾವಲು ಇದ್ದರು. ನನ್ನ ಕೆಲಸ ಇನ್ನಷ್ಟು ಹಗುರವಾಯಿತು. ಆ ದಿನಗಳಲ್ಲಿ ಅಮೇರಿಕದ ಸೈನಿಕರು ಭಾರತೀಯರಿಗೆ ಸಹಾನುಭೂತಿ ವ್ಯಕ್ತಪಡಿಸುತ್ತಿದ್ದರು. ನಿಯಂತ್ರಣಗೋಪುರದಿಂದ ಸ್ವಲ್ಪವೇ ದೂರವಿದ್ದ ಗೂಡನ್ನು ಅಜಾನುಬಾಹು ಅಮೇರಿಕನ್ ಸೈನಿಕರನೊಬ್ಬ ಕಾವಲು ಕಾಯುತ್ತಿದ್ದನು. ಆತ ಕಾವಲು ಕಾಯುತ್ತಿದ್ದ ಕೈದಿಗಳ ಬಗ್ಗೆ ಕುತೂಹಲದಿಂದ ನೋಡುವ ರೀತಿಯಲ್ಲಿ ನಾನು ಅವನತ್ತ ಸರಿದೆ.

ನನಗೆ ಭಾಷೆ ಗೊತ್ತಿಲ್ಲ, ಕ್ಯಾಪ್ಟನ್! ಅವರಿಗೆ ಏನಾದರೂ ಬೇಕಾಕಿದೆಯೋ ಎಂದು ತಿಳಿದುಕೊಳ್ಳಿ ಸರ್. ಅವರೆಲ್ಲರೂ ನಿಮ್ಮ ದೇಶದವರು.

ಅವರ ಪೈಕಿ ಹಳೆಯ 4/19 ಹೈದರಾಬಾದ್ ರೆಜಿಮೆಂಟ್‌ನ ಸೈನಿಕರಿದ್ದರು. ರೋಹ್ತಕ್ ಜಿಲ್ಲೆಯ ನೇಕಿರಾಮ್ ಎಂಬಾತ ಇದ್ದರು. ಐ.ಎನ್.ಎ ನೇತಾಜಿ ನಿಯಂತ್ರಣದಲ್ಲಿದೆಯೆಂದು ಅವರು ನನಗೆ ತಿಳಿಸಿದರು. ಷೂನಬಾಜ್ ಮತ್ತು ಕಿಯಾನಿ ಬಗ್ಗೆಯೂ ಅವರು ಹೇಳಿದರು.

ನಮ್ಮನ್ನು ಇಂಫಾಲ್ ಬಳಿ ಸೆರೆಹಿಡಿದು ಇಲ್ಲಿಗೆ ತರಲಾಯಿತು. ನಮ್ಮ ಶಸ್ತ್ರಾಸ್ತ್ರ ಹಾಗೂ ಸಮವಸ್ತ್ರಗಳನ್ನು ಕಿತ್ತುಕೊಳ್ಳಲಾಯಿತು. ನಾವು ಸೈನಿಕರು. ನಮಗೆ ಈ ಕೊಳಕು ನಾಗರಿಕ ವಸ್ತ್ರಗಳನ್ನು ಯಾಕೆ ಕೊಟ್ಟಿದ್ದಾರೆಂಬುದು ಅರ್ಥವಾಗುತ್ತಿಲ್ಲ.

ಮನೆಯಲ್ಲಿ ಎಲ್ಲರೂ ಆರಾಮವೇ? ಹರ್ಯಾಣದಲ್ಲಿ ಈ ವರ್ಷ ಬೆಳೆ ಹೇಗಿದೆ - ಸರಳ ನೇಕಿರಾಮ್ ಪ್ರಶ್ನಿಸಿದರು. ನಾನು ಕೂಡ ಒಬ್ಬ ಜಾಟ್ ಎಂದು ಹೇಳಿದಾಗ ಆತನಿಗೆ ತೀರಾ ಆತ್ಮೀಯತೆಯ ಅನುಭವವಾಯಿತು. ಅವರಿಗೆ ನನ್ನ ತಂದೆಯ ಪರಿಚಯವಿತ್ತು.

ಬನಾರಸ್ ತರಬೇತಿ ಕೇಂದ್ರ ನಾನು ನಿನ್ನನ್ನು ನೋಡಿದ್ದೆ ಅನಿಸುತ್ತದೆ. ಆಗ ನೀನು ಶಾಲಾ ಬಾಲಕನಾಗಿದ್ದೆ

ನನ್ನ ಕಣ್ಣಾಲಿಗಳು ತುಂಬಿಬಂದವು. ಗಂಟಲು ಕಟ್ಟಿತು. ಅವರಿಗೆ ನನ್ನ ಸಿಗರೇಟ್ ಟಿನ್ ನೀಡಿದೆ.

(ಮುಂದುವರಿಯುವುದು)

STATEMENT OF THE OWNERSHIP ETC. THE WEEKLY NEWSPAPER 'AIKYARANGA'

Form IV

(See Rule 8)

1.	Place of Publication	: 12, 18th Cross, S.R.Nagar, Bangalore - 560 027
2.	Periodicity of Publication	: Weekly
3.	Printer's Name	: G.N.Nagaraj
	(Whether Citizen of India? if Forigner, State the Country of Origin)	: Indian
	Address	: 12, 18th Cross, S.R.Nagar, Bangalore - 560 027
4.	Publisher's Name	: G.N.Nagaraj
	(Whether Citizen of India? if Forigner, State the Country of Origin)	: Indian
	Address	: 12, 18th Cross, S.R.Nagar, Bangalore - 560 027
5.	Editor's Name	: S.Y.Gurushanth
	(Whether Citizen of India? if Forigner, State the Country of Origin)	: Indian
	Adress	: 12, 18th Cross, S.R.Nagar, Bangalore - 560 027
6.	Name and address of individuals who own the Committee of Newspaper and partners or Shareholders holding more than one percent of the total capital	: Karnataka State Communist Party of India (Marxist), Karnataka State Committee, 12, 18th Cross,S.R.Nagar, Bangalore - 560 027

I.G.N.Nagaraj hereby declare that the particulers given above are true to the best of my knowledge and belief.

Date: 16 March 2003
Bangalore

Sd/-
G.N.Nagaraj

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಮಾರ್ಚ್ 23 , 2003
ಭಗತ್ ಸಿಂಗ್, ರಾಜಗುರು, ಸುಖದೇವ್ ಹುತಾತ್ಮ ದಿನ

ಮಾರ್ಚ್ 23 ರಿಂದ 28, 2003
ಡಿವೈಎಫ್‌ಐ ಕರೆ - ನಿರುದ್ಯೋಗದ ವಿರುದ್ಧ ಜಾಥಾಗಳು, ಪ್ರಚಾರಾಂದೋಲನ
ಮಾರ್ಚ್ 28, ಜಿಲ್ಲಾ / ತಾಲ್ಲೂಕು ಕೇಂದ್ರಗಳಲ್ಲಿ ಧರಣಿ

ಮಾರ್ಚ್ 25, 2003
ವಿದ್ಯುತ್ ದರ ಏರಿಕೆ ಮತ್ತು ಖಾಸಗೀಕರಣ ವಿರೋಧಿಸಿ, ಹೆಸ್ಕಾಂ ಮುಂದೆ ಬೃಹತ್ ಪ್ರತಿಭಟನೆ
ಬೆಳಗ್ಗೆ 11 ಗಂಟೆಗೆ ಹುಬ್ಬಳ್ಳಿಯ ಇಂದಿರಾ ಗಾಜಿನ ಮನೆಯಿಂದ ಮೆರವಣಿಗೆ ಆರಂಭ. ಹಿರಿಯರೈತ ಮುಖಂಡ ಮತ್ತು ಮಾಜಿ ಕೇಂದ್ರ ಸಚಿವರಾದ ಬಾಬಾಗೌಡ ಪಾಟೀಲ್ ಮತ್ತು ಕರ್ನಾಟಕ ಪ್ರಾಂತ ರೈತಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆ ಮತ್ತಿತರರು ಭಾಗವಹಿಸಲಿದ್ದಾರೆ.

ಏಪ್ರಿಲ್ 4 ರಿಂದ 6, 2003
ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ 5ನೇ ರಾಷ್ಟ್ರ ಸಮ್ಮೇಳನ, ತ್ರಿಚೂರು - ಕೇರಳ

ಪ್ಲೇವಿನ್ ಆನ್‌ಲೈನ್ ಲಾಟರಿ : ನೈತಿಕ ಅಧಃಪತನದಿಂದ ಹಣ ದೋಚುವ ಹೈಟೆಕ್ ಸರ್ಕಾರ

ಕೃಷ್ಣರ ಸರ್ಕಾರ ಎಷ್ಟು ದಿವಾಳಿಯದ್ದಿದೆ ಮತ್ತು ಎಂತಹ ಭಂಡತನಕ್ಕೆ ಹೇಸದು ಎಂಬುದಕ್ಕೆ ಈಚಿನ ಸಾಕ್ಷಿಯಾಗುತ್ತದೆ 'ಪ್ಲೇವಿನ್' ಆನ್‌ಲೈನ್ ಲಾಟರಿಗಳನ್ನು ಸಮರ್ಥಿಸುತ್ತಿರುವ ಪರಿ. ಇಂತಹ ಲಾಟರಿಗಳಿಂದ ಬಂದ ಹಣದಿಂದ ರಾಜ್ಯದ ಬಡ ಮಕ್ಕಳಿಗೆ ಶಿಕ್ಷಣ, ಮಧ್ಯಾಹ್ನದ ಬಿಸಿಯೂಟ ಮುಂತಾದ ಕಲ್ಯಾಣಕಾರಿ ಕೆಲಸಗಳಿಗೆ ಬಳಸಲಾಗುತ್ತಿದ್ದು ಜನ ಹೆಚ್ಚು ಹೆಚ್ಚು ಇಂತಹ ಲಾಟರಿ ಆಡಬೇಕೆಂದು ಹೇಳುತ್ತಾರೆ ಉಳಿತಾಯ ಖಾತೆ ಸಚಿವ ಬಾಬು ಚಿಂಚನಸೂರು. ಈ ಮಂತ್ರಿ ಉಸುರಿದ ಅಣಿಮುತ್ತಿನ ಪ್ರಸಾದವೆತ್ತಿಕೊಂಡು ಪ್ರಚಾರಕ್ಕಿಳಿದ ಅಧಿಕಾರಿಗಳು ಸೆಂಟ್ರಲ್ ಜೈಲು ಗೋಡೆ ಮೀರಿಸುಂತಹ ಡಿಜಿಟಲ್-ಹೈಟೆಕ್ ವರ್ಣ ರಂಜಿತ ಬೋರ್ಡ್ ನಿಲ್ಲಿಸಿ, 'ನೀವು ಕೊಡುವ ಹಣ ಈ ಬಡ ಮಕ್ಕಳ ಊಟಕ್ಕೆ ನೆನಪಿಡಿ' ಎಂದು ಕಿಸೆಗೆ ಕನ್ನ ಹಾಕಲು ಯಾಚಿಸುತ್ತದೆ. ಇಂತಹ ಕರುಣಾಜನಕ ಕಥೆ ಹೇಳಿ ಹಗಲು ದರೋಡೆ ಮಾಡುವಷ್ಟು ಅಧಃಪತನವಾಯಿತೇ ಸರ್ಕಾರ? ಮುಖ್ಯಮಂತ್ರಿ ಕೃಷ್ಣ ಇದನ್ನು ವಿಧಾನಸಭೆಯಲ್ಲಿ ನಾಚಿಕೆಯಿಲ್ಲದೇ ಸಮರ್ಥಿಸುತ್ತಾರೆ. ಟೀಕೆಗಳು ತೀವ್ರವಾದ ಬಳಿಕ ಅಂತರ್‍ರಾಷ್ಟ್ರೀಯ ಮಹಿಳಾ ದಿನದಂದು ಬಹಿರಂಗ ಸಭೆಯಲ್ಲಿ ಪ್ಲೇವಿನ್ ಆಡುವ ಹಾದಿತಪ್ಪಿದ ಗಂಡಂದಿರನ್ನು ಮಹಿಳೆಯರೇ ನಿಯಂತ್ರಿಸಬೇಕು ಅದು ನಿಮ್ಮ ಕೈಯಲ್ಲೇ ಇದೆಯೆಂದು ತಮ್ಮ ಹೊಣೆಗಾರಿಕೆಯನ್ನು ಮಹಿಳೆಯರ ಹೆಗಲಿಗೆ ಹಾಕಿ ಕೈತೊಳೆದು ಕೊಳ್ಳುತ್ತಾರೆ. 'ದುಶ್ಚಟ, ಆಮಿಷ-ವಂಚನೆ ಬೆಳೆಸುವುದು ನಮ್ಮ ಹೊಣೆ.

ಅದನ್ನು ಬಿಡಿಸಲು ಪ್ರಯತ್ನಿಸುವುದು ನಿಮ್ಮ ಹೊಣೆ' ಎಂಬಂತಿದೆ ಮುಖ್ಯಮಂತ್ರಿಗಳ ಮಾತು. ಇವರ ಸಾಮಾಜಿಕ ಕಲ್ಯಾಣಕ್ಕೆ, ಅಭಿವೃದ್ಧಿಗೆ ಇಂತಹ ದುರ್ಮಾರ್ಗಗಳಿಂದ, ಲಕ್ಷಾಂತರ ಕುಟುಂಬಗಳನ್ನು ಸರ್ವನಾಶ ಮಾಡಿ, ಸಾವಿರಾರು ಜನರನ್ನು ಹುಚ್ಚಾಸ್ಪತ್ರೆಗೆ ತಳ್ಳಿ, ಉದ್ಧಾರದ ಕಾರ್ಯಕ್ರಮ ಹಾಕಲು ಜನ ಅಧಿಕಾರ ನೀಡಿದ್ದಾರೆಯೇ? ಜನಪರ ಕೆಲಸಗಳಿಗೆ ಹಣವಿಲ್ಲದೇ ಖಜಾನೆ ಖಾಲಿಯಾಗಿರುವುದುದಾದರೂ ಏಕೆ? ವಿದೇಶಿ ಹಣಕಾಸು ಸಂಸ್ಥೆಗಳು ಸಾಲಕ್ಕೆ, ಪ್ರಗತಿ ಹೆಸರಿನ ದುಂದುವೆಚ್ಚಕ್ಕೆ, ಬಹುರಾಷ್ಟ್ರೀಯ ಹಾಗೂ ರಾಜ್ಯದ ಅತ್ಯಂತ ದೊಡ್ಡ ಉದ್ದಿಮೆದಾರರ ಬೊಕ್ಕಸ ತುಂಬಲು ಯಥೇಚ್ಛ ರಿಯಾಯಿತಿ ಘೋಷಿಸುವುದನ್ನು ನಿಲ್ಲಿಸಬಾರದೇಕೆ? ಇಂಥದಕ್ಕೆ ಸಾಲದೆಂದು ಕಷ್ಟಕೋಟಲೆಗಳಲ್ಲಿ ಮುಳುಗೇಳುತ್ತಿರುವವಲ್ಲಿ ಬಡಜನರ ಆಶೆ ಹುಟ್ಟಿಸಿ ಲೂಟಿ ಮಾಡುವುದು ಒಂದು ಅನೈತಿಕ ಎಂದೆನ್ನಿಸದಿದ್ದರೆ 'ನಾಗರೀಕ' ಸರ್ಕಾರದ ಮುಖ್ಯಮಂತ್ರಿ ಎಂದೆನ್ನಲು ನಾಚಿಕೆ ಪಡಬೇಕಾಗುತ್ತದೆ. 'ಪ್ಲೇವಿನ್' ನಂತಹ ಹೈಟೆಕ್ ಲಾಟರಿ-ಲೂಟಿಗಳಿಂದ ಹತಾಶರಾಗಿ, ಮತಿಭ್ರಮಣೆಗೊಳಗಾಗಿ 'ನಿಮ್ಹಾನ್ಸ್' ಹುಚ್ಚಾಸ್ಪತ್ರೆ ಸೇರಿರುವ ರೋಗಿಗಳನ್ನು ಭೇಟಿಯಾಗಲು ಬಿಡದಂತೆ ಪೋಲೀಸ್ ಕಾವಲುಹಾಕಿರುವುದರ ನಿಜವಾದ ಸಂಗತಿಯುಂಟರೆ ಪರಿಸ್ಥಿತಿಯ ಗಂಭೀರ [illegible] ಹಗರಣ ತಿಳಿಯದೇ ಇರುವುದಿಲ್ಲವೇ?


ಹಾಸನದಲ್ಲಿ ಪ್ರತಿಭಟನೆ ಜೈಲುಪಾಲಾದವರು

ಸರ್ಕಾರದ ಈ ಸೋಗು ಹಾಗೂ ಹಗಲು ದರೋಡೆಯ ಸಮರ್ಥನೆ ವಿರುದ್ಧ ಹಲವಾರು ಕಡೆಗಳಲ್ಲಿ ಪ್ಲೇವಿನ್ ಎದುರು ಪ್ರತಿಭಟನೆಗಳು ಆರಂಭಗೊಂಡಿವೆ. ಆಗಲಾದರೂ ಸರ್ಕಾರ ಎಚ್ಚರಗೊಂಡೀತೆ? ತನ್ನ ಪ್ರಜೆಗಳು ಯಾಕೆ ಬೀದಿಗಿಳಿಯಬೇಕಾಯಿತೆಂದು ಯೋಚಿಸಿತೇ? ಇಲ್ಲ. ಬದಲಾಗಿ ಪೋಲೀಸ್ ಹಾಗೂ ಗೂಂಡಾ ಬಲ ಬಳಸಿ ಅಂತಹ ಧ್ವನಿಗಳನ್ನು ಅಡಗಿಸಲು ಮುಂದಾಯಿತು.

ಹಾಸನದಲ್ಲಿ ಡಿವೈಎಫ್‌ಐ, ಎಸ್‌ಎಫ್‌ಐ ಮತ್ತು ರಾಜ್ಯ ರೈತ ಸಂಘ ಒಡಗೂಡಿ ಮಾರ್ಚ್ 5 ರಂದು ಪ್ರತಿಭಟಿಸಿದವರ ಮೇಲೆಯೇ ಸುಳ್ಳು ಮೊಕದ್ದಮೆ ಹೂಡಿ, ಜೈಲು ಪಾಲು ಮಾಡಿದೆ ಈ 'ಸೈಬರ್' ಕೃಷ್ಣರ 'ಸೈತಾನ ಸರ್ಕಾರ'. ಶಾಂತಿ, ಕೋಮುಸೌಹಾರ್ದತೆ, ಜನರ ಹಿತಗಳಿಗೆ ಜೀವದ ಹಂಗು ತೊರೆದು ಸದಾ ಹೋರಾಡುತ್ತಿರುವ ಯುವ ಚೈತನ್ಯಗಳನ್ನು ದಮನಿಸಲು ಮುಂದಾಗಿರುವ ಖದೀಮ ಸರ್ಕಾರ, ಅದಕ್ಕಿಂತಲೂ ಅತೀ ಉತ್ಸಾಹ ತೋರುವ ಸ್ಥಳೀಯ ಮಾಫಿಯಾ. ಅದರ ಸೆರಗಿನಂಚು ಹಿಡಿದಿರುವ ಕೆಲವು ಪೋಲೀಸ್ ಅಧಿಕಾರಿಗಳು, ಹೂಡಿದ ಮೊಕದ್ದಮೆ ಏನು ಗೊತ್ತೆ? ಡಿವೈಎಫ್‌ಐನ ಧರ್ಮೇಶ್, ಎಸ್‌ಎಫ್‌ಐನ ನವೀನ್ ಕುಮಾರ್, ಕಣಗಾಲ್ ಮೂರ್ತಿ, ರಾಜ್ಯ ರೈತ ಸಂಘದ ಕೋಡಿಹಳ್ಳಿ ಚಂದ್ರಶೇಖರ್, ಕೊಟ್ಟೂರು ಶ್ರೀನಿವಾಸ್ ಮುಂತಾದ 81 ಜನರ ಮೇಲೆ ಡಕಾಯಿತಿ, ಕೊಲೆಯತ್ನ, ಕೊಲೆ ಬೆದರಿಕೆಗಳಂತಹ ಕ್ರಿಮಿನಲ್ ಕೇಸ್ ಹಾಕಿ ಜೈಲು ಪಾಲು ಮಾಡಿದ್ದಾರೆ. ಆದರೆ ಹಿಂದೆ 'ಪ್ಲೇವಿನ್' ಲಾಟರಿಯ ಹಣ ದೋಚುವ ಜಿದ್ದಾಜಿದ್ದಿಗಾಗಿ ಮಚ್ಚು-ಲಾಂಗುನಂತಹ ಮಾರಕಾಸ್ತ್ರ ಹಿಡಿದು ಬಡಿದಾಡಿದವರ ಮೇಲೆ ಮಾತ್ರ ಯಾವುದೇ ಕೇಸ್ ಹಾಕದಿರುವುದು ಪೋಲೀಸರ ದಕ್ಷತೆ ಮತ್ತು ಇಚ್ಛೆ ಏನೆಂಬುದು ತಿಳಿಸುತ್ತದೆ. ಅವರ ಕಾನೂನು ಎತ್ತಕಡೆ ಎಂಬ ಬಂಡವಾಳ ಬಯಲಿಗಿಡುತ್ತದೆ. ವಿಶೇಷವೆಂದರೆ ಹಾಸನದ ಎಸ್ಪಿಯಾಗಿರುವ ನಂಜುಂಡ ಅವರೇ ಇಂತಹ ದಮನಕಾಂಡದ ದಗಲಬಾಜಿಗಳ ರಕ್ಷಣೆಯ ಹೊಣೆ ಹೊತ್ತು ಶಿರಸಾವಹಿಸಿ ಜಾರಿ ಮಾಡುತ್ತಿರುವುದು, ಮತ್ತು ಇದೇ ಸಂದರ್ಭ ಬಳಸಿ ಲಾಟರಿ ಧಣಿಗಳಿಂದ 'ಮಾಮೂಲಿ' ವಸೂಲಾತಿ ಲಕ್ಷಗಳಾದದ್ದು ಎಂಬ ದಟ್ಟ ವದಂತಿಗಳಿಗೆ ಇದುವರೆಗೂ ಸ್ಪಷ್ಟನೆ ನೀಡಲಾಗಿಲ್ಲ. ಇನ್ನೂ ವಿಶೇಷ ಸಂಗತಿಯೆಂದರೆ ಇದಕ್ಕೆ ಬಿಜೆಪಿ, ಸಂಯುಕ್ತ ಜನತಾದಳ, ಬೇಲೂರಿನ ಕಾಂಗ್ರೆಸ್ ಮುಖಂಡರೂ ಈ ಪ್ಲೇವಿನ್ ಕಸುಬಿನಲ್ಲಿ ಕಾಸು ಮಾಡಿಕೊಳ್ಳುತ್ತಿದ್ದಾರಂತೆ. ಕೃಷ್ಣರ ಸರ್ಕಾರದ ದಮನಖೋರತನ, ಖದೀಮರ ರಕ್ಷಣೆ ನೀತಿ ಖಂಡನೀಯ.

ಹತಾಶೆ ದುರ್ಬಳಕೆ : ಪ್ಲೇವಿನ್ ಅಥವಾ ಆನ್‌ಲೈನ್ ಲಾಟರಿ ಅಡ್ಡೆಗಳ ಮುಂದೆ ಜನರೇಕೆ ಹಿಂಡುಹಿಂಡಾಗಿ ಜಂಗುಳದಂತೆ ಸೇರಿರುತ್ತಾರೆ. ಗಂಜಿಗೆ ಬದಲು ಲಾಟರಿಗೆ ಸುರಿಯುತ್ತಾರೆ? 'ಆತ್ಮಸಂಯಮ ಇರಬೇಕು. ಮನಸ್ಸು ನಿಯಂತ್ರಣವಿರಿಸಿ ಕೊಳ್ಳಬೇಕು' ಎಂದು ಬುರುಡೆ ಬೋಧನೆಗಳ ನಂತರವೂ ಯಾಕೆ ಹೀಗೆ? ಬಹುತೇಕ ಲಾಟರಿ ಆಡುವವರು ತೀರಾ ಬಡವರು, ಕೂಲಿಕಾರರು, ದುಡಿದೇ ತಿನ್ನಬೇಕಾದ ಜನಸಾಮಾನ್ಯರು, ಯುವಕರು, ಹತಾಶ ಸ್ಥಿತಿಯಲ್ಲಿರುವ ರೈತರು. ಆಶೆ-ಅಗತ್ಯಗಳನ್ನು 'ಇಹಲೋಕದಲ್ಲಿ' ಪೂರೈಸಿಕೊಳ್ಳಲಾಗದ, ಪರಲೋಕದವರೆಗೂ ಕಾಯದ 'ಪಾಪಿ'ಗಳು, ಮಧ್ಯಮವರ್ಗದವರು.... ಎಷ್ಟೊಂದು ಅನಾಯಸವಾಗಿ ಸಾವಿರಾರು ಕೋಟಿ ರೂಪಾಯಿಗಳು ಸರ್ಕಾರದ ಕಿಸೆಗೆ, ಏಜೆಂಟರ ಜೇಬಿಗೆ ಸೇರುತ್ತಿದೆ ಎಂಬುದೇ ದಿಗ್ಭ್ರಮೆಯಾಗುತ್ತದೆ. ಇದಕ್ಕೆ ಹೈಟೆಕ್ ತಂತ್ರಜ್ಞಾನದ ಬಳಕೆಯ ರಕ್ಕಸತನ ಅರ್ಥವಾಗುತ್ತದೆ.

ವಾಸ್ತವದಲ್ಲಿ, ಅವರ ದುಡಿಮೆ-ಆದಾಯದಲ್ಲಿ ಏನೂ ಸಾಧಿಸದ, ಗಳಿಸದ ಕಷ್ಟ ಕೋಟಲೆಗಳ ಮಡುವಿನಲ್ಲಿರುವ ಜನಕ್ಕೆ ದೇವರೇ ದಿಕ್ಕಾದಂತೆ 'ಪ್ಲೇವಿನ್' ನಂತಹ ಲಾಟರಿಗಳು, ಓಸಿಗಳು, ಚೀಟಿ ವ್ಯವಹಾರಗಳು ಅದೃಷ್ಟದ ಮೊರೆ ಹೋಗುವಂತೆ ಮಾಡುತ್ತವೆ. ಈಗಿನ ಟಿ.ವಿ. ಜಾಲದ ಜಾಹೀರಾತುಗಳು, ಕನಸುಗಳ ಲೋಕದ ಪ್ರವೇಶಕ್ಕೆ ಹಾತೊರೆಸುತ್ತವೆ. ಜನರ ಇಂತಹ ಹತಾಶೆ, ಸೀಮಿತ ಅವಕಾಶ, ಬದುಕಿನ ನ್ಯಾಯದ ನೆಲೆಯನ್ನೇ ಅಪಹರಿಸಿ, ಸುಲಿಯುವ ವ್ಯವಸ್ಥೆ ಜನರ ಹತಾಶೆ-ಕೃಷ್ಟಗಳನ್ನೇ ಬಂಡವಾಳವಾಗಿಸಿ, ಕೋಟಿಗಳ ಕನಸು ಹಚ್ಚಿ ಲೂಟಿ ಹೊಡೆಯುತ್ತದೆ. ಅಧೋಗತಿಗೆ ತಳ್ಳುತ್ತಿದೆ. ಒಬ್ಬ ಕೋಟ್ಯಾಧೀಶನಿಗಾಗಿ ಲಕ್ಷಾಂತರ ಜನ ಹಣ ಸುರಿಯಬೇಕು, ಸುಲಿಗೆಯ ನ್ಯಾಯ ಎಂದು ಸಿದ್ಧಾಂತ ಗಟ್ಟಿಗೊಳಿಸುತ್ತವೆ. ಇಂತಹ ಸ್ಥಿತಿಯನ್ನು ಸೃಷ್ಟಿಸುತ್ತಿರುವ, ಉಲ್ಬಣಗೊಳಿಸುತ್ತಿರುವ ಜಾಗತೀಕರಣ-ಉದಾರೀಕರಣಕ್ಕೆ ಧಿಕ್ಕಾರ ಹೇಳಬೇಕಿದೆ.

ರದ್ದು ಪಡಿಸಲಿ: ಇಂತಹ ಸುಲಿಗೆ-ಹಗಲು ದರೋಡೆ, ಸರ್ಕಾರದ ಈ ವಂಚನೆಗೆ ಅನೈತಿಕ ಸಮರ್ಥನೆ, ಪ್ರೋತ್ಸಾಹಗಳ ವಿರುದ್ಧ ನಾಡಿನ ಜನ ಸಿಡಿದೇಳಬೇಕು. ಇದನ್ನು ನಿಷೇಧಿಸುವಂತೆ ಆಗ್ರಹಿಸಬೇಕು. ಇಲ್ಲವಾದರೆ 'ಹುಚ್ಚಾಸ್ಪತ್ರೆಗಳೂ', ಸ್ಮಶಾನಗಳು, ಭಿಕಾರಿಗಳೂ ಹೆಚ್ಚುವ ಸಂದರ್ಭ ಬಂದು ಸರ್ಕಾರದ ನೈತಿಕತೆಯೇ ನಗ್ನವಾಗಿ ನೆಲಕಚ್ಚುತ್ತಿರುವುದು ಕಾಣುತ್ತದೆ. ಹೇಗಿದೆ ಬೆಂಗಳೂರು ಸಿಂಗಾಪೂರವಾಗುತ್ತಿರುವ ಪರಿ.

ಈ ವಾರ ಕರ್ನಾಟಕ ಒಂದು ನೋಟ

— ಎಸ್.ವೈ.ಗುರುಶಾಂತ್

ಖಾದೀ ಪಡೆ ಹಾವಳಿ

ಎಲ್ಲೆಂದರಲ್ಲಿ ಕೊಳ್ಳಿಯಿಡಲು ಪರದಾಡುತ್ತಿವೆ ಚಿಡ್ಡಿ ಪಡೆ. ಅದಕ್ಕೆ ಒಂದು ಸಿನಿಮಾ ಅಥವಾ ಸಿನಿಮಾ ನೋಡುವವರು, ವಿವಾಹವಾಗಬಯಸುವ ಯುವಕ-ಯುವತಿ ಅಥವಾ ಒಂದು ಮರ ಅಥವಾ ಕ್ರಿಕೆಟ್, ಸ್ಮಶಾನ, ಗದ್ದುಗೆ ಒಂದು ಮೆರವಣಿಗೆ, ಯಾವುದಾದರೇನು? ಬೇಕಾಗಿರುವುದು ಒಂದು ನೆಪ, ಬಳಿಕ ಪೂರ್ವ ತಯಾರಿಯಂತೆ ಅದನ್ನು 'ಹಗರಣ'ವನ್ನಾಗಿಸಿ, ಸುದ್ದಿ ಮಾಡಿ ಗದ್ದಲವೆಬ್ಬಿಸುವುದು. ಆಸ್ತಿ-ಜೀವ ಬಲಿತೆಗೆದುಕೊಳ್ಳುವುದು.

ರಾಜ್ಯದಲ್ಲಿ ಇಂತಹ ದಾಂಧಲೆ, ಕೋಮು ವಿಭಜನೆಯ ಹಿಂಸಾಚಾರಗಳನ್ನು ಸತತವಾಗಿ ಗುರುತಿಸುತ್ತಲೇ ಬಂದಿದ್ದೇವೆ. ಇವಿಲ್ಲದ ಒಂದು ವಾರವೂ ಇಲ್ಲ ಎಂಬಂತಾಗಿದೆ. ಬಾಬಾಬುಡನ್‌ಗಿರಿ, ಅಯೋಧ್ಯಾ ಮಾಡುವ ಬೆದರಿಕೆಯಿಂದ ಹಿಡಿದು ಯಾರೂ ಕೇಳಿರದಂತ ಕೊಣ್ಣೂರು ಸುಳ್ಯದಂತಹ ಊರಿನ ಓಣಿಯವರೆಗೆ ಅವ್ಯಾಹತವಾಗಿ ನಡೆದೇ ಇವೆ.

ಕಳೆದವಾರವಿಡೀ ಬೆಂಗಳೂರು ನಗರದ ಕೆಲವು ಬಡಾವಣೆಗಳು ಅತ್ಯಂತ ದ್ವೇಷದಲ್ಲಿ ಕಾಲ ಕಳೆದವು. ಘರ್ಷಣೆ, ಹಿಂಸಾಚಾರ ನಿಲ್ಲದೇ ನಡೆದವು. ವಿಧಾನಸಭೆಯಲ್ಲಿ ಚರ್ಚೆಗೆ ಗ್ರಾಸವಾಯಿತು. ಅದು ಕ್ರಿಕೆಟ್. ಭಾರತ-ಪಾಕಿಸ್ತಾನದ ನಡುವಿನ ಕ್ರಿಕೆಟ್ ಆಟ. ಆಟದಲ್ಲಿ ಒಬ್ಬರು ಸೋಲುವುದು ಗೆಲ್ಲುವುದು ಸಹಜ. ಇಂಡಿಯಾ ಎಲ್ಲೂ ಗೆಲ್ಲದಿದ್ದರೂ ಪರವಾಯಿಲ್ಲವಂತೆ ಆದರೆ ಪಾಕಿಸ್ತಾನದ ಮೇಲೆ ಗೆಲ್ಲಲೇಬೇಕು, ಅದು ಸೋಲಲೇಬೇಕು! ಇಲ್ಲಿ ಕ್ರೀಡಾ ಸ್ಫೂರ್ತಿಗಿಂತ ಸೇಡಿನ ಭಾವನೆ - ಆಟವನ್ನು ಯುದ್ಧಕ್ಕೆ ಹೋಲಿಸುವ, ಅದನ್ನು ಹಿಂದೂ-ಮುಸ್ಲಿಂ ಎಂದು ವ್ಯಾಖ್ಯಾನಿಸಿ ವಿಭಜಿಸುವ ಕೆಲಸ ಸತತ ಮಾಡಲಾಗುತ್ತಿದೆ. ಭಾರತ ಗೆದ್ದ ವಿಜಯೋತ್ಸವದ ನೆಪದಲ್ಲಿ ಹಿಂಸೆ, ಅಲ್ಪಸಂಖ್ಯಾತರ ಮೇಲೆ ಧಾಳಿ ನಡೆಸಲಾಗಿದೆ. ಅದಕ್ಕೆ ಮರು ಪ್ರತಿಕ್ರಿಯೆ. ಇದು ಕೇವಲ ಬೆಂಗಳೂರು ಮಾತ್ರವಲ್ಲ ಅಹ್ಮದಾಬಾದ್, ಗೋರಖಪುರ ಮುಂತಾದೆಡೆ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಧಾಳಿಗಳೂ ನಡೆದಿವೆ. ಕ್ರಿಕೆಟ್ ಆರಂಭವಾಗುತ್ತದೆ ಎನ್ನುವಾಗಲೇ ಸ್ಟೇಡಿಯಂನಲ್ಲಿ ಬ್ಯಾನರ್ ಹಿಡಿಯುವ, 'ಖಾವಿ ಚಳಕ ಪ್ರದರ್ಶಿಸುವ' ಘೋಷಣೆ ಕೂಗುವ - ಅಂತಿಮವಾಗಿ ಗೆಲುವಾಗಲೀ ಇಲ್ಲ ಸೋಲಾಗಲಿ ವಿಜಯೋತ್ಸವ ಅಥವಾ 'ಅಲ್ಪಸಂಖ್ಯಾತರ ಪಟಾಕಿ' ಹೊಡೆದರೆಂದು ಹೊಡೆದಾಡುವ ಎಲ್ಲಾ ತಯಾರಿಗಳೂ ಚಡ್ಡಿಗಳ ಅಡ್ಡಾದಲ್ಲಿ ಸಿದ್ಧಗೊಳ್ಳುತ್ತವೆ. ಇದು ಕೇವಲ ದೂಷಣೆ ಮಾತುಗಳಲ್ಲ ಪತ್ರಿಕೆ, ಟಿ.ವಿ. ಮಾಧ್ಯಮಗಳಲ್ಲಿ ಪ್ರಕಟಗೊಂಡ ಸುದ್ದಿ-ಮಾಹಿತಿಗಳು. ಬೆಂಗಳೂರಿನಲ್ಲಿ ಅದದ್ದೂ ಇದೆ. ತಮ್ಮ ವಿಜಯೋತ್ಸವಕ್ಕೆ 'ಯಾರೋ' ಅಡ್ಡಿಪಡಿಸಿದರಂತೆ, ಒಂದು ವೇಳೆ ಅಡ್ಡಿಪಡಿಸಿದ್ದರೆ ಕಠಿಣ-ನಿಷ್ಠುರ ಕಾನೂನು ಕ್ರಮ ವಹಿಸಲು ಮುಂದಾಗಬಹುದಿತ್ತು. ಪೋಲೀಸರಿಗೆ ದೂರು ನೀಡಬಹುದಿತ್ತು. ಆದರೆ ಇಲ್ಲಿ ಅದೆಲ್ಲಾ ಅವರ 'ಬಚ್ಚಿಟ್ಟುಕೊಂಡ ದೇಶಪ್ರೇಮಿ' ಅಜೆಂಡಾಕ್ಕೆ ಸರಿಹೊಂದುವುದಿಲ್ಲ. ಹೀಗಾಗಿ ಹಿಂಸಾಚಾರಕ್ಕೆ ಚಿಡ್ಡಿಪಡೆ ಇಳಿದೇಬಿಟ್ಟಿತು. ಧಾಳಿ-ಆಸ್ತಿ ಪಾಸ್ತಿ ಹಾನಿಯಾಯಿತು. ಇಂತಹ 'ಉತ್ಸವ' ನಿಲ್ಲಿಸಲು ಯಾಕೆ ಹೋಗುತ್ತೀರಿ ಎಂದು ವಿಧಾನಸಭೆಯಲ್ಲಿ ಭಾಷಣ ಮಾಡುತ್ತಾರೆ.

ಪುಟ 10 ಕ್ಕೆ

ವಿದ್ಯುತ್ ಚಳುವಳಿ ಮತ್ತು ನಂತರದ ಬೆಳವಣಿಗೆಗಳು

ವಿದ್ಯುತ್ ನಿಯಂತ್ರಣ ಆಯೋಗ ದರ ಏರಿಕೆ ಪ್ರಕಟಿಸಿದೆ

ಕೆಪಿಟಿಸಿಎಲ್ ಬಯಸಿದ ಎಲ್ಲಾ ಅಂಶಗಳಿಗೆ ಅಂಗೀಕಾರದ ಮುದ್ರೆ ಒತ್ತಲಾಗಲಿಲ್ಲ. ದರಗಳ ಏರಿಕೆಯಲ್ಲಿಯೂ ಇದು ಕಾಣುತ್ತದೆ. ಇಂತಹ ನಿರ್ಧಾರ ಕೈಗೊಳ್ಳಲೇಬೇಕಾದ ಪರಿಸ್ಥಿತಿ ನಿರ್ಮಾಣವಾದದ್ದು ರಾಜ್ಯಾದ್ಯಂತ ನಡೆದ 'ವಿದ್ಯುತ್ ಖಾಸಗೀಕರಣ ಮತ್ತು ದರ ಏರಿಕೆಯ ವಿರೋಧಿ ಪ್ರಬಲ ಹೋರಾಟ'ದ ಪರಿಣಾಮ. ಇದರಿಂದ ಕೆರಳಿರುವ ಕೆಪಿಟಿಸಿಎಲ್ ಮುಂದೇನು ಮಾಡಬಯಸಿದೆ? ಸರ್ಕಾರದ ನಿಲುವೇನು? ಈ ಒಟ್ಟು ವಿದ್ಯಮಾನಗಳನ್ನು ಇಲ್ಲಿ ಅವಲೋಕಿಸಿದ್ದಾರೆ

ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್

ರಾಜ್ಯಾದ್ಯಂತ ಕರ್ನಾಟಕದ ವಿದ್ಯುತ್ ಬಳಕೆದಾರರು ನಾಲ್ಕು ವಿದ್ಯುತ್ ಸರಭರಾಜು ಕಂಪನಿಗಳ ಮುಂದೆ ಬೃಹತ್ ಪ್ರದರ್ಶನಗಳನ್ನು ನಡೆಸಿ ವಿದ್ಯುತ್ ದರ ಏರಿಕೆ ಹಾಗೂ ಖಾಸಗೀಕರಣಕ್ಕೆ ತಮ್ಮ ಪ್ರಭಲ ಪ್ರತಿರೋಧವನ್ನು ಸೂಚಿಸಿದ್ದಾರೆ. ಈ ಹೋರಾಟಗಳಲ್ಲಿ ಅನೇಕ ರೀತಿಯ ವಿದ್ಯುತ್ ಬಳಕೆದಾರರು ಪಾಲ್ಗೊಂಡಿದ್ದಾರೆ. ರೈತ ಸಮುದಾಯ ಪ್ರಧಾನವಾಗಿ ಈ ಹೋರಾಟ ಪ್ರತಿಭಟನೆಗಳಲ್ಲಿ ಇದ್ದರೂ ಗೃಹ ಬಳಕೆದಾರರು, ವಿದ್ಯುತ್ ಮಗ್ಗಗಳ ನೇಕಾರರು, ಕೈಮಗ್ಗ ನೇಕಾರರು, ಕಾರ್ಮಿಕರು, ಯುವಜನರು, ವಿದ್ಯಾರ್ಥಿಗಳು, ಮಹಿಳೆಯರು ಹೀಗೆ ವಿವಿಧ ವಿದ್ಯುತ್ ಬಳಕೆದಾರರ ವಿಭಾಗಗಳು, ಜನ ಸಮುದಾಯ ಈ ಪ್ರತಿಭಟನೆಗಳಲ್ಲಿ ಪಾಲ್ಗೊಂಡು ತಮ್ಮ ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಈ ಪ್ರತಿಭಟನೆಗಳಿಗೆ ಪೂರ್ವಭಾವಿ ಯಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸಭೆಗಳು ಸಮಾವೇಶಗಳು, ಜಾತಾಗಳು ಫೆಬ್ರವರಿ ತಿಂಗಳಿಡೀ ನಡೆದಿವೆ. ಹೀಗೆ ಇಡೀ ಫೆಬ್ರವರಿ ತಿಂಗಳ ಮೊದಲ ವಾರದಿಂದ ಮಾರ್ಚ್ ತಿಂಗಳ ಮೊದಲ ವಾರದವರೆಗೆ ಕರ್ನಾಟಕದ ಜನತೆ ತಮ್ಮ ವಿರೋಧದ ಅಭಿವ್ಯಕ್ತಿಯಲ್ಲಿ ತೊಡಗಿದ್ದಾರೆನ್ನಬಹುದು. ಆದರೆ, ಅದಕ್ಕೆ ಮೊದಲಿನಿಂದಲೂ ಮತ್ತು ನಂತರವೂ ಅನೇಕ ಕಡೆ ಸ್ವಯಂ ಸ್ಫೂರ್ತಿಯಿಂದ ರೈತ ಸಮುದಾಯ ಹೋರಾಟಗಳಲ್ಲಿ ತೊಡಗಿದೆ.

ಈ ಹೋರಾಟಗಳು ಮತ್ತು ಪ್ರತಿಭಟನೆಗಳ ಪರಿಣಾಮವಾಗಿ ಮಾರ್ಚ್ 10 ರಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಪ್ರಕಟಿಸಿದ ವಿದ್ಯುತ್ ದರ ಏರಿಕೆ ಆಜ್ಞೆಯಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಕೋರಿದ್ದ ಶೇ. 10ರ ಬದಲಾಗಿ ಶೇ. 2 ರಷ್ಟು ದರ ಏರಿಕೆ ಮಾಡಿದ್ದಾರೆ ಭಾಗ್ಯಜ್ಯೋತಿ ಮನೆಗಳಿಗೆ ತಿಂಗಳಿಗೆ 50 ರೂ.ದರ ಏರಿಕೆ ಸೂಚಿಸಿದ್ದನ್ನು ನಿರಾಕರಿಸಿ ಹಿಂದಿನ ದರವಾದ 30 ರೂ.ನಲ್ಲಿಯೇ ಉಳಿಸಲಾಗಿದೆ. ಹಾಗೆಯೇ ಗೃಹಬಳಕೆದಾರರಲ್ಲಿ 100 ಯೂನಿಟ್‌ಗಳವರೆಗೆ ವಿದ್ಯುತ್ ಬಳಸುವವರನ್ನು ಒಂದೇ ಗುಂಪಿಗೆ ಹಾಕಿ ದಿಡೀರನೆ ಸರಿಸುಮಾರು ಎರಡುಪಟ್ಟು ದರ ಏರಿಕೆಯನ್ನು ಮಾಡಲು ನೀಡಿದ್ದ ಸೂಚನೆಯನ್ನು ನಿಯಂತ್ರಣ ಆಯೋಗ ತಳ್ಳಿಹಾಕಿದೆ.

ಬಬೆರೆ ವಿಭಾಗಗಳಿಗೂ ಹೆಚ್ಚಿನ ದರ ಏರಿಕೆ ಹೊರೆ ಕಡಿಮೆಯಾಗಿರುವುದು ಕೂಡ ಈ ಹೋರಾಟದ ಫಲವಾಗಿದೆ.

ಜಲವಿದ್ಯುತ್‌ಗೆ ಬದಲಾಗಿ ಖಾಸಗೀ ವಿದ್ಯುತ್ ಖರೀದಿಗೆ ಹುನ್ನಾರ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿ ದರ ಏರಿಕೆಗೆ ಕಾರಣವೇ ಇಲ್ಲವೆಂಬ ಬಗ್ಗೆ ತನ್ನ ವಾದವನ್ನು ವಿದ್ಯುತ್ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ) ಮುಂದೆ ಫೆಬ್ರವರಿ 19 ರಂದು ಮಂಡಿಸಿತ್ತು. 2003 ಹಾಗೂ 2004 ರಲ್ಲಿ ಕರ್ನಾಟಕದಲ್ಲಿ ಜಲವಿದ್ಯುತ್ ಲಭ್ಯತೆ ತೀವ್ರ ಬರಗಾಲದಿಂದ ಪೀಡಿತವಾಗಿದ್ದ 2002 ಕ್ಕಿಂತ ಬಹಳ ಹೆಚ್ಚು ಜಲ ವಿದ್ಯುತ್ ದೊರೆಯುವ ಸಾಧ್ಯತೆ ಇದ್ದರೂ 2002 ರಲ್ಲಿ ಉತ್ಪಾದನೆಯಾದಷ್ಟು ಮಾತ್ರವೇ ಈ ವರ್ಷವೂ ಸಿಗುತ್ತದೆಂದು ಕೆ.ಪಿ.ಟಿ.ಸಿ.ಎಲ್ ಅಂದಾಜಿಸಿದೆ. ಇದು ಸ್ಪಷ್ಟವಾಗಿ ದುರುದ್ದೇಶದಿಂದ ಕೂಡಿದೆ. 2002 ರಲ್ಲಿ ಇದ್ದ ಬರಗಾಲದ ಪರಿಸ್ಥಿತಿಯೇ ಮುಂದಿನ ಎರಡು ವರ್ಷಗಳಲ್ಲಿ ಮುಂದುವರಿಯಬೇಕು. ಹೀಗಾಗಿ ಜಲ ವಿದ್ಯುತ್ ಲಭ್ಯತೆ ಕಡಿಮೆ ಇದೆ ಎಂಬ ನೆಪದ ಮೇಲೆ ಖಾಸಗಿ ವಿದ್ಯುತ್ ಕಂಪನಿಗಳಿಂದ ದುಭಾರಿ ವೆಚ್ಚದ ವಿದ್ಯುತ್ ಕೊಳ್ಳಲು ಅನುಕೂಲವಾಗುತ್ತದೆ ಎನ್ನುವ ದುರಾಲೋಚನೆ ಕೆ.ಪಿ.ಟಿ.ಸಿ.ಎಲ್.ನ ಆಡಳಿತ ವರ್ಗಕ್ಕೆ ಇದೆ. ಅದರಿಂದಾಗಿ ಅವರು ಸರಾಸರಿ ಮಳೆಯಾದ ವರ್ಷಗಳಲ್ಲಿ ಉತ್ಪನ್ನವಾಗುವ ಜಲವಿದ್ಯುತ್ ಸಾಮಾನ್ಯವಾಗಿ 950 ರಿಂದ 1000 ಕೋಟಿ ಯೂನಿಟ್ ಗಳವರೆಗೆ ತಯಾರಾಗುತ್ತಿದ್ದರೆ, ಕೆ.ಪಿ.ಟಿ.ಸಿ.ಎಲ್. ಕೇವಲ 643 ಕೋಟಿ ಯೂನಿಟ್‌ಗಳಷ್ಟು ಮಾತ್ರ ಲಭ್ಯವಾಗುತ್ತದೆ ಎಂದು ಅಂದಾಜಿಸಿದ್ದಾರೆ ಮತ್ತು ಆ ಮೂಲಕ 209 ಕೋಟಿ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಖಾಸಗಿ ಕಂಪನಿಗಳಿಂದ ಖರೀದಿಸುವ ಯೋಚನೆ ಮಾಡಿದ್ದಾರೆ. ಇದು ಹಿಂದಿನ ವರ್ಷಗಳಲ್ಲಿ ಖಾಸಗಿ ಉತ್ಪಾದಕರಿಂದ ಖರೀದಿಸಿದ ವಿದ್ಯುತ್‌ಗಿಂತ 3-4 ಪಟ್ಟು ಹೆಚ್ಚಾಗಿದೆ. ಸರಾಸರಿಯಾಗಿ 50 ಪೈಸೆಗೆ ದೊರಕುವ ಜಲ ವಿದ್ಯುತ್‌ಗೆ ಬದಲಾಗಿ 4 ರೂ.ನಿಂದ 5 ರೂ.ವರೆಗೆ ವೆಚ್ಚವಾಗುವ ಖಾಸಗೀ ವಿದ್ಯುತ್ತನ್ನು ಖರೀದಿಸಲು ಹಾಗೂ ಆ ಮೂಲಕ ಖಾಸಗೀ ಉತ್ಪಾದಕರಿಗೆ ದುರ್ಲಾಭವನ್ನು ಒದಗಿಸಿಕೊಡಲು ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳು ಹೊಂಚುಹಾಕಿದ್ದಾರೆ. (ಇದರಲ್ಲಿ ಯಾರ್ಯಾರಿಗೆ ಯಾವ್ಯಾವ ರೂಪದಲ್ಲಿ ಏನೇನು ಗಿಟ್ಟುತ್ತದೆಯೋ ಯಾರು ಬಲ್ಲರು?) ಈ ರೀತಿ ಖಾಸಗೀ ಉತ್ಪಾದಕರಿಂದ ದುಬಾರಿ ವಿದ್ಯುತ್ತನ್ನು ಹೆಚ್ಚು ಕೊಳ್ಳುವುದಕ್ಕಾಗಿಯೇ ಕೆ.ಪಿ.ಟಿ.ಸಿ.ಎಲ್. ಹಾಗೂ ವಿದ್ಯುತ್ ಸರಭರಾಜು ಕಂಪನಿಗಳು ಒಟ್ಟುಗೂಡಿ ದರ ಏರಿಕೆ ಮಾಡಲು ಉದ್ದೇಶಿಸಿದ್ದಾರೆ ಎಂದು ಸಿಪಿಐ(ಎಂ) ವಾದಿಸಿತ್ತು. ಕೆ.ಪಿ.ಟಿ.ಸಿ.ಎಲ್. ಸೂಚಿಸಿದ್ದ ವಿದ್ಯುತ್ ಖರೀದಿ ಪ್ರಸ್ತಾವಕ್ಕೆ ಬದಲಾಗಿ ಒಂದು ಪರ್ಯಾಯ ಯೋಜನೆಯನ್ನೇ ಸೂಚಿಸಿತ್ತು.

ಕರ್ನಾಟಕದ ಜನತೆ ಕೆ.ಪಿ.ಟಿ.ಸಿ.ಎಲ್. ಮತ್ತೆ ಪರಿಶೀಲನಾ ಅರ್ಜಿ ಸಲ್ಲಿಸುವುದನ್ನು ಹಾಗೂ ಮೀಟರೀಕರಣ ಮತ್ತು ಖಾಸಗೀಕರಣಗಳನ್ನು ಸೋಲಿಸಲು ತಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಬೇಕಾಗಿದೆ.

ಸಿಪಿಐ(ಎಂ)ನ ಈ ವಾದವನ್ನು ಎತ್ತಿ ಹಿಡಿದ ವಿದ್ಯುತ್ ನಿಯಂತ್ರಣ ಆಯೋಗ ಜಲ ವಿದ್ಯುತ್ ಲಭ್ಯತೆಯನ್ನು ಅಂದಾಜು ಮಾಡುವಲ್ಲಿ 10 ವರ್ಷಗಳ ಸರಾಸರಿಯನ್ನು ತೆಗೆದುಕೊಳ್ಳಬೇಕೆಂದು ಆ ಮೂಲಕ ಜಲ ವಿದ್ಯುತ್ ಖರೀದಿಯನ್ನು ಹೆಚ್ಚಿಸಿ ಖಾಸಗೀ ಕಂಪನಿಗಳ ವಿದ್ಯುತ್ ಖರೀದಿಯನ್ನು ಕಡಿಮೆ ಮಾಡಲು ಕೆ.ಇ.ಆರ್.ಸಿ. ಸೂಚಿಸಿದೆ. ಇದರಿಂದಾಗಿ ವಿದ್ಯುತ್ ಖರೀದಿ ವೆಚ್ಚ ಕಡಿಮೆಯಾಗಲು ಹಾಗೂ ವಿದ್ಯುತ್ ದರ ಏರಿಕೆಯ ಸೂಚನೆಯನ್ನು ಕಡಿತಗೊಳಿಸಲು ಸಾಧ್ಯವಾಗಿದೆ.



ಪ್ರತಿಭಟನೆ ಮಹಾಪೂರ
ಮಣಿಯಲೇಬೇಕಾಯ್ತು ಸರಕಾರ

ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರದ ಬಡವರ ಮನೆಗಳಲ್ಲಿ ಕೇವಲ ವಿದ್ಯುತ್ ದ್ವೀಪಗಳ ಬಳಕೆಗೆ ಮಾತ್ರ ವಿದ್ಯುತ್ತನ್ನು ಬಳಸುವ ಜನಸಾಮಾನ್ಯರು ಸರಾಸರಿ 26 ಯೂನಿಟ್‌ಗಳನ್ನು ಮಾತ್ರ ಬಳಸುತ್ತಾರೆ. ಅದರಲ್ಲಿಯೂ ಕೇವಲ 14 ಯೂನಿಟ್‌ಗಳನ್ನು ಮಾತ್ರ ಬಳಸುವ ಮದುಗಿರಿ ವಿದ್ಯುತ್ ವಿಭಾಗದಂತಹ ಅತ್ಯಂತ ಹಿಂದುಳಿದ ಅನೇಕ ವಿಭಾಗಗಳು ಇವೆ.

ಒಂದು ತಿಂಗಳಿಗೆ 200 ಯೂನಿಟ್‌ಗಳಿಂದ 400 ಯೂನಿಟ್‌ಗಳವರೆಗೂ ವಿದ್ಯುತ್ ಬಳಸುವ ನಗರದ ಮಧ್ಯಮ ಮತ್ತು ಮೇಲ್ವರ್ಗಗಳ ಮನೆಗಳೆಲ್ಲಿ? ಇವರೆಲ್ಲಿ? ಇಂತಹ ಸನ್ನಿವೇಶದಲ್ಲಿ ಇವರನ್ನು 10 ಯೂನಿಟ್ ವಿದ್ಯುತ್ ಬಳಸುವವರ ಜೊತೆಗೆ ಸೇರಿದ ಅವರಿಗೆ ಹಾಕುವ ದರವನ್ನೇ ಇವರ ಮೇಲೆ ಏರುವ ಕೆ.ಪಿ.ಟಿ.ಸಿ.ಎಲ್ ಉದ್ದೇಶದ ಬಗ್ಗೆ ಅಂಕಿಅಂಶಗಳ ಸಮೇತವಾಗಿ ಸಿಪಿಐ(ಎಂ) ತನ್ನ ವಾದವನ್ನು ಮಂಡಿಸಿತ್ತು. ಇದನ್ನು ಕೂಡ ವಿದ್ಯುತ್ ನಿಯಂತ್ರಣ ಆಯೋಗ ಎತ್ತಿಹಿಡಿದಿದೆ. 30 ಯೂನಿಟ್‌ಗಿಂತ ಕಡಿಮೆ ವಿದ್ಯುತ್ ಬಳಸುವ ಒಂದು ಗುಂಪನ್ನು ಪ್ರತ್ಯೇಕವಾಗಿ ಲೈಫ್‌ಲೈನ್ ಎಂಬ ವಿಭಾಗವಾಗಿ ಪರಿಗಣಿಸಿರುವುದನ್ನು ಉಳಿಸಿಕೊಳ್ಳಬೇಕೆಂದು ವಿದ್ಯುತ್ ನಿಯಂತ್ರಣ ಆಯೋಗ ನಿರ್ದೇಶಿಸಿದೆ.

ಪ್ರಾದೇಶಿಕ ಅಸಮಾನತೆಯನ್ನು ಪರಿಗಣಿಸಬೇಕು

ಆದರೆ, ವಿದ್ಯುತ್ ನಿಯಂತ್ರಣ ಆಯೋಗ ರಾಜ್ಯದಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ಮತ್ತು ಅಭಿವೃದ್ಧಿ ಪ್ರಕ್ರಿಯೆಯ ಜೀವಾಳವಾದ ವಿದ್ಯುತ್ತಿನ ಅಗತ್ಯವನ್ನು ಗಮನಿಸದೆ, ವಿದ್ಯುತ್ತಿನ ಪ್ರಾದೇಶಿಕ ಹಂಚಿಕೆಯಲ್ಲಿ ಇರುವ ಅತೀವ ಅಸಮತೋಲನವನ್ನು ಗಣನೆಗೆ ತೆಗೆದುಕೊಳ್ಳದೇ ರಾಜ್ಯದ ಎಲ್ಲಾ ಭಾಗಗಳಿಗೂ ಒಂದೇ ದರವನ್ನು ನಿಗದಿ ಮಾಡಿದೆ. ಇದು ಪ್ರಾದೇಶಿಕ ಅಸಮಾನತೆಯನ್ನು ಹಾಗೆಯೇ ಉಳಿಸುತ್ತದೆ ಮಾತ್ರವಲ್ಲ ಮತ್ತಷ್ಟು ಹೆಚ್ಚಿಸುವ ಸಾಧನವಾಗುತ್ತದೆ. ಇದನ್ನು ಕೆ.ಪಿ.ಟಿ.ಸಿ.ಎಲ್. ಹಾಗೂ ಕರ್ನಾಟಕ ಸರ್ಕಾರ ಮನಗಂಡು ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆಂದು ಒಂದು ವಿಶೇಷ ಯೋಜನೆಯನ್ನು ರೂಪಿಸಬೇಕು. ಅದೇ ರೀತಿ ಭಾಗ್ಯಜ್ಯೋತಿ ಹಾಗೂ ನೀರಾವರಿ ಪಂಪ್‌ಸೆಟ್‌ಗಳಿಗೆ 2002 ರ ದರಗಳನ್ನು ಹಾಗೆಯೇ ಉಳಿಸಿದ್ದೇವೆ ಎನ್ನುವುದು ಪರಿಹಾರವಾಗದು. ಕೃಷಿಯ ಬಿಕ್ಕಟ್ಟಿನಿಂದ ಹಾಗೂ ಬೆಲೆಗಳ ಕುಸಿತದಿಂದ ಕೂಲಿಕಾರರಿಗೆ ದುಡಿಮೆಯ ದಿನಗಳ ಕುಗ್ಗುವಿಕೆಯಿಂದ ಬಳಲುತ್ತಿರುವ ರೈತರು ಮತ್ತು ಕೂಲಿಕಾರರಿಗೆ ಹೆಚ್ಚಿನ ಪರಿಹಾರ ಒದಗಿಸಲು ಬೆಲೆಗಳನ್ನು ವರ್ಷಕ್ಕೆ ಒಂದು ಹೆಚ್.ಪಿ.ಗೆ (ಹಾರ್ಸ್ ಪವರ್) 300 ರೂ ಮತ್ತು ಭಾಗ್ಯಜ್ಯೋತಿ ಮಾಸಿಕ 10 ರೂ.ಗಳಿಗೆ ಇಳಿಸಬೇಕಾಗಿದೆ.

ಮತ್ತೆ ವಿದ್ಯುತ್ ದರ ಏರಿಕೆಗೆ ಕೆ.ಪಿ.ಟಿ.ಸಿ.ಎಲ್. ಅರ್ಜಿ

ಖಾಸಗೀ ವಿದ್ಯುತ್ ಉತ್ಪಾದಕರಿಂದ ದುಬಾರಿ ವಿದ್ಯುತ್ ಖರೀದಿಸಿ ಅದನ್ನು ವಿದ್ಯುತ್ ದರ ಏರಿಕೆಯ ಮೂಲಕ ಬಳಕೆದಾರರಿಂದ ಕಸಿಯಲು ಮಾಡಿದ ಸಂಚು ವಿಫಲವಾಯಿತೆನ್ನುವ ಕೋಪದಿಂದ ಕುದಿಯುತ್ತಿರುವ ಕೆ.ಪಿ.ಟಿ.ಸಿ.ಎಲ್. ಮತ್ತೆ ವಿದ್ಯುತ್ ದರ ಏರಿಕೆಗೆ ಪರಿಶೀಲನಾ ಅರ್ಜಿ ಸಲ್ಲಿಸಬೇಕೆಂದು ಯೋಚಿಸುತ್ತಿದೆ ಎಂಬ ವರದಿಗಳು ಬಂದಿವೆ. ಈ ಯೋಚನೆಗೆ ತಕ್ಷಣವೇ ತಡೆ ಹಾಕುವ ಯಾವುದೇ ಪ್ರಯತ್ನ ಮಾಡದ ಕರ್ನಾಟಕ ಸರ್ಕಾರ ವಿಧಾನಸಭೆಯಲ್ಲಿ ಅದು ಕೆ.ಪಿ.ಟಿ.ಸಿ.ಎಲ್.ಗೆ ಬಿಟ್ಟಿದ್ದು ಎಂದು ತನ್ನ ಹೊಣೆಯಿಂದ ಜಾರಿಸಿಕೊಳ್ಳುವ ಪ್ರಯತ್ನ ಮಾಡಿದೆ. ಜೊತೆಗೆ ವಿಧಾನ ಮಂಡಲದ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರ ಭಾಷಣದ ಮೂಲಕ ಎಲ್ಲ ವಿದ್ಯುತ್ ಸಂಪರ್ಕಗಳ ಮೀಟರೀಕರಣ ಆಗಲೇಬೇಕೆಂದು ಕರ್ನಾಟಕ ಸರ್ಕಾರ ಪ್ರತಿಪಾದಿಸಿದೆ. ವಿದ್ಯುತ್ ಸರಬರಾಜು ಕಂಪನಿಗಳ ಖಾಸಗೀಕರಣಕ್ಕೆ ಆತುರಾತುರದ ಪ್ರಯತ್ನಗಳನ್ನು ನಡೆಸುತ್ತಿದೆ. ಕರ್ನಾಟಕದ ಜನತೆ ಕೆ.ಪಿ.ಟಿ.ಸಿ.ಎಲ್. ಮತ್ತೆ ಪರಿಶೀಲನಾ ಅರ್ಜಿ ಸಲ್ಲಿಸುವುದನ್ನು ಹಾಗೂ ಮೀಟರೀಕರಣ ಮತ್ತು ಖಾಸಗೀಕರಣಗಳನ್ನು ಸೋಲಿಸಲು ತಮ್ಮ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಬೇಕಾಗಿದೆ.

ಮುಂಬರುವ ಚುನಾವಣೆಗಳಿಗಾಗಿ ಸಂಘ ಪರಿವಾರ ವ್ಯಾಪಕವಾದ ಪೂರ್ವ ಸಿದ್ಧತೆ ಆರಂಭಿಸಿದೆ. ಬಿಜೆಪಿ ಸಂಸತ್ತಿನಲ್ಲಿ ಬಹುಮತ ಪಡೆಯುವುದು ಅದರ ಗುರಿ. ಈ ಕೋಮುವಾದಿ ಅಕ್ಟೋಪಸ್‌ನ ಸಾವಿರಾರು ಬಾಹುಗಳು ಎತ್ತೆತ್ತ ಚಾಚಿವೆ? ಏನನ್ನು ಬಾಚುತ್ತಿವೆ.... ಓದಿ..

ಕೇಸರಿ ಹದ್ದು ರೆಕ್ಕೆ ಬಿಚ್ಚುತ್ತಿದೆ ನೋಡಿ !

ಈ ವಾರದಲ್ಲಿ ಕಂಡುಬಂದ ವಿವಿಧ ಬೆಳವಣಿಗೆಗಳನ್ನು ನೋಡಿದರೆ ಕೆಲವು ಮುಖ್ಯ ರಾಜ್ಯಗಳಲ್ಲಿ ಸದ್ಯಕ್ಕೆ ಬರಲಿರುವ ಚುನಾವಣೆಗಳು ಮತ್ತು ಮುಂದಿನ ವರ್ಷದ ಸಾರ್ವತ್ರಿಕ ಚುನಾವಣೆಗಳಿಗೆ ಸಿದ್ಧತೆಯಾಗಿ ಕೋಮುರೆಕ್ಕೆಗಳನ್ನು ಬಿಚ್ಚುವ ಒಂದು ವ್ಯವಸ್ಥಿತ ಪ್ರಯತ್ನವನ್ನು ಕಾಣಬಹುದು.

ಈ ಪಟ್ಟಿಯಲ್ಲಿ ಮೊದಲು ಇರುವುದು ಗೋ ರಕ್ಷಣೆಯ ಬೇಡಿಕೆ. ಹೂತುಹೋಗಿದ್ದ ಈ ಬೇಡಿಕೆಯನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ. ಪ್ರಧಾನ ಮಂತ್ರಿಗಳೇ ಈ ಆರ್ ಎಸ್.ಎಸ್ ಚೆಂಡೆ ಮದ್ದಳೆಯ ಸೂತ್ರದಾರರಾಗಿದ್ದಾರೆ. ಅಖಿಲ ಭಾರತ ಗೋಹತ್ಯಾ ನಿಷೇಧ ಕಾನೂನು ತರಬೇಕೆಂದು ಒಂದು ಖಾಸಗೀ ಸದಸ್ಯರ ಮೂಲಕ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ.



ಘಸಲು ಪಡೆವ ಯತ್ನ

1966 ರ ಉತ್ತರಾರ್ಧದಲ್ಲಿ "ಸಾಧು"ಗಳು ಈ ಬೇಡಿಕೆಗಳ ಮೇಲೆ ನವದೆಹಲಿಯನ್ನು ನುಗ್ಗಿ ಗಲಭೆ ಎಬ್ಬಿಸಿದರು, ಅದರಿಂದಾಗಿ ಪೋಲೀಸ್ ಗೋಲಿಬಾರು ನಡೆಯಿತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು. ಇದರ ಫಲವಾಗಿ ಬಿಜೆಪಿಯ ಹಿಂದಿನ ಅವತಾರವಾದ ಜನಸಂಘ ಮೊತ್ತಮೊದಲ ಬಾರಿಗೆ ದಿಲ್ಲಿಯಿಂದ ಲೋಕಸಭಾ ಸ್ಥಾನಗಳನ್ನು ಗಿಟ್ಟಿಸಿತು. 1967 ರಲ್ಲಿ ಅಲ್ಲಿನ ನಗರಸಭೆ ಅದರ ಹತೋಟಿಗೆ ಬಂತು. ದೇಶಾದ್ಯಂತವೂ ಕಾಂಗ್ರೆಸ್‌ನ ಜನ-ವಿರೋಧಿ ಧೋರಣೆಗಳಿಂದಾಗಿ ಉಂಟಾದ ಸಾಮಾಜಿಕ ಅತೃಪ್ತಿಯ ಪ್ರಯೋಜನ ಪಡೆದು ಜನಸಂಘ ಕೆಲವು ರಾಜ್ಯಗಳಲ್ಲಿ ಪ್ರತಿಪಕ್ಷಗಳ ಸಮ್ಮಿಶ್ರ ಸರಕಾರಗಳನ್ನು ಸೇರಿಕೊಂಡಿತು. ಬಿಜೆಪಿ ಈಗ ಮತ್ತೆ ಅಂತಹುದೇ "ಘಸಲು" ಪಡೆಯುವ ಪ್ರಯತ್ನದಲ್ಲಿದೆ ಎಂಬುದು ಸ್ಪಷ್ಟ.

ಭಾರತೀಯ ಸಂವಿಧಾನದ ಪ್ರಕಾರ ಇಂತಹ ಯಾವುದೇ ಕಾನೂನು ಮಾಡುವ ಅಧಿಕಾರ ರಾಜ್ಯ ವಿಧಾನಸಭೆಗಳಿಗೆ ಮಾತ್ರ ಇರುವುದು. ಹಲವು ರಾಜ್ಯಗಳಲ್ಲಿ ಈಗಾಗಲೇ ಇಂತಹ ಕಾನೂನುಗಳಿವೆ. ಈ ಬಗ್ಗೆ ಕೇಂದ್ರ ಶಾಸನ ತರಬೇಕಾದರೆ ಸಂವಿಧಾನದ ತಿದ್ದುಪಡಿಯಾಗಬೇಕು. ಇದು ಸಂವಿಧಾನದ ಒಕ್ಕೂಟ ತತ್ವಕ್ಕೆ, ಅದರ ಆಶಯಕ್ಕೆ ಒಂದು ಆಘಾತ. ನಿಜ ಸಂವಿಧಾನದ ನಿರ್ದೇಶಕ ಸೂತ್ರಗಳ 48ನೇ ಕಲಮು ಗೋವಧೆಗಳನ್ನು ನಿಷೇಧಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದಿದೆ ಆದರೆ ನಿರ್ದೇಶನದ ಸೂತ್ರಗಳು ಯಾರ್ಯಾರು ಯಾವ ಶಾಸನ ರಚಿಸಬಹುದು ಎಂಬ ಪಟ್ಟಿಯನ್ನು ಬದಲಿಸಬೇಕೆಂದು ಅಂದರೆ ಶಾಸನ ರಚಿಸಲು ರಾಜ್ಯ ವಿಧಾನ ಸಭೆಗಳ ಅಧಿಕಾರವನ್ನು ಬದಲಿಸಬೇಕೆಂದೇನೂ ಹೇಳಿಲ್ಲ,

ಗೋರಕ್ಷಕರೋ, ಗೋಹತ್ಯಾಕಾರರೋ?

ಕಾನೂನಿನ ಪ್ರಕಾರ ಇದು ಸಾಧ್ಯವಿಲ್ಲ ಮಾತ್ರವಲ್ಲ ಭಾರತೀಯ ಜನಗಳ ಆಹಾರ ಪದ್ಧತಿಯನ್ನು ಸಂಸತ್ತು ನಿರ್ಧರಿಸಲು ಸಾಧ್ಯವಿಲ್ಲ, ಗೋಪೂಜೆ ಮಾಡುವವರು ತಮ್ಮ ಭಾವನೆಗಳನ್ನು ಇಟ್ಟುಕೊಳ್ಳಲು ಸ್ವಾಗತವಿದೆ. ದೇಶದ ಕಾನೂನು ಇದನ್ನು ರಕ್ಷಿಸುತ್ತದೆ. ಅದೇ ಕಾನೂನು ಈ ಭಾವನೆಗಳನ್ನು ಒಪ್ಪದವರ ಹಕ್ಕುಗಳನ್ನು ರಕ್ಷಿಸುತ್ತದೆ.

ಸಂವಿಧಾನಾತ್ಮಕ ಕಾನೂನು ಬದ್ಧತೆಯ ಅಥವಾ ಶಾಸನ ರಚಿಸುವ ಅಧಿಕಾರದ ಪ್ರಶ್ನೆ ಅಲ್ಲ ಎಂಬುದು ಸ್ಪಷ್ಟ. ಇದರ ಉದ್ದೇಶ ರಾಜಕೀಯ ಚುನಾವಣಾ ಉದ್ದೇಶಗಳಿಗೆ ಜನರ ಭಾವನೆಗಳನ್ನು ದುರುಪಯೋಗಪಡಿಸಿಕೊಳ್ಳುವುದು. ತಮಾಷೆಯ ಸಂಗತಿಯೆಂದರೆ ಈ ಸ್ವಯಂಘೋಷಿತ ಗೋರಕ್ಷಕರೇ ತಮ್ಮ ಆರ್ಥಿಕ ನೀತಿಗಳಿಂದಾಗಿ ಗೋಹತ್ಯಾಕಾರರಾಗಿದ್ದಾರೆ. ದೇಶದೊಳಗೆ ಕೃಷಿ ಉತ್ಪನ್ನಗಳ ಬೇಕಾಬಿಟ್ಟಿ ಆಮದಿಗೆ ಈ ವಾಜಪೇಯಿ ಸರಕಾರ ಅವಕಾಶ ಮಾಡಿಕೊಟ್ಟಿದೆ. ಇದು ಇಲ್ಲಿ ಗೋಪಾಲನೆಯಲ್ಲಿ ತೊಡಗಿದವರ

ಪುಟ 10 ಕ್ಕೆ

ಫೆಬ್ರವರಿ 26 ರಂದು ದೆಹಲಿಯಲ್ಲಿ ಕಾರ್ಮಿಕರ ಐತಿಹಾಸಿಕ ರ್‍ಯಾಲಿ

ಭಾರತದ ಮೂಲೆ ಮೂಲೆಗಳಿಂದ ನವದೆಹಲಿಯಲ್ಲಿ ಪಾರ್ಲಿಮೆಂಟ್ ಚಲೋ ರ್‍ಯಾಲಿಯಲ್ಲಿ ಫೆ.26 ರಂದು ವಿವಿಧ ಕಾರ್ಮಿಕ ಸಂಘಟನೆಗಳಿಂದ ಬಂದ ಲಕ್ಷಾಂತರ ಕಾರ್ಮಿಕರು ಒಕ್ಕೊರಲಿನಿಂದ ಗುಡುಗಿದರು "ಆರ್ಥಿಕ ನೀತಿ ಬದಲಾಯಿಸಿ", "ಕಾಂಟ್ರಾಕ್ಟ್ ಪದ್ಧತಿ ಕೊನೆಗೊಳ್ಳಲಿ", "ನಿರುದ್ಯೋಗಕ್ಕೆ ಪರಿಹಾರ ಬೇಕೆ ಬೇಕು", "ದೇಶವನ್ನು ಹಂತ ಹಂತವಾಗಿ ಮಾರುವುದನ್ನು ನಿಲ್ಲಿಸಿ", ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳಂತೆ ಸುಮಾರು 3 ಲಕ್ಷ ಕಾರ್ಮಿಕರು ಸಿಐಟಿಯು, ಎಐಟಿಯುಸಿ, ಐಎನ್‌ಟಿಯುಸಿ, ಎಚ್‌ಎಂಎಸ್, ಎಐಸಿಸಿಟಿಯು, ಯುಟಿಯುಸಿ, ಯುಟಿಯುಸಿ (ಎಲ್‌ಎಸ್), ಟಿಯುಸಿಸಿ, ಅಲ್ಲದೇ ರೈಲ್ವೇ, ಬ್ಯಾಂಕ್, ಇನ್ಶೂರೆನ್ಸ್, ಡಿಫೆನ್ಸ್, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಿ ನೌಕರರ ಸಂಘಗಳ ಸದಸ್ಯರು ಭಾಗವಹಿಸಿದ್ದರು. ಅಲ್ಲದೆ ಎಚ್‌ಎಂಕೆಪಿಯ ಮುಂಬೈನ ಕಾಮಗಾರ, ಎಐಎಫ್‌ಟಿಯು, ಎಎಫ್‌ಟಿಯು ಕೂಡ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಿ ಭುಜಕ್ಕೆ ಭುಜ ಕೊಟ್ಟು ನಡೆದರು. ಈ ಮಹತ್ತರ ಹೋರಾಟದಲ್ಲಿ ಬಿಎಂಎಸ್, (ಆರ್‌ಎಸ್‌ಎಸ್‌ಗೆ ಅತ್ಯಂತ ಆಪ್ತವಾಗಿರುವ) ಭಾಗವಹಿಸದೇ ಇರುವುದು ಎದ್ದುಕಾಣುತ್ತಿತ್ತು,

ಈ ರ್‍ಯಾಲಿಯನ್ನು ನೋಡಿದ ದೆಹಲಿಗರು ಇಂತಹ ದೊಡ್ಡ ರ್‍ಯಾಲಿಯನ್ನು ಇತ್ತೀಚಿನ ದಿನಗಳಲ್ಲಿ ನಡೆದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಮೆರವಣಿಗೆಯಲ್ಲಿ ಡೋಲು, ತಪ್ಪಡಿ, ಸಂಗೀತ ವಾದ್ಯಗಳನ್ನು ಹೊತ್ತ ಕಾರ್ಮಿಕರು ಮುನ್ನಡೆಯುತ್ತಾ ಮುಂದಿನ ದೇಶವ್ಯಾಪ್ತಿ ಸಾರ್ವತ್ರಿಕ ಮುಷ್ಕರಕ್ಕೆ ಮುಂಚಿತವಾಗಿ ಮಾಡಿದ ತಾಲೀಮಿನಂತೆ ಈ ರ್‍ಯಾಲಿ ನಡೆದಿದೆ. ರ್‍ಯಾಲಿಯಲ್ಲಿ ಭಾಗವಹಿಸಿದ ಕಾರ್ಮಿಕರು ಪಾರ್ಲಿಮೆಂಟಿಗೆ ಹೋಗುವ ಮುನ್ನ ಹಾದಿಯಲ್ಲಿ ಜಂತರ್ - ಮಂತರ್ ತಲುಪುವಷ್ಟರಲ್ಲಿ ಪೋಲೀಸರು ಫ್ಲೈಓವರ್ ದಾಟದಂತೆ ತಡೆಯಲಾಯಿತು.

ಮೇ 21 ದೇಶದಾದ್ಯಂತ ಸಾರ್ವತ್ರಿಕ ಮುಷ್ಕರ

ರ್‍ಯಾಲಿಯಲ್ಲಿ ಕೆಳಗಿನ ಪ್ರಮುಖ ಅಂಶಗಳನ್ನೊಳಗೊಂಡ ಘೋಷಣೆ ಅಂಗೀಕರಿಸಲಾಯಿತು

1. ಲಾಭದಾಯಕವಾದ ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣ ನಿಲ್ಲಲಿ.
2. ಮಾಲೀಕರ ಪರವಾದ ಕಾನೂನು ಪದ್ಧತಿಗಳನ್ನು ಮಾಡಬಾರದು.
3. ಕೃಷಿ ಕಾರ್ಮಿಕರಿಗೆ ಸಮಗ್ರ ಕಾನೂನು ಕೂಡಲೇ ಜಾರಿಯಾಗಬೇಕು.
4. ನಿರುದ್ಯೋಗ ತೀವ್ರವಾಗಿ ಹೆಚ್ಚಿಸುವ ನೀತಿಗಳನ್ನು ತಿರಸ್ಕರಿಸಿರಿ.
5. ಅಸಂಘಟಿತ ಕಾರ್ಮಿಕರನ್ನೊಳಗೊಂಡು ವಿಶಾಲ ಕಾರ್ಮಿಕರನ್ನೊಳಗೊಂಡು ವಿಶಾಲ ಸಾಮಾಜಿಕ ಕಲ್ಯಾಣ ಯೋಜನೆಗಳನ್ನು ಜಾರಿಗೊಳಿಸಬೇಕು.
6. ವಿದೇಶಗಳಿಂದ ಆಮದು ಆಗುವ ಸರಕುಗಳ ಮೇಲೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ಹೇರಬೇಕು.
7. ಬೋನಸ್ಸು ಕಾಯಿದೆಯ ಎಲ್ಲಾ ಮಿತಿಗಳನ್ನು ತೆಗೆಯಬೇಕು.
8. ಭವಿಷ್ಯನಿಧಿ ಠೇವಣಿಗಳ ಮೇಲೆ ಶೇ.12 ಬಡ್ಡಿದರ ನಿಗದಿಯಾಗಬೇಕು.

ಈ ಸಂದರ್ಭದಲ್ಲಿ ಮಾತನಾಡಿದ ಸಿಐಟಿಯು ಪ್ರಧಾನ ಕಾರ್ಯದರ್ಶಿ ಎಂ.ಕೆ.ಪಂದೆಯವರು ಪಾರ್ಲಿಮೆಂಟ್ ಚಲೋ ರ್‍ಯಾಲಿಯಲ್ಲಿ ಭಾಗವಹಿಸಿದ ಲಕ್ಷಾಂತರ ಕಾರ್ಮಿಕರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದರಲ್ಲದೇ ಕೇಂದ್ರ ಸರ್ಕಾರ ತನ್ನ ಜನವಿರೋಧಿ ಕಾರ್ಮಿಕ ವಿರೋಧಿ ನೀತಿಗಳನ್ನು ಬದಲಾಯಿಸದಿದ್ದರೆ ಸರ್ಕಾರದ ವಿರುದ್ಧ ಜನ ದಂಗೆಯೇಳುವ ಪರಿಸ್ಥಿತಿ ಉಂಟಾಗುತ್ತದೆ ಎಂದು ಎಚ್ಚರಿಸಿದರು.

12, ಮಾರ್ಚ್ 2003 ರಂದು ನವದೆಹಲಿಯಲ್ಲಿ ಎಲ್ಲಾ ಕಾರ್ಮಿಕ ಸಂಘಟನೆಗಳ ಮುಖಂಡರು ಸಭೆ ಸೇರಿ ವಿವರವಾದ ಸಮಾಲೋಚನೆಗಳನ್ನು ನಡೆಸಿ ಮುಂದಿನ ಸಾರ್ವತ್ರಿಕ ಮುಷ್ಕರದ ದಿನಾಂಕ ಹಾಗೂ ಕಾರ್ಯಾಚರಣೆಯನ್ನು ತೀರ್ಮಾನಿಸಿದ್ದಾರೆ.

ಮೇ 21 ದೇಶದಾದ್ಯಂತ ಸಾರ್ವತ್ರಿಕ ಮುಷ್ಕರ
ಮೇ 6ಕ್ಕೆ ಸಾಮೂಹಿಕ ಮತಪ್ರದರ್ಶನದ ಮೂಲಕ ನೋಟೀಸ್ ನೀಡಿಕೆ
ಕಾರ್ಮಿಕ ಸಂಘಟನೆಗಳು ಐತಿಹಾಸಿಕ ಕರೆ

ಜನವಿರೋಧಿ, ಕಾರ್ಮಿಕ ವಿರೋಧಿ, ರಾಷ್ಟ್ರ ವಿರೋಧಿ ನೀತಿಗಳ ವಿರುದ್ಧ ಇದೇ ಮೇ 21 ರಂದು ರಾಷ್ಟ್ರದಾದ್ಯಂತ 'ಸಾರ್ವತ್ರಿಕ ಮುಷ್ಕರ'ವನ್ನು ನಡೆಸುವ ಐತಿಹಾಸಿಕ ನಿರ್ಧಾರಕ್ಕೆ ಬರಲಾಗಿದೆ. ಮೇಲಿನ ಬೇಡಿಕೆಗಳಾಧಾರದಲ್ಲಿ ವ್ಯಾಪಕ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿರುವ ಕಾರ್ಮಿಕ ಸಂಘಟನೆಗಳು ಮೇ 6 ರಂದು ಭಾರೀ ಮತಪ್ರದರ್ಶನಗಳ ಮೂಲಕ ಮುಷ್ಕರದ ನೋಟೀಸ್‌ಗಳನ್ನು ನೀಡಲಾಗುವುದು. ದೇಶದ ಜನದ್ರೋಹಿ ಸರ್ಕಾರದ ನೀತಿಗಳನ್ನು ಹಿಮ್ಮೆಟ್ಟಿಸಲು ಈ ಮಹಾ ಮುಷ್ಕರದ ಕರೆಯನ್ನು ಯಶಸ್ವಿಗೊಳಿಸಬೇಕೆಂದು ಎಲ್ಲಾ ಕಾರ್ಮಿಕರಿಗೆ, ಯಾವುದೇ ಬಣಕ್ಕೆ ಸೇರಿದ್ದರೂ ಆ ಎಲ್ಲಾ ಯೂನಿಯನ್‌ಗಳಿಗೆ ಏಳು ಸಂಘಟನೆಗಳ ಮುಖಂಡರು ಮನವಿ ಮಾಡಿದ್ದಾರೆ.

- ಎಸ್.ಪ್ರಸನ್ನ ಕುಮಾರ್



ತ್ರಿಪುರಾದಲ್ಲಿ ಎಡರಂಗ

'ಗುಜರಾತ್ ಮಾದರಿ ಅದೊಂದೇ ದಾರಿ' ಎಂದು ಅಟ್ಟಹಾಸಗೈಯುತ್ತಿದ್ದ ಸಂಘ ಪರಿವಾರಕ್ಕೆ ತಿರುಗೇಟು ನೀಡಿದ್ದಾರೆ, ಸೋಲಿಸಿ ತಿರಸ್ಕರಿಸಿದ್ದಾರೆ ಮತದಾರರು. ಇದು ಆಡಳಿತ ಸರ್ಕಾರದ ವಿರುದ್ಧದ ಮನೋಭಾವ ಎಂದೆಲ್ಲಾ ಹೇಳಿ ಹುಳುಕು ಮುಚ್ಚಲು ಮಾಧ್ಯಮ ಪಂಡಿತರು, ಆಸ್ಥಾನದ ಬುದ್ಧಿಜೀವಿಗಳೂ ತಿಣುಕುತ್ತಿರುವಾಗ ಕಣ್ಣು ಕೋರೈಸುವಂತೆ ಎಲ್ಲಾ ಅಡೆತಡೆ ದಾಟಿ ಸತತವಾಗಿ ಮೂರನೇ ಬಾರಿಗೆ (ಇದು ಒಟ್ಟು ಐದನೆಯದು) ದಿಗ್ವಿಜಯ ಸಾಧಿಸಿದೆ ತ್ರಿಪುರಾದಲ್ಲಿ ಎಡರಂಗ. ಕಾಂಗ್ರೆಸ್ ಮತ್ತು ಭಯೋತ್ಪಾದಕರ ಮೈತ್ರಿ ಕನಸು ನುಚ್ಚುನೂರಾಗಿಸಿದೆ. ವಿಶ್ವದ ಗಮನ ಸೆಳೆದ ದಾಖಲೆಯ ಈ ವಿಜಯ ಸಾಧ್ಯವಾದದ್ದು ಹೇಗೆ? ಅಲ್ಲಿನ ತ್ಯಾಗ, ಬಲಿದಾನದ ವೀರ ಗಾಥೆಯೇನು? ಒಟ್ಟು ಚುನಾವಣೆಗಳ ಫಲಿತಾಂಶ ವಿಶ್ಲೇಷಿಸಿದ್ದಾರೆ ಲೇಖಕರು



ಗುಜರಾತ್ ವಿಧಾನಸಭಾ ಚುನಾವಣೆಯ ನಂತರ ನಾಲ್ಕು ರಾಜ್ಯಗಳಲ್ಲಿ ನಡೆದ ಚುನಾವಣೆ ದೇಶವಿದೇಶಗಳ ಗಮನ ಸೆಳೆದಿತ್ತು. ಗುಜರಾತ್ ಫಲಿತಾಂಶದಿಂದ ಮೈಮರೆತ ಸಂಘಪರಿವಾರಕ್ಕೆ ಕಾಲ ಕೆಳಗಿನ ನೆಲ ಕಾಣುತ್ತಿರಲಿಲ್ಲ. ಗುಜರಾತ್ ಪ್ರಯೋಗ ದೇಶದ ಬೇರೆ ರಾಜ್ಯಗಳಲ್ಲಿ ಪುನರಾವರ್ತನೆಯಾಗುವ ಭಯದಿಂದ ವಿಚಾರವಂತ ಜನತೆ ಚಿಂತೆಗೀಡಾಗಿತ್ತು. ಆದರೆ ಹಿಂದುಗಳೆಲ್ಲಾ 'ಮೋದಿ'ಗಳಲ್ಲ ಎಂಬುದನ್ನು ಹಿಮಾಚಲ ಪ್ರದೇಶ, ತ್ರಿಪುರಾ, ನಾಗಾಲ್ಯಾಂಡ್ ಮತ್ತು ಮೇಘಾಲಯದ ಜನತೆ ಸಾಬೀತುಪಡಿಸಿದೆ. ಗುಜರಾತ್‌ನಿಂದ ಹಿಂದುತ್ವದ ಗಾಳಿ ದೇಶದಾದ್ಯಂತ ಬೀಸುತ್ತಿದೆ ಎಂದು ಬೀಗುತ್ತಿದ್ದ ಬಿಜೆಪಿಗೆ ಈ ನಾಲ್ಕು ರಾಜ್ಯಗಳ ಪ್ರಜ್ಞಾವಂತ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಂತೂ ಆಡಳಿತ ಪಕ್ಷವಾಗಿದ್ದುಕೊಂಡು ಅನುಭವಿಸಿರುವ ಹೀನಾಯ ಸೋಲು ಬಿಜೆಪಿಗೆ ಚೇತರಿಸಿಕೊಳ್ಳಲಾರದಷ್ಟು ಪೆಟ್ಟು ಕೊಟ್ಟಿದೆ. ಅಲ್ಲಿ ಈ ಹಿಂದೆ ಅತ್ಯಂತ ಅಲ್ಪ ಬಹುಮತದಲ್ಲಿ ಹಿಡಿದಿಟ್ಟ ಸರ್ಕಾರವನ್ನು ಉಳಿಸಿಕೊಳ್ಳಲು ಸ್ವತಃ ಪ್ರಧಾನಿ ವಾಜಪೇಯಿ ಧಾವಿಸಿ ಬಂದು ರಾಮ ಮಂದಿರ ನಿರ್ಮಾಣದ ಮಾತನ್ನಾಡಿ ಹಿಂದುತ್ವದ ದಿಗ್ವಿಜಯವನ್ನು ಘೋಷಿಸಿದ್ದರು. ಗೋದ್ರಾ ತಂತ್ರದ ಮುಖ್ಯ ಕಂತ್ರಿ ನರೇಂದ್ರ ಮೋದಿ ಎರಡು ವಾರಗಳ ಕಾಲ ಹಿಮಾಚಲ ಪ್ರದೇಶದಲ್ಲಿ ವಾಸ್ತವ್ಯ ಹೂಡಿದ್ದರೂ ಅವರ ಜಾದೂ ಅಲ್ಲಿ ನಡೆಯಲಿಲ್ಲ. ಮುಖ್ಯಮಂತ್ರಿ ಧುಮಾಲ್ ನೇತೃತ್ವದ ಬಿಜೆಪಿ ಸರ್ಕಾರದ ಸೋಲಿಗೆ ಮತದಾರರ ಆಡಳಿತಾರೂಢ ವಿರೋಧಿ (anti incombancy) ಭಾವನೆಗಳೇ ಕಾರಣವಾಯಿತೆಂದು ಆದ್ವಾನಿಯಂತಹ ಬಿಜೆಪಿ ಹಿರಿಯ ಮುಖಂಡರು ವಿವರಣೆ ನೀಡುತ್ತಿದ್ದಾರೆ. ಈ ವಾದವು ಅತ್ಯಂತ ಅಪಾಯಕಾರಿಯಾಗಿದೆ. ಇದು ಸಾರ್ವಜನಿಕ ಅಭಿಪ್ರಾಯವನ್ನು ದಾರಿ ತಪ್ಪಿಸುತ್ತದೆ. ಒಂದು ಕೆಲಸ ಮಾಡಿದ ಸರ್ಕಾರವನ್ನು ಮೆಚ್ಚುವ ಮತ್ತು ಒಂದು ಕೆಲಸ ಮಾಡದ ಸರ್ಕಾರವನ್ನು ತಿರಸ್ಕರಿಸುವ ಮತದಾರರ ಸಾಮರ್ಥ್ಯವನ್ನು ಅದು ನಿರಾಕರಿಸುತ್ತದೆ. ಪಶ್ಚಿಮ ಬಂಗಾಳದಲ್ಲಂತೂ ಆಡಳಿತಾರೂಢ ಎಡರಂಗವನ್ನು ಅಲ್ಲಿಯ ಜನತೆ ಮತ್ತೆ ಮತ್ತೆ ಅಧಿಕಾರಕ್ಕೆ ತರುತ್ತಿರುವುದು ಅದೊಂದು ವಿಶ್ವ ದಾಖಲೆಯಾಗಿದೆ.

ನಾಲ್ಕು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಮಾತ್ರವಲ್ಲ, ಕರ್ನಾಟಕ, ತಮಿಳುನಾಡು, ಕಾಶ್ಮೀರ, ಮಹಾರಾಷ್ಟ್ರ, ಉತ್ತರ ಪ್ರದೇಶ ಮತ್ತು ಅಸ್ಸಾಂಗಳಲ್ಲಿನ ಏಳು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಗಳಲ್ಲೂ ಮತದಾರರು ಬಿಜೆಪಿಯನ್ನು ತಿರಸ್ಕರಿಸಿರುವುದು ಗಮನಾರ್ಹ. ಕರ್ನಾಟಕದ ಹುಮನಾಬಾದ್ ವಿಧಾನಸಭಾಕ್ಷೇತ್ರದಲ್ಲಿ 1999 ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಿದ್ದ ಬಿಜೆಪಿಯ ಸುಭಾಸ್ ಕಲ್ಲೂರ್ ಚುನಾವಣೆ ತಕರಾರಿನಿಂದ ಸದಸ್ಯತ್ವ ಕಳೆದುಕೊಂಡು ಮರು ಆಯ್ಕೆಗೆ ಸ್ಪರ್ಧಿಸಿದಾಗ ಮತದಾರರಿಂದ ತಿರಸ್ಕರಿಸಲ್ಪಟ್ಟು ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿರುವುದು ಬಿಜೆಪಿಗೆ ಒಂದು ಎಚ್ಚರಿಕೆಯ ಗಂಟೆ! ಹಿಂದುತ್ವದ ಬಲೆಬೀಸಿ ಹಿಂದೂ ಓಟ್ ಬ್ಯಾಂಕ್ ಕಟ್ಟುವ ಅದರ ದುರುದ್ದೇಶಗಳನ್ನು ಈ ದೇಶದ ಬಹುಸಂಖ್ಯಾತ

ನಿತ್ಯಾನಂದಸ್ವಾಮಿ

ಹಿಂದುಗಳು ಯಶಸ್ವಿಯಾಗಲು ಬಿಡಲಾರರು. ಬಹುಸಂಖ್ಯಾತ ಸಾತ್ವಿಕ ಹಿಂದುಗಳು ಗಾಂಧಿ ಪ್ರೀತಿಸಿದ ಹಿಂದೂ ಧರ್ಮಕ್ಕೆ ಗೋಡ್ಸೆ ಪ್ರತಿಪಾದಿಸಿದ ಹಿಂದುತ್ವಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಅರಿಯಲಾರರು ಎಂದು ಸಂಘ ಪರಿವಾರ ಭಾವಿಸಿದ್ದರೆ ಅದು ಕೇವಲ ಅವರ ಭ್ರಮೆ.

ತತ್ವರಹಿತ ಮೈತ್ರಿ ತಿರಸ್ಕೃತ :

ತ್ರಿಪುರಾದಲ್ಲಿ ಕಾಮ್ರೇಡ್ ಮಾಣಿಕ್ ಸರ್ಕಾರ್ ನೇತೃತ್ವದ ಎಡರಂಗ ಸರ್ಕಾರವನ್ನು ಮೂರರಲ್ಲಿ ಎರಡರಷ್ಟು ಬಹುಮತ ನೀಡಿ ಮತ್ತೆ ಅಧಿಕಾರಕ್ಕೆ ತರುವ ಮೂಲಕ ತ್ರಿಪುರಾದ ಎಚ್ಚೆತ್ತ ಮತದಾರರು ಕಾಂಗ್ರೆಸ್. ಐಎನ್‌ಪಿಟಿ ಸಮಯ ಸಾಧಕ ಮೈತ್ರಿಯನ್ನು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವು ತ್ರಿಪುರಾದಲ್ಲಿ ಅಧಿಕಾರ ವಹಿಸಿಕೊಳ್ಳುತ್ತಿರುವುದು ಇದು 5ನೇ ಸಲ. ತ್ರಿಪುರಾದ ಬುಡಕಟ್ಟು ಜನ ಮತ್ತು ಬಂಗಾಳಿಗಳ ನಡುವಿನ ಐಕ್ಯತೆಯನ್ನು ಬಲಪಡಿಸಲು ಸಿಪಿಐ(ಎಂ) ನಡೆಸುತ್ತಾ ಬಂದಿರುವ ದೃಢವಾದ ಹೋರಾಟಕ್ಕೆ ತ್ರಿಪುರಾದ ಜನತೆಯು ತನ್ನ ಮನ್ನಣೆ, ಮೆಚ್ಚುಗೆಯನ್ನು ದಾಖಲಿಸಿದಂತಾಗಿದೆ. ಆಡಳಿತಾರೂಢ ಎಡರಂಗ ಸರ್ಕಾರದ ಗಮನಾರ್ಹ ಸಾಧನೆಗೆ ದೊರೆತ ತ್ರಿಪುರಾ ಜನತೆಯ ಹೆಮ್ಮೆಯ ಅನುಮೋದನೆ ಇದಾಗಿದೆ.

ಒಟ್ಟು 60 ವಿಧಾನಸಭಾ ಸ್ಥಾನಗಳ ಪೈಕಿ ಎಡರಂಗವು 41 ಸ್ಥಾನಗಳನ್ನು ಗೆದ್ದಿದೆ. ಕಾಂಗ್ರೆಸ್-ಐ ಎನ್‌ಪಿಟಿ ಮೈತ್ರಿ ಕೂಟಕ್ಕೆ ಕೇವಲ 19 ಸ್ಥಾನಗಳು ಸಿಕ್ಕಿವೆ. ಬಂಡುಕೋರ ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗದ ಹಿಂಸಾಚಾರದ ಬೆದರಿಕೆಯ ನಡುವೆಯೂ ತ್ರಿಪುರಾದಲ್ಲಿ ಶೇ.80ರಷ್ಟು ಮತದಾನ ನಡೆದಿದೆ. 1998 ರ ಮತದಾನಕ್ಕೆ ಹೋಲಿಸಿದರೆ 2003 ರ ಮತದಾನವು ಶೇ.2ರಷ್ಟು ಕಡಿಮೆಯಾಗಿದ್ದರೂ ಎಡರಂಗವು ಗಳಿಸಿದ ಒಟ್ಟು ಮತಗಳು 1998 ರ ಮತಗಳಿಗಿಂತ ಶೇ.2 ರಷ್ಟು ಹೆಚ್ಚಾಗಿರುವುದು ಗಮನಾರ್ಹ.

ತ್ರಿಪುರಾ ಒಟ್ಟು ಸ್ಥಾನಗಳು 60

ಸಿಪಿಐ(ಎಂ)	38
ಆರ್.ಎಸ್.ಪಿ	2
ಸಿ.ಪಿ.ಐ	1
ಕಾಂಗ್ರೆಸ್(ಐ)	13
ಐ.ಎನ್.ಪಿ.ಟಿ	6


ಮೀಸಲು ಕ್ಷೇತ್ರಗಳು

	ಎಡರಂಗ	ವಿರೋಧಿಮೈತ್ರಿಕೂಟ	ಒಟ್ಟು
ಬುಡಕಟ್ಟು	13	7	20
ಪರಿಶಿಷ್ಟ ಜಾತಿ	6	1	7


ಮಾಣಿಕ್ ಸರ್ಕಾರ್: ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ

ತ್ರಿಪುರಾದ ಬುಡಕಟ್ಟು ಜನರನ್ನು ಬಂಗಾಳಿಗಳ ವಿರುದ್ಧ ಎತ್ತಿಕಟ್ಟಿ ಪ್ರತ್ಯೇಕ ರಾಷ್ಟ್ರನಿರ್ಮಾಣದ ಗುರಿಯನ್ನು ಪ್ರತಿಪಾದಿಸುತ್ತಿರುವ ತ್ರಿಪುರಾ ರಾಷ್ಟ್ರೀಯ ವಿಮೋಚನಾ ರಂಗ' (NEFT) ಒಂದು ಕಾನೂನು ಬಾಹಿರ ಬಂಡುಕೋರ ಸಂಘಟನೆ. 'ತ್ರಿಪುರಾ ದೇಸಿ ರಾಷ್ಟ್ರೀಯ ಪಕ್ಷ' (INPT) ಎಂಬುದು ಅದರ ರಾಜಕೀಯ ಮುಖವಾಡ, ಐಎನ್‌ಪಿಟಿ ಮುಖ್ಯ ಬಿಜೋಯ್ ಹ್ಯಂಗಖಾವ್ಲ್ ಕಳೆದ ವರ್ಷ ಜಿನೇವಾದ ಅಂತರಾಷ್ಟ್ರೀಯ ಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ತ್ರಿಪುರಾದ ಅಲ್ಪಸಂಖ್ಯಾತ ಬುಡಕಟ್ಟು ಜನಗಳಿಗೆ ಸ್ವಯಂ ನಿರ್ಮಾಣದ ಹಕ್ಕನ್ನು ನೀಡಬೇಕೆಂದು ಒತ್ತಾಯಿಸುತ್ತಾ ತ್ರಿಪುರಾದಲ್ಲಿ ನಡೆಸಲಾಗುತ್ತಿರುವ ಬಂಡುಕೋರ ಕಾರ್ಯಾಚರಣೆಯನ್ನು 'ರಾಷ್ಟ್ರೀಯ ವಿಮೋಚನಾ ಹೋರಾಟ' ಎಂದು ಬಹಿರಂಗವಾಗಿ ಬಣ್ಣಿಸಿದರು.

ದೇಶದ ಗಡಿಯಲ್ಲಿರುವ ಗುಡ್ಡಬೆಟ್ಟಗಳಿಂದ ಕೂಡಿದ ಈ ರಾಜ್ಯದಲ್ಲಿ ಬಂಡುಕೋರ ಸಂಘಟನೆಗಳಿಗೆ ಪರಿಸರ ಅನುಕೂಲಕರವಾಗಿದೆ. ಬಾಂಗ್ಲಾದೇಶದ ನೆಲದಲ್ಲಿ ನೆಲೆಗಳನ್ನು ರಚಿಸಿಕೊಂಡು ಈ ಪ್ರತ್ಯೇಕತಾವಾದಿ ಸಂಘಟನೆಗಳು ಕಾರ್ಯ ನಿರ್ವಹಿಸುತ್ತವೆ. ತ್ರಿಪುರಾದ ಬುಡಕಟ್ಟು ಜನರ ನಡುವೆ ಭೀತಿಯನ್ನುಂಟುಮಾಡಿ ಅವರು ತಮಗೆ ಶರಣಾಗುವಂತೆ ಮಾಡುವುದು ಅವರ ಉದ್ದೇಶವಾಗಿದೆ. ಬುಡಕಟ್ಟು ಜನರ ಸಿಪಿಐ(ಎಂ) ನಿಷ್ಠೆಯನ್ನು ಕುಗ್ಗಿಸಲು ಸಿಪಿಐ(ಎಂ) ಕಾರ್ಯಕರ್ತರನ್ನು, ಬೆಂಬಲಿಗರನ್ನು ಅಪಹರಿಸುವುದು ಚಿತ್ರಹಿಂಸೆಗೆ ಒಳಪಡಿಸುವುದು ಹಾಗೂ ಕೊಲೆ ಮಾಡುವುದು ನಿರಂತರವಾಗಿ ನಡೆಸಲಾಗುತ್ತಿದೆ. ಚುನಾವಣಾ ಪೂರ್ವದ ಹಿಂಸಾಚಾರದಲ್ಲಿ ಒಟ್ಟು 34 ಸಿಪಿಐ(ಎಂ)



ಹ್ಯಾಟ್ರಿಕ್ ಜಯಭೇರಿ


ಕಾರ್ಯಕರ್ತರನ್ನು ಅಮಾನುಷ ಹಿಂಸೆಗೆ ಗುರಿಪಡಿಸಿ ಕೊಲ್ಲಲಾಗಿದೆ.

ಬುಡಕಟ್ಟು ಮತದಾರರನ್ನು ಬೆದರಿಸಿ ಒಟ್ಟು 20 ಬುಡಕಟ್ಟು ಮೀಸಲು ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳನ್ನು ಗೆಲ್ಲಲು ಐಎನ್‌ಪಿಟಿ ಗೆ ಸಾಧ್ಯವಾಗಿರಬಹುದು. ಆದರೆ ಒಟ್ಟು 20 ಸ್ಥಾನಗಳಲ್ಲಿ ಎಡರಂಗ 13 ಸ್ಥಾನಗಳಲ್ಲಿ ಜಯಗಳಿಸಿದ್ದು, ಅವುಗಳಲ್ಲಿ 12 ಸ್ಥಾನಗಳನ್ನು ಸಿಪಿಐ(ಎಂ) ಗೆದ್ದಿರುವುದು ಗಮನಾರ್ಹ ಸಂಗತಿ. ಜೀವ ಬೆದರಿಕೆಯನ್ನು ಎದುರಿಸಿಕೊಂಡು ಸಿಪಿಐ(ಎಂ) ಜೊತೆಯಲ್ಲೇ ನಿಲ್ಲುವ ತ್ರಿಪುರಾ ಬುಡಕಟ್ಟು ಜನರ ಧೈರ್ಯ, ಶೌರ್ಯ ಪ್ರಶಂಸಾರ್ಹವಾಗಿದೆ. ಅಂದು ತ್ರಿಪುರಾವನ್ನು ಸ್ವತಂತ್ರವಾಗಿ ಉಳಿಸಿಕೊಳ್ಳಲು ಆಲೋಚಿಸುತ್ತಿದ್ದ ತ್ರಿಪುರಾದ ರಾಜನ ವಿರುದ್ಧ ಬುಡಕಟ್ಟು ಜನರ ಕಮ್ಯುನಿಸ್ಟ್ ನಾಯಕ ಕಾಮ್ರೇಡ್ ದಶರಥ್‌ದೇವ್ ಅಂತವರ ನೇತೃತ್ವದಲ್ಲಿ ಹೋರಾಟ ನಡೆಸಿ ಭಾರತದೊಳಗೆ ಸೇರ್ಪಡೆ ಮಾಡಿಸಿದ ತ್ರಿಪುರಾವನ್ನು ಈಗ ಭಾರತದಿಂದ ಪ್ರತ್ಯೇಕಿಸುವುದಕ್ಕೆ ದೇಶಪ್ರೇಮಿ ತ್ರಿಪುರಾ ಬುಡಕಟ್ಟು ಜನತೆ ಒಪ್ಪುತ್ತಿಲ್ಲ. ಒಬ್ಬ ನೈಜ ಕಮ್ಯುನಿಸ್ಟ್ ಹೇಗೆ ನೈಜ ದೇಶಪ್ರೇಮಿ ಆಗಿರುತ್ತಾನೆ ಎಂಬುದನ್ನು ಅವರು ಸಾಬೀತುಪಡಿಸುತ್ತಿದ್ದಾರೆ. ನಮ್ಮ ದೇಹ ಛಿದ್ರವಾದರೂ ದೇಶ ಛಿದ್ರವಾಗಲು ಬಿಡುವುದಿಲ್ಲ' ಎಂಬ ಘೋಷಣೆಗೆ ತಕ್ಕಂತೆ ಅವರು ಅಪಾರ ತ್ಯಾಗ ಬಲಿದಾನಗಳ ಮೂಲಕ ಎಡರಂಗ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತಂದಿದ್ದಾರೆ ಮತ್ತು ಆ ಮೂಲಕ ದೇಶದ ಐಕ್ಯತೆ ಸಮಗ್ರತೆಯ ಶತ್ರುಗಳಿಗೆ ದಿಟ್ಟ ಉತ್ತರ ನೀಡಿದ್ದಾರೆ.

2003 ರ ವಿಧಾನ ಸಭಾ ಚುನಾವಣೆಯಲ್ಲಿ ಮತೀಯವಾದಿ ಮತ್ತು ಜನಾಂಗೀಯವಾದಿ ಶಕ್ತಿಗಳು ಹೀನಾಯ ಸೋಲು ಅನುಭವಿಸಿದ್ದು ಇನ್ನೊಂದು ಗಮನಾರ್ಹ ಬೆಳವಣಿಗೆಯಾಗಿದೆ. 17 ಸ್ಥಾನಗಳಿಗೆ ತನ್ನ ಅಭ್ಯರ್ಥಿಗಳನ್ನು ಸ್ಪರ್ಧಿಸಿದ್ದ ತೃಣಮೂಲ ಕಾಂಗ್ರೆಸ್‌ಗೆ ಒಂದೂ ಠೇವಣಿ ಉಳಿಸಿಕೊಳ್ಳಲಾಗಿಲ್ಲ. ಯಾವ ಆಡಳಿತಾರೂಢ ವಿರೋಧಿ ಪ್ರವೃತ್ತಿ ಇಲ್ಲಿ ಕೆಲಸ ಮಾಡಲಿಲ್ಲ. ಸರ್ಕಾರ ಜನಪರ ಕೆಲಸಗಳನ್ನು ಮಾಡಿದರೆ ಮರು ಆಯ್ಕೆ ಸಾಧ್ಯ ಎಂಬುದು ಮತ್ತೊಮ್ಮೆ ಇಲ್ಲಿ ಸಾಬೀತಾಗಿದೆ. ಎಲ್ಲ ಸಮಯಸಾಧಕ, ಅನೈತಿಕ ಮೈತ್ರಿಯ ವಿರುದ್ಧ ಜನತೆಯ ಜಯಭೇರಿ ಇದಾಗಿದೆ.

ಕುಲಗೆಟ್ಟ ಕಾಂಗ್ರೆಸ್: ಕಳೆದ 10 ವರ್ಷಗಳಿಂದ ತ್ರಿಪುರಾದಲ್ಲಿ ಅಧಿಕಾರದಿಂದ ಹೊರಗಿರುವ ಕಾಂಗ್ರೆಸ್ ನೀರಿನಿಂದ ಹೊರಬಿದ್ದ ಮೀನಿನಂತಾಗಿದೆ. ಆಡಳಿತಾರೂಢ ಎಡರಂಗವನ್ನು ಹೇಗಾದರೂ ಮಾಡಿ ಅಧಿಕಾರದಿಂದ ಕೆಳಗಿಳಿಸಬೇಕೆಂಬ ಏಕೈಕ ಉದ್ದೇಶದಿಂದ ಅದು ಬಂದೂಕಿನ ಬೆದರಿಕೆಯೊಡ್ಡಿ ಅಧಿಕಾರಕ್ಕೆ ಬರಲು ಯತ್ನಿಸುತ್ತಿರುವ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಂಡಿತ್ತು. ರಾಷ್ಟ್ರೀಯ ಆಂದೋಲನದ ಹಿನ್ನೆಲೆಯುಳ್ಳ ಪಕ್ಷವು ದೇಶವಿಭಾಜಕ ಶಕ್ತಿಗಳೊಂದಿಗೆ ಕೈಜೋಡಿಸಲು ಮುಂದಾಗಿದ್ದು ಅದು ಎಷ್ಟು ಕುಲಗೆಟ್ಟಿದೆ ಎಂಬುದನ್ನು ತೋರಿಸುತ್ತದೆ.

ಕಾಂಗ್ರೆಸ್ ಪಕ್ಷಕ್ಕೆ ಈ ಅಧೋಗತಿ ರಾತ್ರಿ ಕಳೆದು ಬೆಳಗಾಗುವುದರೊಳಗೆ ಪ್ರಾಪ್ತವಾದುದಲ್ಲ. 15 ವರ್ಷಗಳ ಹಿಂದಿನ ಕಥೆ. ಎಡರಂಗ ಸರ್ಕಾರ ಅಂದು ಹತ್ತು ವರ್ಷಗಳಿಂದ ಅಧಿಕಾರದಲ್ಲಿತ್ತು. ಅದರ ಜನಪ್ರಿಯತೆ ಹೆಚ್ಚುತ್ತಾ ಇತ್ತು. ಅಂದು ಇದೇ ಬಿಜೋಯ್ ಹ್ರಂಗಖಾವ್ಲ್ 'ತ್ರಿಪುರಾ ರಾಷ್ಟ್ರೀಯ ಸ್ವಯ ಸೇವಕರು (TNU) ಎಂಬ ಬಂಡುಕೋರ ಸಂಘಟನೆಯ ನಾಯಕ. ರಾಜೀವ್‌ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ಟಿಎನ್‌ವಿ ಜೊತೆಯಲ್ಲಿ ಗುಪ್ತ ಒಡಂಬಡಿಕೆಯೊಂದನ್ನು ಮಾಡಿಕೊಂಡು 1988 ರ ವಿಧಾನಸಭಾ ಚುನಾವಣೆಯ ಪೂರ್ವದಲ್ಲಿ ಹಿಂಸಾಚಾರ ನಡೆಸುವ ಸಂಚು ಹೂಡಿತು. ಸುಮಾರು 100 ಜನ ಅಮಾಯಕ ಬುಡಕಟ್ಟೇತರ ಜನರನ್ನು ಒಂದು ವಾರದ ಅವಧಿಯಲ್ಲಿ ಭೀಕರವಾಗಿ ಕೊಲ್ಲಲಾಯಿತು. ಕೇಂದ್ರ ಸರ್ಕಾರ ಪೂರ್ವಯೋಜನೆಯಂತೆ ಪ್ರಕ್ಷುಬ್ಧ ಪ್ರದೇಶ ಕಾಯ್ದೆ' ಯನ್ನು ಜಾರಿ ಮಾಡಿತು. 'ತ್ರಿಪುರಾ ಉಪಜಾತಿ ಸಮಿತಿ' (TUJS) ಯೊಂದಿಗೆ ಮೈತ್ರಿ ಮಾಡಿಕೊಂಡು, ವ್ಯಾಪಕ ಚುನಾವಣಾ ಅಕ್ರಮಗಳನ್ನು ನಡೆಸಿ, ಕೇಂದ್ರದ ಮಿಲಿಟರಿ ಬಲವನ್ನು ಬಳಕೆ ಮಾಡಿ ಅಧಿಕಾರವನ್ನು ಗಿಟ್ಟಿಸಿಕೊಂಡಿತು. ಮುಂದಿನ 5 ವರ್ಷಗಳ ಕಾಲ ರಾಜ್ಯವನ್ನು ಭೀಕರ ಅರೆ-ಫ್ಯಾಸಿಸ್ಟ್ ದಬ್ಬಾಳಿಕೆಗೆ ಗುರಿಪಡಿಸಲಾಯಿತು. 400ಕ್ಕೂ ಹೆಚ್ಚು ಸಿಪಿಐ(ಎಂ) ನಾಯಕರನ್ನು ಮತ್ತು



ನೂತನ ಮಂತ್ರಿ ಮಂಡಳ



ಅಭಿನಂದನೆ
ಮಹಾಜನತೆಗೆ
ವಿಪ್ಲವ ವಂದನೆ

ಕಾರ್ಯಕರ್ತರನ್ನು ಕೊಲ್ಲಲಾಯಿತು. ಸಾವಿರಾರು ಸಿಪಿಐ(ಎಂ) ಕಾರ್ಯಕರ್ತರನ್ನು ಅವರ ಮನೆಗಳಿಂದ ಓಡಿಸಲಾಯಿತು. ಪಂಚಾಯತಿಯಂತಹ ಎಲ್ಲಾ ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ವಿಸರ್ಜಿಸಲಾಯಿತು. ಭ್ರಷ್ಟಾಚಾರ ವ್ಯಾಪಕವಾಯ್ತು. ಅಭಿವೃದ್ಧಿ ಸ್ಥಗಿತವಾಯ್ತು.

ಬಂಡುಕೋರ ನಾಯಕ ಬಿಜೊಯ್ ಹ್ರಂಗಖಾವ್ಲ್ ಸರ್ಕಾರದಿಂದ ಭಾರೀ ಮೊತ್ತದ ಹಣ ಪಡೆದು ಶಸ್ತ್ರಾಸ್ತ್ರಗಳನ್ನು ಒಪ್ಪಿಸುವ ನಾಟಕವಾಡಿದ. ಅರಣ್ಯದಲ್ಲಿ ಆತ ಉಳಿಸಿಕೊಂಡಿದ್ದ ಬಂಡುಕೋರರನ್ನು ಮುಂದೆ ಆತ ಎನ್.ಎಲ್.ಎಫ್.ಟಿ ಹೆಸರಿನಲ್ಲಿ ಬಳಸಿಕೊಳ್ಳಲಾರಂಭಿಸಿದನು.

1993 ರ ಚುನಾವಣೆಯಲ್ಲಿ ಎಡರಂಗ ಮತ್ತೊಮ್ಮೆ ಪ್ರಚಂಡ ಬಹುಮತದೊಂದಿಗೆ ಅಧಿಕಾರಕ್ಕೆ ಬಂತು. ಆದರೆ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರ್ಕಾರದ ಕುಮ್ಮಕ್ಕಿನಿಂದ ಅಮಾಯಕರ ಮೇಲೆ ಬಂಡುಕೋರರ ದಾಳಿ ದಬ್ಬಾಳಿಕೆ ನಿಲ್ಲಲಿಲ್ಲ. ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡ ಕೇಂದ್ರದ ಕ್ರಮದಿಂದ ವಿಚ್ಛಿದ್ರಕಾರಿ ಶಕ್ತಿಗಳಿಗೆ ಮುಕ್ತ ಮೈದಾನ ಸಿಕ್ಕಂತಾಯಿತು. ಭಾರತ ಬಾಂಗ್ಲಾ ನಡುವಿನ 856 ಕಿ.ಮೀ ಉದ್ದದ ಬೆಟ್ಟಗುಡ್ಡಗಳಿಂದ ಕೂಡಿದ ಗಡಿ ಪ್ರದೇಶವು ಇವರ ಬಂಡುಕೋರ ಚಟುವಟಿಕೆಗಳಿಗೆ ಸುರಕ್ಷಿತ ತಾಣವಾಯಿತು. ಭಯೋತ್ಪಾದನೆ, ಆಂತರಿಕ ಹಾಗೂ ವಿದೇಶಿ ಹಿತಾಸಕ್ತಿಗಳ ಬುಡಮೇಲು ಕೃತ್ಯಗಳನ್ನು ಎದುರಿಸಿ ಸರ್ಕಾರವನ್ನು ಉಳಿಸಿಕೊಳ್ಳಲು ಸಿಪಿಐ(ಎಂ) ಅಪಾರ ತ್ಯಾಗ ಬಲಿದಾನಗಳ ಬೆಲೆ ತೆರಬೇಕಾಯಿತು.

1998 ರ ಚುನಾವಣೆಯ ಸಂದರ್ಭದಲ್ಲಿ 27 ಜನ ಸಿಪಿಐ(ಎಂ) ಬೆಂಬಲಿಗರು ಕೊಲ್ಲಲ್ಪಟ್ಟರು. ಆದರೆ ಅಂದು ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಸಂಯುಕ್ತ ರಂಗ ಸರ್ಕಾರ ನೀಡಿದ ಮಿಲಿಟರಿ ನೆರವಿನಿಂದಾಗಿ ಬಂಡುಕೋರರನ್ನು ನಿಯಂತ್ರಿಸಲು ಸಾಧ್ಯವಾಯಿತು. ನಾಲ್ಕನೇ ಬಾರಿಗೆ ಎಡರಂಗ ಸರ್ಕಾರ ಅಧಿಕಾರಕ್ಕೆ ಬರುವಂತಾಯಿತು. ಈ ಅವಧಿಯಲ್ಲಿ ಸರ್ಕಾರಕ್ಕೆ ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಗಮನ ನೀಡಲು ಸಾಧ್ಯವಾಯಿತು. ಅಧಿಕಾರ ವಿಕೇಂದ್ರೀಕರಣಕ್ಕೆ ಕ್ರಮ ಕೈಗೊಳ್ಳಲಾಯಿತು.

ಈ ನಡುವೆ 2000 ಇಸ್ವಿಯಲ್ಲಿ 'ತ್ರಿಪುರಾ ಬುಡಕಟ್ಟು ಪ್ರದೇಶಗಳ ಸ್ವಾಯತ್ತ ಜಿಲ್ಲಾ ಮಂಡಳಿ' ಚುನಾವಣೆ ನಡೆಯಿತು. ಬಂಡುಕೋರ ಎನ್.ಎಲ್.ಎಫ್.ಟಿ ಹೊಸ ರಾಜಕೀಯ ಮುಖವಾಡ ಧರಿಸಿಕೊಂಡು ಟಿಯುಜೆಎಸ್ ಮೊದಲಾದ ಎಲ್ಲಾ ಪ್ರತ್ಯೇಕತಾವಾದಿ ಸಂಘಟನೆಗಳನ್ನು ಒಟ್ಟಿಗೆ ಸೇರಿಸಿ ಐಪಿಎಫ್‌ಟಿ ಎಂಬ ಪಕ್ಷದ ಹೆಸರಿನಲ್ಲಿ ಚುನಾವಣೆಯ ಕಣಕ್ಕೆ ಇಳಿಯಿತು. ಐಪಿಎಫ್‌ಟಿ ಗೆ ಮತ ಹಾಕದ ಹಾಗೂ ಅದರ ವಿರುದ್ಧ ಸ್ಪರ್ಧೆ ಮಾಡುವ ಬುಡಕಟ್ಟು ಜನರನ್ನು ಸಾಯಿಸುವ ಬೆದರಿಕೆ ಹಾಕಿ ಸ್ವಾಯತ್ತ ಜಿಲ್ಲಾ ಮಂಡಳಿಯನ್ನು ವಶಪಡಿಸಿಕೊಳ್ಳಲಾಯಿತು. ಅಂದಿನಿಂದ ಈ ಪ್ರದೇಶವು ಬಂಡುಕೋರ ಚಟುವಟಿಕೆಗಳ ಕೇಂದ್ರವಾಗಿ ಮಾರ್ಪಾಡಾಗಿದ್ದು ಸರ್ಕಾರದಿಂದ ಬರುವ ಹಣವನ್ನೆಲ್ಲಾ ಭ್ರಷ್ಟಾಚಾರಕ್ಕೂ ಹಿಂಸಾಚಾರಕ್ಕೂ ಬಳಕೆ ಮಾಡಲಾಗುತ್ತಿದೆ.

ವಿಫಲಗೊಂಡ ಸಂಚು: 2003 ರ ಚುನಾವಣೆಯನ್ನು ಸಹ ಇದೇ ರೀತಿಯಲ್ಲಿ ಗೆಲ್ಲಲು ಕಾಂಗ್ರೆಸ್ ಜೊತೆ ಸೇರಿಕೊಂಡು ಎನ್.ಎಲ್.ಎಫ್.ಟಿ ಹೂಡಿದ ಸಂಚನ್ನು ರಾಜ್ಯದ ಸಮರಶೀಲ ಜನತೆ ವಿಫಲಗೊಳಿಸಿದೆ. ಎಲ್ಲಾ 20 ಬುಡಕಟ್ಟು ಮೀಸಲು ಕ್ಷೇತ್ರಗಳನ್ನು ಬಂದೂಕಿನ ಬೆದರಿಕೆಯಿಂದ ಬುಟ್ಟಿಗೆ ಹಾಕಿಕೊಳ್ಳುವ ಯೋಜನೆಯಾಗಿತ್ತು. ಈ ಇಪ್ಪತ್ತೂ ಕ್ಷೇತ್ರಗಳು ಸ್ವಾಯತ್ತ ಜಿಲ್ಲಾ ಮಂಡಳಿಯ ವ್ಯಾಪ್ತಿಯೊಳಗೆ ಬರುವುದರಿಂದ 'ಕೆಲಸ ಆಯ್ತು' ಎಂದುಕೊಂಡಿದ್ದರು. ಹಣದ ಬಲ ಮತ್ತು ತೋಳ್ಬಲದಿಂದ ಮೈತ್ರಿಕೂಟಕ್ಕೆ ಅಗತ್ಯ ಬಹುಮತ ಸಿಕ್ಕೇ ಸಿಗುತ್ತದೆ ಎಂಬ ಲೆಕ್ಕಾಚಾರ ಅವರದಾಗಿತ್ತು. ಜನವರಿ 11 ರಂದು ಚುನಾವಣೆ ಘೋಷಣೆಯಾದ ದಿನದಿಂದ ಹಿಂಸಾಚಾರ ಆರಂಭವಾಯ್ತು. ಆದರೆ ಜನ ಪ್ರಾಣ ಬೆದರಿಕೆಯನ್ನು ಲೆಕ್ಕಿಸದೆ ಜನಪರ ಕೆಲಸ ಮಾಡಿ ಅವರ ವಿಶ್ವಾಸವನ್ನು ಗಳಿಸಿದ್ದ ಎಡರಂಗದ ಅಭ್ಯರ್ಥಿಗಳಿಗೆ ಮತ ನೀಡಲು ಧೈರ್ಯದಿಂದ ಮತಗಟ್ಟೆಗಳಿಗೆ ಬಂದರು. 6 ತಿಂಗಳುಗಳಿಂದ ಎಡರಂಗ, ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಸಂಘಟಿಸಿದ ಬೃಹತ್ ರ್‍ಯಾಲಿಗಳು ಹೊಸ ದಾಖಲೆಯನ್ನು ಸೃಷ್ಟಿಸಿದವು. ಕಾಂಗ್ರೆಸ್. ಐಎನ್‌ಪಿಟಿ ಮೈತ್ರಿ ಕೂಟದ ಸಂಚು ಬಯಲಾಯಿತು. ದೇಶದ್ರೋಹಿ ಶಕ್ತಿಗಳೊಂದಿಗೆ ಕೈಜೋಡಿಸಿಕೊಂಡ ಕಾಂಗ್ರೆಸ್ಸಿನ ಧೋರಣೆಗೆ ಬೇಸತ್ತು ಅದರ ಬಂಗಾಳಿ ಬೆಂಬಲಿಗರು ದೊಡ್ಡ ಸಂಖ್ಯೆಯಲ್ಲಿ ಎಡರಂಗದ ಅಭ್ಯರ್ಥಿಗಳಿಗೆ ಮತ ನೀಡಿದರು. ತ್ರಿಪುರಾದ ಜನತೆ ಮತ್ತೊಮ್ಮೆ ಚರಿತ್ರೆಯೊಂದನ್ನು ನಿರ್ಮಾಣ ಮಾಡಿದರು. ತ್ರಿಪುರಾದಿಂದ ದೇಶಕ್ಕೊಂದು ಸಂದೇಶವಿದೆ; ದೇಶಕ್ಕೊಂದು ಪರ್ಯಾಯವಿದೆ. ಬನ್ನಿ ತ್ರಿಪುರಾ ಜನತೆಯನ್ನು ಅಭಿನಂದಿಸೋಣ.


ಭುಗಿಲೆದ್ದ ವಿದ್ಯುತ್ ಹೋರಾಟ ಬೆಸ್ಕಾಂ ಎದುರು ಬೃಹತ್ ಪ್ರತಿಭಟನೆ

ವಿದ್ಯುತ್ ದರ ಏರಿಕೆಯ ಶಾಕ್ ಹೈಟೆಕ್ ಜಿಲ್ಲೆಯ ಜನರನ್ನು ಬಡಿದೆಬ್ಬಿಸಿತು. 'ಅದ್ಹೇಗೆ ರೇಟ್‌ಏರಿಸ್ತವ್ರೇ ನೋಡೇ ಬಿಡ್ತೀವಿ' ಎಂದು ವಿಧಾನಸೌಧದ ಮುಂಬಾಗಿಲಿಗೇ ಜಮಾಯಿಸಿದರು ಜನ. ಮನವಿ ತೊಗೊಂಡು ಮಾತಾಡಕೆ ಬಂದ ಕೃಷಿ ಸಚಿವರು ತಡವರಿಸಿ ವಿಧಾನಸೌಧಕ್ಕೆ ವಾಪಸಾದರು. ಆಳುವವರಿಗೆ ಜನಗಳದ್ದು ಒಂದೇ ಪಟ್ಟು. 'ಏನೇಳ್ತಿರೀ ಹೇಳಿ' ಎಂದು. ರಾಜಧಾನಿಯಲ್ಲಿ ಏಳೆಂಟು ಸಾವಿರ ಜನ ಸೇರಿದ್ದು ಹೇಗೆ? ಅದಕ್ಕಾಗಿ ನಡೆದ ವ್ಯಾಪಕ ಸಿದ್ಧತೆ ಎಂತಹದು? ಅಲ್ಲಿ ಜನ ನಿಜಕ್ಕೂ ಏನನ್ನು ಹೇಳತ್ತಿದ್ದರು? ಓದಿ..

ಬೆಂಗಳೂರಿನಲ್ಲೂ 'ಕರೆಂಟ್ ಶಾಕ್' ಜನರನ್ನು ಬಡಿದೆಬ್ಬಿಸಿತು. ಜನ ಹೋರಾಟ ನಡೆಸಲು ಬೀದಿಗಿಳಿದೇಬಿಟ್ಟರು. ವಿದ್ಯುತ್ ದರ ಏರಿಕೆ-ವಿದ್ಯುತ್ ಖಾಸಗೀಕರಣ ವಿರೋಧಿ ಹೋರಾಟ ಸಮಿತಿ ನೇತೃತ್ವದಲ್ಲಿ ಮಾರ್ಚ್-3 ಬೆಂಗಳೂರು ಬೆಸ್ಕಾಂ ಎದುರು ಬೃಹತ್ ಪ್ರತಿಭಟನೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ ಜನಸ್ತೋಮ ಬೆಸ್ಕಾಂ ಖಾಸಗೀಕರಣ ಕೈಬಿಡಬೇಕು ವಿದ್ಯುತ್ ದರ ಏರಿಕೆ ನಿಲ್ಲಿಸಬೇಕೆಂದು ಒಕ್ಕೊರಲಿನಿಂದ ಒತ್ತಾಯಿಸಿತು.

ಬೆಸ್ಕಾಂ ವ್ಯಾಪ್ತಿಗೆ ಸೇರಿದ ಬೆಂಗಳೂರು ನಗರ - ಗ್ರಾಮಾಂತರ ಜಿಲ್ಲೆ, ತುಮಕೂರು, ಕೋಲಾರ, ದಾವಣಗೆರೆ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹೋರಾಟದ ಕಿಚ್ಚು ಅಲೆ ಅಲೆಯಾಗಿ ಪಟ್ಟಣ, ಹಳ್ಳಿಗಳಿಗೂ ಹಬ್ಬಿ ಬೆಂಗಳೂರಿನತ್ತ ಸಾಗಿತು.

ಬೆಂಗಳೂರು ನಗರ-ಗ್ರಾಮಾಂತರ ಜಿಲ್ಲೆಯಲ್ಲಿ ವಿದ್ಯುತ್ ದರ ಏರಿಕೆಯ ಕೆಂಡದುಂಡೆಗಳನ್ನು ನುಂಗಲಾರದೆ ಪಕ್ಷಬೇಧ ಮರೆತು ಹೋರಾಟ ನಡೆಸಿದರು. ಈ ಹೋರಾಟದ ಯಶಸ್ವಿಗಾಗಿ ಪಂಚಾಯತಿ ವ್ಯಾಪ್ತಿ, ಹೋಬಳಿ- ತಾಲೂಕವಾರು ಸಮಾವೇಶ ನಡೆಸಿದರು. ಹಳ್ಳಿ ಹಳ್ಳಿಯಲ್ಲಿ ಕರಪತ್ರ ಹಂಚಿದರು, ಆಟೋ ವ್ಯಾನ್‌ಗಳಲ್ಲಿ ಪ್ರಚಾರ ಜಾಥಾ ನಡೆಸಿ ಸ್ವಯಂ ಸ್ಫೂರ್ತಿಯಿಂದ ಸರ್ಕಾರದ ನೀತಿ ವಿರುದ್ಧ ಬಂಡೆದ್ದರು. ದೇವನಹಳ್ಳಿ, ಹೊಸಕೋಟೆ, ಆನೇಕಲ್, ಬೆಂಗಳೂರು ದಕ್ಷಿಣ ತಾಲೂಕ್, ಬೆಂಗಳೂರು ಉತ್ತರ ತಾಲೂಕ್, ಚೆನ್ನಪಟ್ಟಣ, ನೆಲಮಂಗಲ, ಮಾಗಡಿ ತಾಲೂಕು



ಹಳ್ಳಿಹಳ್ಳಿಗಳಿಂದ ಪಟ್ಟಣ, ಗಲ್ಲಿಗಳಿಂದ ನೆರೆದ ಸಾವಿರಾರು ಜನ

ಗಳಿಂದ ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ನೀರಾವರಿ ಪಂಪ್‌ಸೆಟ್ ಬಳಕೆದಾರರು, ಹಾಲು ಉತ್ಪಾದಕರು - ನೌಕರರು, ಪವರ್‌ಲೂಂ ಕಾರ್ಮಿಕರು ದೊಡ್ಡ ಪ್ರಮಾಣದಲ್ಲಿ ಬೆಂಬಲ ಸೂಚಿಸಿ ಭಾಗವಹಿಸಿರುತ್ತಾರೆ.

ಅಲೆ -ಅಲೆಯಾಗಿ ತೇಲಿಬಂತು ಹೋರಾಟ ಕಹಳೆ

ಆನೇಕಲ್ ತಾಲೂಕ್‌ನ ಅತ್ತಿಬೆಲೆ, ಅಂದೇನಹಳ್ಳಿ, ಸಮಾಂದೂರು, ಸೂರಜಕ್ಕನಹಳ್ಳಿ, ಎನ್ನಾಗರ, ಹಾರೋಗದ್ದೆ, ನೆರಳೂರು ಪಂಚಾಯತಿ ವ್ಯಾಪ್ತಿಯಲ್ಲಿ ಸಮಾವೇಶ ನಡೆದವು. ಆನೇಕಲ್ ಟೌನ್‌ನಲ್ಲಿ 3 ಪ್ರದೇಶದಲ್ಲಿ ಹೋರಾಟ ಸಮಿತಿ ರಚಿಸಿ ಸಮಾವೇಶ ನಡೆದು ಹಳ್ಳಿ ಹಳ್ಳಿಯಲ್ಲಿಯು ಪ್ರಚಾರ ನಡೆಸಲಾಯಿತು. ಸುಮಾರು 800ಕ್ಕೂ ಹೆಚ್ಚು ಜನ ಈ ಹೋರಾಟದಲ್ಲಿ ಪಾಲ್ಗೊಂಡರು. ಅಲ್ಲಿ ಸುಮಾರು 400 ವಿದ್ಯುತ್ ಹೋರಾಟ ಪುಸ್ತಕವನ್ನು ಮಾರಾಟ ಮಾಡಿ ಜನರಿಗೆ ಮಾಹಿತಿ ನೀಡಿದೆ.

ಬೆಂಗಳೂರು ದಕ್ಷಿಣ ತಾಲೂಕ್ ಕೆಂಗೇರಿ, ತಾವರೆಗಳಲ್ಲಿ ಪಟ್ಟಣ ಮತ್ತು ಗ್ರಾಮೀಣ ಪ್ರದೇಶದ ಜನರನ್ನು ಒಳಗೊಂಡಂತೆ ಹೋರಾಟ ಸಮಿತಿ ರಚಿಸಲಾಗಿದ್ದು,ವೆಂಕಟೇಶ್ವರ ಕಲ್ಯಾಣ ಮಂಟಪ ದಲ್ಲಿ ಸಮಾವೇಶ ನಡೆಸಲಾಯಿತು. ಸುಮಾರು 200ಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಸೋಮನ ಹಳ್ಳಿ (ಕನಕಪುರ ರಸ್ತೆ) ಕಗ್ಗಲಿಪುರ, ತಾವರೆಕೆರೆ, ಹೆಚ್.ಗೊಲ್ಲಹಳ್ಳಿ, ಕೆ. ಗೊಲ್ಲಹಳ್ಳಿಗಳಲ್ಲಿ ಹೋರಾಟ ಸಮಿತಿ ರಚಿಸಲಾಯಿತು. ಸುಮಾರು 800 ಕ್ಕೂ ಹೆಚ್ಚು ಜನ ಭಾಗವಹಿಸಿರುತ್ತಾರೆ.

ಹೊಸಕೋಟೆಯಲ್ಲಿ ಪಂಚಾಯತಿಗಳ ವ್ಯಾಪ್ತಿಯಲ್ಲಿ ಹೋರಾಟ ಸಮಿತಿ ರಚಿಸಿದರು. ತಾಲೂಕಿನಾದ್ಯಂತ ಮೂರು ಮೆಟಡೋರ್‌ನಲ್ಲಿ ಜಾಥಾ ನಡೆಸಿ ಪ್ರಚಾರ ಮಾಡಲಾಗಿತ್ತು. 700-800 ರೈತರು ಭಾಗವಹಿಸಿದ್ದು ಅತ್ಯಂತ ಗಮನಾರ್ಹವಾಗಿತ್ತು.

ದೇವನಹಳ್ಳಿ ತಾಲೂಕ್‌ನಲ್ಲಿ ಹೊರಾಟ ಸಮಿತಿ ರಚಿಸಿದ್ದು ತಾಲೂಕಿನಾದ್ಯಂತ ಸ್ವಯಂಪ್ರೇರಣೆಯಿಂದ 70-80 ಮೆಟಡರ್‌ಗಳಲ್ಲಿ ರೈತರು ಭಾಗವಹಿಸಿದ್ದಾರೆ.

ದೊಡ್ಡಬಳ್ಳಾಪುರ ತಾಲೂಕ್‌ನಲ್ಲಿ ರೈತರ ಜೊತೆಗೆ ಈ ವಿದ್ಯುತ್ ದರ ಏರಿಕೆ ವಿರುದ್ಧ ಸತತ ಹೋರಾಟ ನಡೆಸುತ್ತಿರುವ ಪವರ್‌ಲೂಂ ನೇಕಾರರು ದೊಡ್ಡ ಸಂಖ್ಯೆಯಲ್ಲಿ ಈ ಹೋರಾಟ ದಲ್ಲಿ ಭಾಗವಹಿಸಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ತಾಲೂಕಿನ ಹಲವಾರು ಪಂಚಾಯತಿಗಳಲ್ಲಿ-ದೊಡ್ಡಬಳ್ಳಾಪುರದಲ್ಲಿ ಹೋರಾಟ ಸಮಿತಿ ರಚಿಸಲಾಯಿತು.

ಇದಲ್ಲದೆ **ನೆಲಮಂಗಲ** (ಮರಳುಕುಂಟೆ) **ಮಾಗಡಿ**, (ಬಾಣವಾಡಿ) ಚೆನ್ನಪಟ್ಟಣ ಮತ್ತು **ಬೆಂಗಳೂರು ಉತ್ತರ** ತಾಲೂಕುಗಳಿಂದ ಸಾಕಷ್ಟು ಪ್ರಮಾಣದಲ್ಲಿ ರೈತರು- ಕಾರ್ಮಿಕರು, ಮಹಿಳೆಯರು ಭಾಗವಹಿಸಿ ಪ್ರತಿಭಟನೆ ವ್ಯಕ್ತಪಡಿಸಿರುತ್ತಾರೆ.

ಬೆಂಗಳೂರು ನಗರದಲ್ಲಿ ಗುಡಿಸಲುಗಳು ಗುಡುಗಿದವು ಕಾರ್ಮಿಕರು ನಾಗರೀಕರ ದಂಡೇ ದಂಡು

ಬೆಂಗಳೂರು ನಗರದಲ್ಲಿಯು ವಿದ್ಯುತ್ ಶಾಕ್ ತಟ್ಟದೆ ಇರಲಿಲ್ಲ. ವಿದ್ಯುತ್ ಖಾಸಗೀಕರಣ ವಿರೋಧಿಸಿ ನಡೆಯುತ್ತಿರುವ ಹೋರಾಟದ ಬಗ್ಗೆ ತಿಳಿಸಲು ಹೋದಾಗ ಪವರ್‌ಲೂಂ ಮಾಲೀಕರು, ಇಂಜನಿಯರಿಂಗ್ , ಸಣ್ಣ- ಮದ್ಯಮ ಕೈಗಾರಿಕೆಯ ಮಾಲೀಕರು ತೀವ್ರ ಆಕ್ರೋಶ ವ್ಯಕ್ತಪಡಿಸಿ ಹೋರಾಟ ನಡೆಯಲೇಬೇಕು ನಾವು ಬರುತ್ತೇವೆಂದು ಸ್ಪಂದಿಸಿದರು.

ಸಿ.ಐ.ಟಿ.ಯು. ನೇತೃತ್ವದಲ್ಲಿ ಕಾರ್ಮಿಕರ

ಗೋಪಾಲಕೃಷ್ಣ ಅರಳಹಳ್ಳಿ

ಮಹಾಪುರವೇ ಬೆಸ್ಕಾಂ ಮುಂದೆ ಸೇರಿತು. ಬಾಗ್ಯಜ್ಯೋತಿ ಬಳಕೆಯಲ್ಲಿ ವಂಚಿತರಾದ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಬಡಜನರು, ದಲಿತರು ಈ ಹೋರಾಟ ಸೇರಿಕೊಂಡು ಆಕ್ರೋಶ ವ್ಯಕ್ತಪಡಿಸಿದ್ದರು.

ಶ್ರೀರಾಮಪುರ ಪ್ರದೇಶದಲ್ಲಿ ಹೋರಾಟ ಸಮಿತಿ ರಚಿತವಾಗಿದ್ದು ಆರ್.ಜಿ.ಐ ಕಾಲೋನಿ ಯಲ್ಲಿ ಹೋರಾಟ ಸಮಿತಿ ನೇತೃತ್ವದಲ್ಲಿ ಫೆಬ್ರವರಿ-9 ರಂದು ಬಹಿರಂಗಸಭೆ ನಡೆದಿದೆ. ಲಕ್ಷ್ಮಿ ನಾರಾಯಣಪುರದಲ್ಲಿರುವ ವಿದ್ಯುತ್ ನೇಕಾರರು, ಇಂಜನಿಯರಿಂಗ್ ಮಾಲೀಕರು, ಆಂದ್ರ ದೇವಾಂಗ ಸಂಘದಲ್ಲಿ ಸಮಾವೇಶ ನಡೆಸಿ ಹೋರಾಟ ಸಮಿತಿ ರಚಿಸಲಾಯಿತು. ಓಕಳಿಪುರದ ಸ್ಲಂಗಳಲ್ಲಿ ಭಾಗ್ಯಜ್ಯೋತಿ ಬಳಕೆದಾರರ ಸಭೆಗಳನ್ನು ನಡೆಸಿ ಹೋರಾಟ ಸಮಿತಿ ರಚಿಸಿ ಬಹಿರಂಗ ಸಭೆಗಳನ್ನು ನಡೆಸಲಾಯಿತು. ಶ್ರೀರಾಮಪುರದ ಐದನೇ ಅಡ್ಡರಸ್ತೆಯಲ್ಲಿ ಮ.ರಾಮಮೂರ್ತಿ ಕನ್ನಡ ಬಳಗ, ಕರ್ನಾಟಕ ಕನ್ನಡ ಹಳೆ-ಸಂಘಟನೆಗಳು ಈ ಹೋರಾಟ ಬೆಂಬಲಿಸಿ ಕರಪತ್ರ ಮುದ್ರಿಸಿ ಹಂಚಿದ್ದಾರೆ. ಹೋರಾಟದಲ್ಲಿಯೂ ಭಾಗವಹಿಸಿರುತ್ತಾರೆ.

ಶಾಂತಿನಗರ ವಾರ್ಡ್‌ನಲ್ಲಿ ಹೋರಾಟ ಸಮಿತಿಗಳು ರಚಿತಗೊಂಡು ಸಮಾವೇಶಗಳನ್ನು ನಡೆಸಿರುತ್ತಾರೆ. ವಿನಾಯಕನಗರದ 3 ಪ್ರದೇಶದಲ್ಲಿ, ಶಾಂತಿ ನಗರದ 6 ಕಡೆಗಳಲ್ಲಿ ಹೋರಾಟ ಸಮಿತಿಗಳು ಸಭೆಗಳನ್ನು ನಡೆಸಿರುತ್ತವೆ. ಚಿನ್ನಯ್ಯನ ಪಾಳ್ಯದಲ್ಲೂ ಹೋರಾಟ ಸಮಿತಿ ರಚಿತವಾಗಿದೆ.

ಕಲಾಸಿಪಾಳ್ಯ, ವಿನೋಭನಗರ, ಕೆ.ಎಸ್. ಗಾರ್ಡನ್, ರಾಜಗೋಪಾಲ್ ಗಾರ್ಡನ್, ಸುದಾಮನಗರಗಳಲ್ಲಿಯೂ ಹೋರಾಟ ಸಮಿತಿಗಳು ಸಭೆಗಳನ್ನು ನಡೆಸಿದ್ದಾರೆ. ಈ ಸ್ಲಂಗಳಿಂದ ಜನ ಭಾಗವಹಿಸಿದ್ದಾರೆ.

ವಿದ್ಯುತ್ ಖಾಸಗೀಕರಣ ವಿರುದ್ಧ ಕಾರ್ಮಿಕರ ಮಹಾಪುರ

ಕೆ.ಆರ್ ಪುರದಲ್ಲಿ ಸಿಐಟಿಯು ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಪ್ರದೇಶಗಳಲ್ಲಿ ಸಭೆಗಳನ್ನು ನಡೆಸಿ ಹೋರಾಟ ಸಮಿತಿ ರಚಿಸಿದೆ. ಕೆ.ಆರ್.ಪುರ, ಕೋಡಿಹಳ್ಳಿ, ಮಾರತ್‌ಹಳ್ಳಿಗಳಲ್ಲಿ ಬಹಿರಂಗ ಸಭೆ ನಡೆಸಿರುತ್ತಾರೆ. ದೊಡ್ಡ ಪ್ರಮಾಣದ ಸಿಐಟಿಯು ಕಾರ್ಮಿಕರು ಭಾಗವಹಿಸಿದ್ದಾರೆ.

ಹೊಸೂರು ರಸ್ತೆಯಲ್ಲಿ ಈ ಹೋರಾಟಕ್ಕೆ ಪೂರಕವಾಗಿ ಸಭೆಗಳು ನಡೆದು ಹೋರಾಟ ಸಮಿತಿ ಗಳು ರಚಿತವಾಗಿವೆ. ಹೊಸೂರು ರಸ್ತೆಯಲ್ಲಿನ ಕಾರ್ಮಿಕರು, ಹೋಟೆಲ್ ಕಾರ್ಮಿಕರು, ಕಾಮಾಕ್ಷಿಪಾಳ್ಯದಲ್ಲಿನ ಕಾರ್ಮಿಕರು ಆ ಪ್ರದೇಶದಲ್ಲಿ ಕರಪತ್ರ ಹಂಚಿ ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ. ತುಮಕೂರು ರಸ್ತೆಯ ಟಿ.ದಾಸರಹಳ್ಳಿಯಲ್ಲಿ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರಚಾರ- ಬಹಿರಂಗ ಸಭೆಗಳು ನಡೆದಿವೆ. ಯಶವಂತಪುರ ದಲ್ಲಿ ಸಭೆಗಳನ್ನು ನಡೆಸಿ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಪಾಲ್ಗೊಂಡಿದ್ದಾರೆ.

ಮೈಸೂರು ರಸ್ತೆ ಕೆಂಗೇರಿ- ಕುಂಬಳಗೋಡು ಪ್ರದೇಶದಲ್ಲಿ ಕಾರ್ಮಿಕರು ಸಭೆಗಳನ್ನು ನಡೆಸಿ ಕರಪತ್ರ ಹಂಚಿದ್ದಾರೆ. ಎಲ್ಲಾ ಸಿಐಟಿಯು ಕಾರ್ಮಿಕರು ಪಾಲ್ಗೊಂಡು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಬೆಸ್ಕಾಂ ಮುಂದೆ ರೈತ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಿದರು. ಸಾವಿರಾರು ಅಂಗನವಾಡಿ ನೌಕರರೂ ಸೇರಿದರು. ಈ ಪ್ರತಿಭಟನಾ ಸಭೆಯ ಅಧ್ಯಕ್ಷತೆಯನ್ನು ಸ್ವಾತಂತ್ರ್ಯ ಹೋರಾಟಗಾರ, ಮಾಜಿ ಶಾಸಕರು, ನೀರಾವರಿ ಪಂಪ್‌ಸೆಟ್ ಹೋರಾಟ ಸಮಿತಿ ಅಧ್ಯಕ್ಷರಾದ ಸೂ.ರಂ.ರಾಮಯ್ಯ ನವರು ವಹಿಸಿದ್ದರು. ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಕೃಷಿಕೂಲಿಕಾರರ ಸಂಘದ ಉಪಾದ್ಯಕ್ಷರಾದ ಜಿ.ಎನ್.ನಾಗರಾಜ್ ಮಾತನಾಡಿ, ಸರ್ಕಾರ ವಿದ್ಯುತ್ ಖಾಸಗೀಕರಣಗೊಳಿಸಿ ರಾಜ್ಯದ ಜನರ ಹಿತವನ್ನು ಬಲಿಕೊಡುತ್ತಿರುವ ಬಗ್ಗೆ ತಿಳಿಸಿದರು. ವಿದ್ಯುತ್ ಕ್ಷೇತ್ರದ ಬೆಳವಣಿಗೆ ವೈಫಲ್ಯಗಳನ್ನು ತಿಳಿಸಿ ಇಂತಹ ಜನ ವಿರೋಧಿ ನೀತಿಯನ್ನು ಕೈಬಿಡಬೇಕೆಂದು ಒತ್ತಾಯಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಯ್ಯಾರೆಡ್ಡಿ ಬೇಡಿಕೆಗಳ ಮನವಿ ಪತ್ರದ ಅಂಶಗಳು ವಿವರಿಸಿ ಮಾತನಾಡಿದರು. ಅಲ್ಲದೆ ಸಿ.ಐ.ಟಿ.ಯು ಪರವಾಗಿ ಹೆಚ್.ಎನ್.ಗೋಪಾಲಗೌಡ, ಕೆ.ಪ್ರಕಾಶ್, ಜಿ.ವಿ.ಶ್ರೀರಾಮರೆಡ್ಡಿ ಜನವಾದಿ ಮಹಿಳಾ ಸಂಘಟನೆಯ ಪ್ರಭಾರವರು ಮಾತನಾಡಿದರು. ವಿವಿಧ ಹೋರಾಟ ಸಮಿತಿಯ, ಸಂಘಸಂಸ್ಥೆಗಳ ಮುಖಂಡರು ಉಪಸ್ಥಿತರಿದ್ದರು. ಕರ್ನಾಟಕ ಪ್ರಾಂತ ರೈತ ಸಂಘ, ಸಿಐಟಿಯು, ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಸ್, ಅಂಗನವಾಡಿ ನೌಕರರು, ಪಂಚಾಯತಿ ನೌಕರರು, ನೀರಾವರಿ ಪಂಪ್‌ಸೆಟ್ ಬಳಕೆದಾರರು, ಹಾಲು ಉತ್ಪಾದಕರು ಬಾಗ್ಯಜ್ಯೋತಿ ಫಲಾನುಭವಿಗಳು, ನೇಕಾರರ ಸಂಘ ಇತ್ಯಾದಿ ಸಂಘ ಸಂಸ್ಥೆಗಳು ಈ ಹೋರಾಟದಲ್ಲಿ ಭಾಗವಹಿಸಿರುತ್ತಾರೆ.

ಈ ಪ್ರತಿಘಟನಾ ಸಭೆಯಲ್ಲಿ ಮನವಿ ಸ್ವೀಕರಿಸಲು ಬಂದ ಕೃಷಿ ಸಚಿವ ಕೌಜಲಗಿಯವರು ಬೇಡಿಕೆ ಪತ್ರ ಸಲ್ಲಿಸಿ ವಿದ್ಯುತ್ ಖಾಸಗೀಕರಣ ವಿದ್ಯುತ್ ದರ ಏರಿಕೆ ಕೈಬಿಡಬೇಕೆಂದು ಒತ್ತಾಯಿಸಲಾಯಿತು. ಒಂದು ತಿಂಗಳೊಳಗೆ ಬೇಡಿಕೆ ಈಡೇರಿಸದಿದ್ದರೆ ತೀವ್ರ ಹೋರಾಟ ನಡೆಸಲು ನಿರ್ಧರಿಸಲಾಯಿತು.

ಹೋರಾಟಕ್ಕೆ ಬೆದರಿದ ಸರ್ಕಾರ!

ಮಾರ್ಚ್ 10 ರಂದು ಕೆ.ಇ.ಆರ್.ಸಿ.ಗೆ ವಿದ್ಯುತ್ ದರ ಏರಿಕೆ ಕುರಿತು ಬೆಸ್ಕಾಂ ಸಲ್ಲಿಸಿದ ಪ್ರಸ್ತಾಪವನ್ನು ಕೆ.ಇ.ಆರ್.ಸಿ ಬದಿಗಿಟ್ಟು ರೈತರ ಪಂಪ್‌ಸೆಟ್, ಬಾಗ್ಯಜ್ಯೋತಿ ಬಳಕೆದಾರರ ವಿದ್ಯುತ್ ದರ ಏರಿಸಿ ಅವರ ಮೇಲೆ ಗದಾ ಪ್ರಹಾರ ಮಾಡೋದನ್ನು ತಾತ್ಕಾಲಿಕವಾಗಿ ನಿಲ್ಲಿಸಿದೆ. ರಾಜ್ಯದಲ್ಲಿ ರೈತರು- ಕಾರ್ಮಿಕರು ನಾಗರೀಕರು, ನಡೆಸಿದ ಹೋರಾಟ ಪರಿಣಾಮ ವಾಗಿ ಪ್ರತಿ ಯೂನಿಟ್‌ಗೆ 10 ಪೈಸೆ ಹೆಚ್ಚಿಸಿದೆ. ಮುಂದೆ ಬೆಸ್ಕಾಂ ಖಾಸಗೀಕರಣ ಮಾಡುವುದು ಸರ್ಕಾರದ ಇಂಗಿತವಾಗಿದೆ. ಇದರ ವಿರುದ್ಧ ಜನರು ಸದಾ ಹೋರಾಟಕ್ಕೆ ಸಿದ್ದರಾಗಬೇಕಾಗಿದೆ. ○

ಐಕ್ಯತೆ ಮತ್ತು ಹೋರಾಟ ಮೈವೆತ್ತಂತಿದ್ದ

ಕಾಮ್ರೇಡ್ ಕೆ.ವಿ.ಎಸ್



ಎಲ್ಲರ ಪ್ರೀತಿಯ 'ಕೆವಿಎಸ್' ಇನ್ನಿಲ್ಲವಾಗಿದ್ದಾರೆ. ಮೃದು ಮನಸ್ಸಿನ, ಅಚಲ ಬದ್ಧತೆಯ ಪ್ರತೀಕ ಕೆ.ವಿ.ಎಸ್. ಜೀವವಿಮಾ ನೌಕರರ ಚಳುವಳಿ ಮತ್ತು ಸಂಘಟನೆಯಲ್ಲಿ ಹಾಸುಹೊಕ್ಕಾಗಿ, ಅದರ ನಾಯಕರಾಗಿ ಚಳುವಳಿಯ ಕೊಡುಗೆಯಾಗಿದ್ದ ಅವರ ಪರಿಶ್ರಮ ಸ್ಮರಣೀಯ. ಜನಸಮೂಹದ ನಡುವಿನ ಚಳುವಳಿಯಿಂದ ಸೈದ್ಧಾಂತಿಕವಾಗಿ, ರಾಜಕೀಯವಾಗಿ ಬೆಳೆಯುತ್ತಾ ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರಾಗಿ, ಕಾರ್ಮಿಕವರ್ಗದ ಐಕ್ಯ ಚಳುವಳಿಯ ಒಂದು ಪ್ರಮುಖ ಕೊಂಡಿಯಾಗಿ ಕೊನೆಯುಸಿರಿರುವವರೆಗೂ ಶ್ರಮಿಸಿದವರು. ಅವರ ಅಗಲಿಕೆ ನಿಜಕ್ಕೂ ತುಂಬಲಾರದ ನಷ್ಟ. ಕೆವಿಎಸ್ ನಡೆದಹಾದಿ, ಕೊಡುಗೆಗಳತ್ತ ಒಂದು ನೋಟ

ಮಾರ್ಚ್ 5, 2003 ರ ರಾತ್ರಿ ಕಾಮ್ರೇಡ್ ಕೆ.ವಿ.ಎಸ್. ಇನ್ನಿಲ್ಲ ಎಂಬ ಸುದ್ದಿ ಬರಸಿಡಿಲಿನಂತೆ ನಮ್ಮ ಮೇಲೆ ಎರಗಿತ್ತು. ಅವರ ಆರೋಗ್ಯ ಚೆನ್ನಾಗಿಲ್ಲ ಎಂದು ನಮಗೆ ತಿಳಿದಿದ್ದರೂ ಇಷ್ಟು ಬೇಗನೆ ಅವರು ನಮ್ಮನ್ನೆಲ್ಲಾ ಅಗಲಿ ಹೋಗುತ್ತಾರೆ ಎಂಬ ಸುಳಿವೂ ಇರಲಿಲ್ಲ. ಆದ್ದರಿಂದ ನಿಜಕ್ಕೂ ಅದು ಆಘಾತ ತಂದ ಸುದ್ದಿ. ಎರಡು ತಿಂಗಳ ಹಿಂದೆಯಷ್ಟೇ ಅವರಿಗೆ 63 ವರ್ಷ ತುಂಬಿತ್ತು.

'ಕೆವಿಎಸ್' ಎಂದೇ ಜನಪ್ರಿಯರಾಗಿದ್ದ ಕಾಮ್ರೇಡ್ ಕೆ.ವಿ.ಶ್ರೀನಿವಾಸನ್ ಕರ್ನಾಟಕದ ಪ್ರಜಾಪ್ರಭುತ್ವ ಆಂದೋಲನಕ್ಕೆ ಅಖಿಲ ಭಾರತ ವಿಮಾ ನೌಕರರ ಸಂಘದ ಒಂದು ಅಮೋಘ ಕೊಡುಗೆ. ಮೇ 1961 ರಲ್ಲಿ ಎಲ್‌ಐಸಿ ಸೇರಿದ ಕೆವಿಎಸ್‌ಗೆ ಆಗಷ್ಟೇ ಬೆಳೆಯಲಾರಂಭಿಸಿದ್ದ ಈ ಬೃಹತ್ ಸಾರ್ವಜನಿಕ ಉದ್ದಿಮೆಯಲ್ಲಿ ಉನ್ನತ ಹುದ್ದೆಗೇರುವ ಎಲ್ಲಾ ಅರ್ಹತೆಗಳಿದ್ದವು. ಅವರು ವಿಜ್ಞಾನ ಪದವೀಧರರಾಗಿದ್ದರು. ಕಾನೂನು ಪದವೀಧರರಾಗಿದ್ದರು. ಬೇಗನೆ ವಿಮಾ ಉದ್ದಿಮೆಯಲ್ಲಿ ವಿಶೇಷ ತರಬೇತಿಯನ್ನು ಯಶಸ್ವಿಯಾಗಿ ಪೂರೈಸಿದರು. ಜತೆಗೆ ಸಾಮಾಜಿಕ ಒತ್ತಡವೂ ಇತ್ತು. ಆದರೂ ಯುವಕ ಕೆವಿಎಸ್‌ರನ್ನು ಆಕರ್ಷಿಸಿದ್ದು ಈ 'ಸುವರ್ಣಾವಕಾಶ'ವಲ್ಲ, 'ಅಖಿಲ ಭಾರತ ವಿಮಾ ನೌಕರರ ಸಂಘ (ಎಐಐಇಎ)'ದ ಹೋರಾಟ ಮತ್ತು ಸಾಮಾಜಿಕ ಕಾಳಜಿ. ಹೋರಾಟದ ಸಾಗರದಲ್ಲಿ ಬದುಕಿನ ಅಣಿಮುತ್ತುಗಳನ್ನು ಆರಿಸಿಕೊಳ್ಳಲು ಅವರು ನಿರ್ಧರಿಸಿದರು. ಈ ಬಗ್ಗೆ ಅವರೆಂದಿಗೂ ಖೇದ ಪಟ್ಟವರಲ್ಲ, ಸಾರ್ಥಕ್ಯದ ಭಾವನೆ ಹೊಂದಿದ್ದವರು. ಒಬ್ಬ ಶಿಸ್ತಿನ ಕಾರ್ಯಕರ್ತನಾಗಿ ಆರಂಭಿಸಿದ ಅವರು ಎಐಐಇಎ ಯ ಒಬ್ಬ ಜನಪ್ರಿಯ, ಅಖಿಲ ಭಾರತ ಮುಂದಾಳುವಾಗಿ ಬೆಳೆದರು. ಅವರ ನಿಧನದ ನಂತರ ಬಂದ ಶ್ರದ್ಧಾಂಜಲಿ ಸಂದೇಶಗಳು ಇದಕ್ಕೆ ಸಾಕ್ಷಿ.

ಹೋರಾಟದಲ್ಲಿ ಮೂಡಿದ ನಾಯಕತ್ವ

ಮುಂದಾಳುತ್ವದ ಮುಂಚೂಣಿಗೆ ಕೆವಿಎಸ್ ಬಂದದ್ದು ಬೆಂಗಳೂರಿನಲ್ಲಿ ವಿಮಾ ನೌಕರರ ಸಂಘವನ್ನು ಒಡೆಯುವ ಪ್ರಯತ್ನದ ವಿರುದ್ಧದ ತೀವ್ರ ಹೋರಾಟದಲ್ಲಿ. ವಿಮಾ ನೌಕರರ ಆಂದೋಲನದ ಐಕ್ಯತೆಯನ್ನು ಉಳಿಸಿಕೊಳ್ಳಲು ಕೆವಿಎಸ್ ಆಗಿನ ಯೂನಿಯನ್ ಮುಖಂಡತ್ವದ ವಿರುದ್ಧವೇ ನಡೆಸಬೇಕಾಗಿ ಬಂದ ಹೋರಾಟಕ್ಕೆ ನೇತೃತ್ವ ನೀಡಿದರು. ಒಂದೂವರೆ ದಶಕದ ಸ್ವಾತಂತ್ರ್ಯದ, ಬಂಡವಾಳಶಾಹಿ-ಭೂಮಾಲಕ ಆಳ್ವಿಕೆಯ ನಂತರ ಸಾಮಾಜಿಕ, ರಾಜಕೀಯ ತುಮುಲಗಳು ಆರಂಭವಾಗಿದ್ದ ಕಾಲವದು. ಕಾರ್ಮಿಕ ಸಂಘಟನೆಗಳ ಮುಖಂಡರಲ್ಲೂ ಹೊಯ್ದಾಟಗಳು ಕಾಣಬರುತ್ತಿದ್ದವು. ಇಂತಹ ಸನ್ನಿವೇಶದಲ್ಲಿ ಆಳುವ ವರ್ಗಗಳು ಸೃಷ್ಟಿಸಿದ ಭ್ರಮೆಗಳಿಗೆ ಬಲಿಬೀಳದೆ ಒಂದು ಸಮರಧೀರ ಸಂಘಟನೆಯಾಗಿ ಎಐಐಇಎಯ ಐಕ್ಯತೆಯನ್ನು ಕಾಪಾಡುವಲ್ಲಿ ನೇತೃತ್ವ ನೀಡಿದವರಲ್ಲಿ ಕೆವಿಎಸ್ ಕೂಡಾ ಒಬ್ಬರು. ಮುಂದೆ 1974 ರಲ್ಲಿ ನಡೆದ ವೇತನ ಪರಿಷ್ಕರಣೆಯ ಹೋರಾಟದಲ್ಲಿ ದೇಶದಲ್ಲಿ ಆಡಳಿತ ಮಂಡಳಿ ಆರು ಕಡೆ ಲಾಕೌಟ್ ಘೋಷಿಸಿತು. ಬೆಂಗಳೂರು ಅವುಗಳಲ್ಲೊಂದಾಗಿತ್ತು. ಆ ಲಾಕೌಟ್ ವಿರುದ್ಧ ಬೆಂಗಳೂರಿನ ವಿಮಾ ನೌಕರರ ಹೋರಾಟಕ್ಕೂ ಅವರು ನೇತೃತ್ವ ನೀಡಿದರು. ನಂತರ ಎಐಐಇಎ ನೇತೃತ್ವದಲ್ಲಿ ನಡೆದ ಎಲ್ಲಾ ಹೋರಾಟಗಳಲ್ಲೂ ಬೆಂಗಳೂರಿನ ವಿಮಾ ನೌಕರರಿಗೆ ಸಮರ್ಥ ನೇತೃತ್ವ ನೀಡಿದವರಲ್ಲಿ ಕೆವಿಎಸ್ ಪ್ರಮುಖರು - ಅದು ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟವಾಗಿರಬಹುದು, ಎಲ್‌ಐಸಿಯನ್ನು ಒಡೆಯುವ ರಾಜೀವ್‌ಗಾಂಧಿ ಸರ್ಕಾರದ ವಿರುದ್ಧದ ಹೋರಾಟವಾಗಿರಬಹುದು ಅಥವಾ ಕಳೆದ ಒಂದು ದಶಕದಿಂದ ವಿಮಾ ನೌಕರರು ನಡೆಸುತ್ತಿರುವ ಖಾಸಗೀಕರಣ ಮತ್ತು ಉದಾರೀಕರಣದ ವಿರುದ್ಧ ಐತಿಹಾಸಿಕ ಹೋರಾಟವಾಗಿರಬಹುದು.

ಯುವಜನರಿಗೆ ಪ್ರೋತ್ಸಾಹ

ಕಾಮ್ರೇಡ್ ಕೆವಿಎಸ್ 1972 ರಿಂದ 1980 ವರೆಗೆ ಬೆಂಗಳೂರು ವಿಭಾಗದ ವಿಮಾ ಕಾರ್ಪೊರೇಷನ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ದುಡಿದರು. ತಾನು ಮಾರ್ಗದರ್ಶನ ನೀಡಿ ಬೆಳೆಸಿದ್ದ ಯುವ ಸಂಗಾತಿಗಳನ್ನು ನೇತೃತ್ವಕ್ಕೆ ತಂದ ಕೆವಿಎಸ್ ನಂತರ ವಿವಿಧ ಸ್ಥಾನಗಳಿಂದ ಮಾರ್ಗದರ್ಶನ ನೀಡಿದರು. 1990 ರಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶವನ್ನೊಳಗೊಂಡ ಎಲ್‌ಐಸಿಯ ದಕ್ಷಿಣ ಮಧ್ಯವಲಯ ವಿಮಾ ನೌಕರರ ಒಕ್ಕೂಟ ಸ್ಥಾಪನೆಗೊಂಡಾಗ ಅದರ ಸ್ಥಾಪಕ ಅಧ್ಯಕ್ಷರಾಗಿ ಕಾಮ್ರೇಡ್ ಕೆವಿಎಸ್ ಸರ್ವಾನುಮತದಿಂದ ಆರಿಸಲ್ಪಟ್ಟರು. 1999 ರ ವರೆಗೂ ತಮ್ಮ ನಿವೃತ್ತಿಯ ಕೆಲವೇ ತಿಂಗಳ ಮುಂಚಿನವರೆಗೂ ಅವರು ಈ ಸ್ಥಾನದಲ್ಲಿ ಸೇವೆ ಸಲ್ಲಿಸಿದರು. ಈ ಅವಧಿಯಲ್ಲಿ ಅವರು ಅಖಿಲ ಭಾರತ ವಿಮಾ ನೌಕರರ ಸಂಘದ ಒಬ್ಬ ಉಪಾಧ್ಯಕ್ಷರಾಗಿಯೂ, ಮಾರ್ಗದರ್ಶನ ನೀಡಿದರು. ನಿವೃತ್ತಿಯ ನಂತರವೂ ಆ ಸ್ಥಾನದಲ್ಲಿ ಅವರು ಮುಂದುವರೆಯಬೇಕು ಎಂದು ಸಂಘಟನೆ ಬಯಸಿದ್ದರೂ ಅವರು ತನ್ನನ್ನು ದುಡಿಯುವ ಜನಗಳ ಇತರ ವಿಭಾಗಗಳಿಗೆ ಸಮರ್ಪಿಸಿಕೊಳ್ಳಲು ನಿರ್ಧರಿಸಿದರು.

ಅಸಂಘಟಿತರ ಸಂಘಟನೆಯತ್ತ

ಹಾಗೆ ನೋಡಿದರೆ ಎಪ್ಪತ್ತರ ದಶಕದಿಂದಲೇ ಕಾಮ್ರೇಡ್ ಕೆವಿಎಸ್ ವಿಮಾ ನೌಕರರ ಚಳುವಳಿಯ ಪರಿಧಿಯಾಚೆಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಎಐಐಇಎಯ ಸಿದ್ಧಾಂತ ಮತ್ತು ಸ್ವಂತ ಅನುಭವ ತನ್ನನ್ನು ಈ ನಿಟ್ಟಿನಲ್ಲಿ ಮುಂದೊತ್ತಿ ಹೋಗುವಂತೆ ಮಾಡಿತು ಎಂದು ಅವರು ಹೇಳುತ್ತಿದ್ದರು. ಅಸಂಘಟಿತರ ಸಂಘಟನೆಯಲ್ಲಿ ವಿಶೇಷ ಮುತುವರ್ಜಿ ವಹಿಸಿದ್ದ ಸಿಐಟಿಯುವಿನ ಜೊತೆ ಕೆಲಸ ಮಾಡಲಾರಂಭಿಸಿದ ಅವರು ಮುಂದೆ ಸಿಐಟಿಯು ರಾಜ್ಯ ಸಮಿತಿಯ ಸದಸ್ಯರಾಗಿ ಆಯ್ಕೆಗೊಂಡರು. ನಿಧನದ ವೇಳೆಗೆ ಅವರು ಸಿಐಟಿಯುನ ರಾಜ್ಯ ಖಜಾಂಚಿಯಾಗಿ ಹಾಗೂ ಸಿಐಟಿಯುನ ಮಾಸಿಕ ಪತ್ರಿಕೆ 'ಸಿಐಟಿಯು ಸಂದೇಶ'ದ ಸಂಪಾದಕ ಮಂಡಳಿಯ ಸದಸ್ಯರೂ, ನಿರ್ವಾಹಕರೂ ಆಗಿದ್ದರು. ಗಾರ್ಮೆಂಟ್ ಕಾರ್ಮಿಕರ ಚಳುವಳಿಗೆ ನೇತೃತ್ವ ನೀಡಿದರಲ್ಲದೆ, ವಿಶೇಷವಾಗಿ ಬೆಂಗಳೂರಿನ ಬಳಿಯ ಜಿಗಣಿ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕ ಸಂಘಟನೆಯ ಬೆಳವಣಿಗೆಗೆ ಅವರು ಮಾರ್ಗದರ್ಶನ ನೀಡಿದರು. 1994 ರಲ್ಲಿ ಗ್ಯಾಟ್ ಸಂಧಿಗೆ ಸಹಿ ಹಾಕುವುದನ್ನು ವಿರೋಧಿಸಿ ದೇಶಾದ್ಯಂತ ನಡೆದ ಹೋರಾಟದ ಭಾಗವಾಗಿ ಬೆಂಗಳೂರಿನಲ್ಲಿ ರಾಜಭವನದ ಎದುರು ನಡೆದ ಚಳುವಳಿಯ ಮುಂಚೂಣಿಯಲ್ಲಿದ್ದ ಕೆವಿಎಸ್ ಪೋಲಿಸ್ ಲಾಠಿ ಏಟುಗಳನ್ನು ಎದುರಿಸಿ ನಿಂತರು. ಆ ದಾಳಿಯಿಂದಾಗಿ ಹೃದಯಾಘಾತಕ್ಕೆ ಒಳಗಾಗಿ ಆಸ್ಪತ್ರೆ ಸೇರಬೇಕಾಯ್ತು. ನಂತರ ಶಸ್ತ್ರ ಚಿಕಿತ್ಸೆಗೂ ಒಳಗಾಗಬೇಕಾಯ್ತು.

ಐಕ್ಯಹೋರಾಟದ ಜೀವನಾಡಿ

ಇವೆಲ್ಲಕ್ಕೂ ಮುಕುಟವಿಟ್ಟಂತೆ ರಾಜ್ಯದ ಕಾರ್ಮಿಕ ಆಂದೋಲನ ಮತ್ತು ಪ್ರಜಾಪ್ರಭುತ್ವ ಆಂದೋಲನಕ್ಕೆ ಕಾಮ್ರೇಡ್ ಕೆವಿಎಸ್‌ರವರ ಪ್ರಮುಖ ಸೇವೆಯೆಂದರೆ ಐಕ್ಯ ಹೋರಾಟಕ್ಕೆ ಅವರು ಪಟ್ಟ ನಿರಂತರ ಶ್ರಮ. ಅವರು ರಾಜ್ಯದಲ್ಲಿ ದುಡಿಯುವ ಜನಗಳ ಐಕ್ಯ ಹೋರಾಟದ ಜೀವನಾಡಿಯಾಗಿದ್ದರು ಎಂದರೂ ತಪ್ಪಾಗಲಿಕ್ಕಿಲ್ಲ. ಅವರಿಗೆ ಶ್ರದ್ಧಾಂಜಲಿ ಅರ್ಪಿಸಲು ಸಿಐಟಿಯು ರಾಜ್ಯ ಸಮಿತಿ ಏರ್ಪಡಿಸಿದ್ದ ಸಭೆಯಲ್ಲಿ ರಾಜ್ಯದ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ವ್ಯಕ್ತಪಡಿಸಿದ ಭಾವನೆಗಳು ಇದಕ್ಕೆ ಸಾಕ್ಷಿ. ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಗೆ, ಅವರ ಪ್ರಾಮಾಣಿಕ ಬದ್ಧತೆಯಿಂದಾಗಿ ಬೆಂಗಳೂರಿನಲ್ಲಿ ಇಡೀ ರಾಜ್ಯದಲ್ಲಿ ಐಕ್ಯ ಚಳುವಳಿಗಳನ್ನು ರೂಪಿಸಲು ತಾಳ್ಮೆಯಿಂದ, ಶ್ರದ್ಧೆಯಿಂದ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಹಾಗೂ ಇತ್ತೀಚೆಗೆ ಕಾರ್ಮಿಕ ಸಂಘಗಳ ಜಂಟಿ ಸಮಿತಿಯ ರಾಜ್ಯ ಸಂಚಾಲಕರಾಗಿ ಅವರು ಸಲ್ಲಿಸಿರುವ ಸೇವೆ ಸದಾ ಸ್ಮರಣೀಯ. ತಾನು ದುಡಿದ ಎಲ್ಲಾ ರಂಗಗಳಲ್ಲಿ ಹೊಸ ನೇತೃತ್ವ ರೂಪಿಸಲು ವಿಶೇಷ ಮುತುವರ್ಜಿ ವಹಿಸಿದ್ದ ಅವರಿಗೆ ಈ ರಂಗದಲ್ಲಿ ಅದಕ್ಕೆ ಸಾಕಷ್ಟು ಸಮಯ ಸಿಕ್ಕಂತಿಲ್ಲ. ನಿಜಕ್ಕೂ ಇಲ್ಲಂತೂ ಅವರ ಸ್ಥಾನವನ್ನು ತುಂಬುವುದು ಕಷ್ಟಸಾಧ್ಯ.

ಸಹಜವಾಗಿ ಸಿಪಿಐ(ಎಂ)ನತ್ತ

ದುಡಿಯುವ ಜನಗಳ ಹಿತಾಸಕ್ತಿಗಳ ರಕ್ಷಣೆಗೆ, ಅದರಿಂದಾಗಿ ಶೋಷಣಾ ಮುಕ್ತ ಸಮಾನತೆಯ ಸಮಾಜದ ಸ್ಥಾಪನೆಯ ಧ್ಯೇಯಕ್ಕೆ ಅವರ ಬದ್ಧತೆ ಸಹಜವಾಗಿಯೇ ಅವರನ್ನು ಸಿಪಿಐ(ಎಂ) ನತ್ತ ಆಕರ್ಷಿಸಿತ್ತು. ಎಪ್ಪತ್ತರ ದಶಕದಿಂದಲೇ ಸಿಪಿಐ(ಎಂ) ನಲ್ಲಿ ದುಡಿಯಲಾರಂಭಿಸಿದ ಅವರು 1989 ರಿಂದ 1995 ರವರೆಗೆ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರಾಗಿ, ನಂತರ 1998 ರಿಂದ 2002 ರವರೆಗೆ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದರು.

ಕಾರ್ಯಕರ್ತರನ್ನು ಗುರುತಿಸಿ, ಅವರಿಗೆ ಕೆಲಸಗಳನ್ನು ಹಚ್ಚಿ, ನಾಯಕರಾಗಿ ಬೆಳೆಸುವ ಕಲೆ ಕೆವಿಎಸ್‌ಗೆ ಕರಗತವಾಗಿತ್ತು. ಆದರೆ ಇದರಲ್ಲಿ ಅಧಿಕಾರಶಾಹಿಯ ಸೋಂಕಿರಲಿಲ್ಲ. ಸರ್ಕಾರದ ಲೆಕ್ಕದಲ್ಲಿ ತಾನಿನ್ನೂ 'ಹಿರಿಯ ನಾಗರೀಕ'ನಾಗಿಲ್ಲ ಎನ್ನುತ್ತಿದ್ದ ಅವರು ನಮಗೆಲ್ಲರಿಗೆ ಬಹಳ ಕಾಲದಿಂದ 'ಹಿರಿಯ ಸಂಗಾತಿ'ಯಾಗಿದ್ದರು. ಕಳೆದ ಇಪ್ಪತ್ತೈದು ವರ್ಷಗಳಿಂದ ಅನಾರೋಗ್ಯ ಸತತವಾಗಿ ಅವರ ಜತೆಗಿದ್ದರೂ ಅದರ ಕೈ ಮೇಲಾಗದಂತೆ ಸದಾ ಚಟುವಟಿಕೆಗಳಲ್ಲಿ ತೊಡಗಿದ್ದರು. ಇತರರನ್ನು ತೊಡಗಿಸುತ್ತಿದ್ದರು. ಜತೆಗೆ ಕಾರ್ಮಿಕ ಆಂದೋಲನದ, ಪ್ರಜಾಪ್ರಭುತ್ವ ಆಂದೋಲನದ ದೌರ್ಬಲ್ಯಗಳು, ಲೋಪ-ದೋಷಗಳ ಬಗ್ಗೆ ಚರ್ಚಿಸುತ್ತಿದ್ದರು. ಕೆಲವೊಮ್ಮೆ ಖಿನ್ನರೂ ಆಗುತ್ತಿದ್ದರು. ವಿಶೇಷವಾಗಿ ಕೋಮುವಾದದ ಪರಿಣಾಮಗಳ ಬಗ್ಗೆ ಚರ್ಚಿಸುವಾಗ. ಆದರೆ ಆ ಖಿನ್ನತೆ ಎಂದೂ ನಿಷ್ಕ್ರಿಯತೆಯತ್ತ ಸಾಗುತ್ತಿರಲಿಲ್ಲ. ಇನ್ನಷ್ಟು ಕ್ರಿಯೆಗೆ ಒತ್ತಾಸೆಯಾಗುತ್ತಿತ್ತು. ನಮ್ಮನ್ನು ಕೆಲಸಕ್ಕೆ ಹಚ್ಚುವ ಅವರ ಫೋನ್ ಕರೆಗಳು ಇನ್ನು ಬರುವುದಿಲ್ಲ, ನಾವು ಸಲಹೆ, ಅಭಿಪ್ರಾಯಕ್ಕೆ ಕರೆ ಮಾಡುವಂತಿಲ್ಲ. ನಮ್ಮ ಚಟುವಟಿಕೆಗಳಲ್ಲಿ ಸಾಮೂಹಿಕವಾಗಿಯೂ, ವೈಯಕ್ತಿಕವಾಗಿಯೂ ನಿರಾಶೆ, ಹತಾಶೆ ಎದುರಾದಾಗ ಕಾಮ್ರೇಡ್ ಕೆ.ವಿ.ಎಸ್.ರವರನ್ನು ನೆನಪಿಸಿಕೊಂಡರೆ ಸಾಕು, ಅವರ ನೆನಪು ಸದಾ ನಮಗೆ ದಾರಿದೀಪ.

\- ಕೆ.ವೇದರಾಜ್

ಸಿಪಿಐ(ಎಂ) ಸಂತಾಪ

ಕೆ.ವಿ.ಎಸ್. ಅವರು ವಿಮಾ ನೌಕರರ ಹಕ್ಕುಗಳ ರಕ್ಷಣೆಗಾಗಿ ವಿಮಾ ನೌಕರರ ಆಂದೋಲನದಲ್ಲಿ ಸುಮಾರು 40 ವರ್ಷಗಳ ಕಾಲ ಶ್ರಮಿಸಿದರು. ಅವರ ಶ್ರಮ ಕೇವಲ ವಿಮಾ ನೌಕರರ ಅಭ್ಯುದಯಕ್ಕೆ ಸೀಮಿತವಾಗಿರದೆ ಇಡಿ ಕಾರ್ಮಿಕ ವರ್ಗದ ವಿಮೋಚನೆಗೆ ಅವರು ತಮ್ಮ ಜೀವನವನ್ನು ಅರ್ಪಿಸಿಕೊಂಡಿದ್ದರು. ಬೆಂಗಳೂರಿನಲ್ಲಿ ಅನೇಕ ಕಾರ್ಮಿಕ ಸಂಘಗಳನ್ನು ಕಟ್ಟಿದ ಅವರು ಕಾರ್ಮಿಕ ಸಂಘಟನೆಗಳ ಜಂಟಿ ಚಳುವಳಿಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದರು. ಕೆ.ವಿ.ಎಸ್. ಅವರ ನಿಧನದಿಂದ ರಾಜ್ಯದ ಕಾರ್ಮಿಕ ವರ್ಗದ ಚಳುವಳಿಗೆ ದೊಡ್ಡ ನಷ್ಟವಾಗಿದೆ.

ಕೆ.ವಿ.ಎಸ್. ಅಗಲಿಕೆಯಿಂದ ಅವರ ಕುಟುಂಬದ ಸದಸ್ಯರಿಗೆ ತುಂಬಾ ಆಘಾತವಾಗಿದ್ದು ಸಿಪಿಐ(ಎಂ) ರಾಜ್ಯ ಸೆಕ್ರೆಟಾರಿಯೇಟ್ ಅವರಿಗೆ ತನ್ನ ಸಾಂತ್ವನ ವ್ಯಕ್ತಪಡಿಸಿದೆ.

..........ಹದ್ದು ರೆಕ್ಕೆ ಬಿಚ್ಚುತ್ತಿದೆ

ಪುಟ 5 ರಿಂದ

ಬುಡಕ್ಕೇ ಏಟು ನೀಡಿದೆ. ತಮ್ಮ ಸರಕಾರಗಳಿಂದ ಭಾರೀ ಸಬ್ಸಿಡಿ ಪಡೆಯುವ ಯುರೋಪಿನ, ಅಮೇರಿಕಾದ ರೈತರ ಹಾಲು, ಮೊಸರು, ಬೆಣ್ಣೆ ಮುಂತಾದ ಡೈರಿ ಉತ್ಪನ್ನಗಳನ್ನು ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ಮಾರಲು ಅವಕಾಶವಾಗಿದೆ. ಇದರಿಂದಾಗಿ ಈ ಹಾಲು, ಮೊಸರು, ಬೆಣ್ಣೆಗಳನ್ನು ಉತ್ಪಾದಿಸುವ ನಮ್ಮ ಉತ್ಪಾದಕರು ದಿವಾಳಿಯಾಗುತ್ತಿದ್ದಾರೆ, ಹತಾಶರಾಗುತ್ತಿದ್ದಾರೆ. ಅಲ್ಲಲ್ಲಿ ಆತ್ಮಹತ್ಯೆಗೂ ಇಳಿದಿದ್ದಾರೆ. ತನ್ನನ್ನೇ ರಕ್ಷಿಸಿಕೊಳ್ಳಲಾಗದ ವ್ಯಕ್ತಿ ಗೋಪಾಲನೆ ಮಾಡುವುದು ಬಿಡಿ , ಅದನ್ನು ರಕ್ಷಿಸುವುದಾದರೂ ಸಾಧ್ಯವೇ?

ಅಯೋಧ್ಯೆಯಲ್ಲಿ ಉತ್ಖನನ

ಜತೆಗೆ ಅಯೋಧ್ಯೆಯಲ್ಲಿ ಉತ್ಖನನ ನಡೆಸಬೇಕೆಂದು ಉತ್ತರ ಪ್ರದೇಶ ಹೈಕೋರ್ಟಿನ ಆದೇಶವನ್ನು ವಿಹೆಚ್‌ಪಿ ತನ್ನ ಅಜೆಂಡಾವನ್ನು ಮುಂದೊತ್ತಲು ಬಿಗಿಯಾಗಿ ಅಪ್ಪಿಕೊಂಡಿದೆ. ಒಂದೆಡೆ ಅವರು ಇದರಿಂದ ದೇಶಾದ್ಯಂತ ಇರುವ ಇಂತಹ 30 ಸಾವಿರ ಕಡೆಗಳಲ್ಲಿ ಇಂತಹುದೇ ಉತ್ಖನನ ಕೇಳುವ ತಮಗೆ ಅವಕಾಶ ದೊರೆತರೆ? ಎಂದು ವಿ.ಹೆಚ್.ಪಿ ಮುಖಂಡರು ಹೇಳಿಕೊಂಡಿದ್ದಾರೆ. ಹೀಗೆ ಅಯೋಧ್ಯಾ ಪ್ರಚಾರವನ್ನು ಕಾಶೀ, ಮಥುರಾಕ್ಕಿಂತಲೂ ಆಚೆಗೆ ವಿಸ್ತರಿಸುವ ಪ್ರಯತ್ನ ನಡೆದಿದೆ. ಇನ್ನೊಂದೆಡೆ, ಈ ಉತ್ಖನನ ತಮ್ಮ ದಾವೆಗಳನ್ನು ಸಾಬೀತು ಮಾಡದಿದ್ದರೆ ಅಂತಹ ತೀರ್ಪಿಗೆ ತಾವು ಬದ್ಧರಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ! ಕಡಬು ಕೈಯಲ್ಲೂ ಇರಬೇಕು, ತಿನ್ನಲೂ ಬೇಕು!

ಏನೇ ಆಗಲಿ ಇಂತಹ ಉತ್ಖನನ ಈಗಿರುವ ಮೊಕದ್ದಮೆಯ ಮೇಲೆಯೂ ಪ್ರಭಾವ ಬೀರುವುದಿಲ್ಲ. ಏಕೆಂದರೆ ಈಗಿರುವ ಮೊಕದ್ದಮೆ ವಿವಾದಿತ ಜಮೀನಿನ ಮಾಲಕತ್ವದ ಬಗ್ಗೆ. ಪ್ರಸ್ತುತ ಭಾರತೀಯ ಸಂವಿಧಾನದಡಿ ಯಾವುದೇ ಆಸ್ತಿಯ ಮಾಲಕತ್ವವನ್ನು ಅದು ಪುರಾತನ ಸ್ಥಿತಿಯ ಮೇಲೆ ನಿರ್ಧರಿಸಲು ಸಾಧ್ಯವಿಲ್ಲ, ಆಧುನಿಕ ಭಾರತದ ಕಾನೂನುಗಳೇ ಅದನ್ನು ನಿರ್ಧರಿಸಬೇಕು.

ಅಲ್ಪಸಂಖ್ಯಾತರ ವಿರುದ್ಧ ದ್ವೇಷ

ಇನ್ನು ಕೋಮು ಭಾವನೆಗಳನ್ನು ಉತ್ತೇಜಿಸುವ ಕಾವಿ ಆಕ್ಟೋಪಸ್‌ನ ಸಾವಿರ ಬಾಹುಗಳಲ್ಲಿ ಅಲ್ಪಸಂಖ್ಯಾತರ ವಿರುದ್ಧ ವಿಷಕಾರುವ ಪ್ರಯತ್ನ ಇಲ್ಲದಿರಲು ಸಾಧ್ಯವೇ ಇಲ್ಲವಲ್ಲ. ಗುಜರಾತ್ ಸರ್ಕಾರ ಈಗ ರಾಜ್ಯದಲ್ಲಿ ಕ್ರೈಸ್ತರ ಸರ್ವೆ ನಡೆಸುತ್ತಿದೆ ಎಂದು ಅಖಿಲ ಭಾರತ ಕ್ರೈಸ್ತ ಮಂಡಳಿ ಹೇಳುತ್ತದೆ. ಇಂತಹ ಸರ್ವೆಗಳ ಆಧಾರದಲ್ಲಿಯೇ ಆರ್.ಎಸ್.ಎಸ್. ಮತ್ತು ಅದರ ಕೇಸರಿ ಪಡೆಗಳು ಗಲಭೆ ಸನ್ನಿವೇಶಗಳಲ್ಲಿ ಯಾರನ್ನು ಹೊಡೆದು ಹಾಕಬೇಕು ಎಂದು ನಿರ್ಧರಿಸಿರುವುದು ಗುಜರಾತಿನಲ್ಲಿ ಮುಂದಿನ ಹತ್ಯಾಕಾಂಡದ ಗುರಿ ಯಾರು ಎಂಬುದನ್ನು ಗುರುತಿಸಲಾಗಿದೆ ಎಂದು ಸಾರುತ್ತದೆ.

ಮುಂದೆ ಕೋಮು ಭಾವೋದ್ವೇಗಗಳನ್ನು ಬಡಿದೆಬ್ಬಿಸುವ ಇನ್ನಷ್ಟು ವಿವಾದಗಳನ್ನು ಎಬ್ಬಿಸುವ ಪ್ರಯತ್ನಗಳೂ ನಡೆಯಲಿವೆ. ಸಾವರ್ಕರ್ ತನ್ನ ಸೈದ್ಧಾಂತಿಕ ಪ್ರತೀಕ ಎಂದು ಆರ್.ಎಸ್.ಎಸ್ ಪ್ರತಿನಿಧಿ ಸಭೆ ನಿರ್ಧರಿಸಿದೆ. ಗಾಂಧೀಜೀ ಭಾರತೀಯ ರಾಷ್ಟ್ರವಾದಕ್ಕೆ ಎದುರಾಗಿ ಸಾವರ್ಕರ್‌ರವರ ಸಾಂಸ್ಕೃತಿಕ (ಅಂದರೆ ಹಿಂದೂ) ರಾಷ್ಟ್ರವಾದವನ್ನು ಅದು ಮುಂದಿಟ್ಟಿದೆ. ಎಲ್ಲಾ ಕಡೆ ಜನತೆಯ ಅಸಂತೃಪ್ತಿ ತೀವ್ರಗೊಳ್ಳುತ್ತಿರುವಾಗ ತನ್ನ ಸಾರ್ವಜನಿಕ ಬೆಂಬಲವನ್ನು ಹೇಗಾದರೂ ಉಳಿಸಿಕೊಳ್ಳಲು ಆರ್.ಎಸ್.ಎಸ್. ನೇತೃತ್ವದ ಸರಕಾರದ ಮುಂದೆ ಉಳಿದಿರುವ ದಾರಿ ಇದೊಂದೆ.

ಅಂತಿಮವಾಗಿ, ಹೆಚ್ಚುತ್ತಿರುವ ಜನಗಳ ಅತೃಪ್ತಿಯನ್ನು ಗಮನದಲ್ಲಿಟ್ಟುಕೊಂಡು ಸರಕಾರ ಮತ್ತೊಮ್ಮೆ ತನ್ನ ಬಜೆಟ್ ಪ್ರಸ್ತಾಪಗಳನ್ನು ಹಿಂದಕ್ಕೆ ಪಡೆದೀತೆ?, ರಸಗೊಬ್ಬರ ಬೆಲೆಗಳ ಹೆಚ್ಚಳವನ್ನು ಹಿಂದಕ್ಕೆ ಪಡೆದಿದೆ. ಇದನ್ನು ಸರಕಾರದ ರೈತ-ಪರ ಮುಖ ಎಂದು ಹೇಳಲಾಗುತ್ತಿದೆ. ಇದು ನಿಜವಾಗಿದ್ದರೆ ಈ ಬೆಲೆಯೇರಿಕೆಯನ್ನು ಜನಗಳ ಮೇಲೆ ಹೇರುವ ಯೋಜನೆಯಾದರೂ ಏಕೆ ಬಂತು? ಇಂತಹ ಮಂಡನೆ, ವಿಶ್ವಾಸಘಾತಗಳನ್ನು ಜನ ಅರಿತುಕೊಳ್ಳಬಹುದು.

ಆದ್ದರಿಂದ "ದುಷ್ಟರು ಗೆಲ್ಲಬೇಕಾದರೆ, ಶಿಷ್ಟರು ಮೌನವಾಗಿದ್ದರೆ ಸಾಕು" ಎಂಬ ಯುಗ-ಯುಗಾಂತರಗಳಿಂದ ನಮಗೆ ಬಂದಿರುವ ಸೂಕ್ತಿಯನ್ನು, ಮತ್ತೆ ನೆನಪಿಸಿಕೊಳ್ಳಬೇಕಾಗಿದೆ.

ಇಂತಹ ಮೌನವನ್ನು ಮುರಿಯಬೇಕಾದ ಸಮಯವೀಗ ಬಂದಿದೆ.

ಖಾವೀ ಪಡೆ ಹಾವಳಿ....

ಪುಟ 3 ರಿಂದ

ವಿರೋಧ ಪಕ್ಷದ ನಾಯಕರ ಜಗದೀಶ್ ಶೆಟ್ಟರ್. ಇದಕ್ಕೆ ಸಾಂತ್ವನ ಎಂಬಂತೆ ಕೃಷ್ಣರ ಸಂಪುಟದ ಸಚಿವ ರೋಷನ್ ಬೇಗ್ ಆ ಪ್ರದೇಶಕ್ಕೆ ಹೋಗಿ 'ಪಾಕಿಸ್ತಾನ ಬೆಂಬಲಿಸಿದರೆ ಗುಂಡಿಕ್ಕಿ' ಎಂದು ದೇಶಪ್ರೇಮ ಸಾರುತ್ತಾರೆ. ಇಲ್ಲಿ ಕೇವಲ 'ಸಾಂತ್ವನ'ದ ವರಸೆಯಾಗುತ್ತದೆ ಹೊರತು, ಕ್ರೀಡೆಯನ್ನು 'ಕೋಮುವಾದೀಕರಣ'ಗೊಳಿಸುವ ದುಷ್ಟ ರಾಜಕಾರಣ ಬಯಲುಗೊಳಿಸಲಾಗುವುದಿಲ್ಲ.

ಹಾಗೆಯೇ ಚಿಕ್ಕಮಗಳೂರಿನ ರಸ್ತೆಯೊಂದರನ್ನು ಅಗಲಗೊಳಿಸಬೇಕೆಂದು ಯೋಜನೆ ರೂಪಿಸಿಕೊಂಡಿರುವ ಪುರಸಭೆ, ಅಡ್ಡ ಇರುವ ಮರ ಕಡಿದದ್ದು ದೊಡ್ಡ ವಿವಾದವಾಯಿತು. ರಾದ್ಧಾಂತ ಎಬ್ಬಿಸಿ, ಬಂದ್, ಕಲ್ಲು ತೂರಾಟಕ್ಕೆ ಇಳಿದದ್ದು ಈ ಚೆಡ್ಡಿಪಡೆ. ಅದು ದೇವರ ಮರವಂತೆ. ಅದು ಅಲ್ಲೇ ಇರಬೇಕಂತೆ. ರಾಜ್ಯದಲ್ಲಿ ರಸ್ತೆ ಅಗಲೀಕರಣಕ್ಕೆ ಸಾವಿರಾರು ಮರಗಳು ನೆಲಕ್ಕುರುಳಿವೆ. ಹಾಗೆ ಚಿಕ್ಕಮಗಳೂರಿನಲ್ಲಿ ಆ ಮರದಲ್ಲಿ ದೇವರೆ ಇರುವುದಾದರೆ ಸ್ಥಳಾಂತರಿಸುತ್ತೇವೆ ಎಂದರೂ ಯಾಕೆ ಕೇಳಬಾರದು! ಇದಕ್ಕೆ ಒಂದು ಕಟ್ಟು ಕಥೆಯನ್ನು ಹೊಸೆದರು. 'ಅದೇ ಮಾರ್ಗದಲ್ಲಿ ಮುಸ್ಲಿಮರ ದರ್ಗಾವಿದೆ. ಅದನ್ನು ಬಿಟ್ಟಿದ್ದಾರೆ'ಎಂದು. ತನಿಖೆ ನಡೆಸಿದ ಬಳಿಕ ಇದು ಬಜರಂಗದಳದ ಹಸೀ ಸುಳ್ಳು ಪ್ರಚಾರ ಎಂಬುದು ಗೊತ್ತಾಯಿತು. ಇಂತಹ ಹಸಿಸುಳ್ಳಿಗೆ ಬಣ್ಣ ಕಟ್ಟಿ ವಿಧಾನಸಭೆಯಲ್ಲಿ ವಿರೋಧ ಪಕ್ಷದ ಬಿಜೆಪಿ ನಾಯಕರು ಕೂಗಾಡಿದರು. ಗುಜರಾತ್‌ನಲ್ಲಿ ವಿದ್ವಾನ್-ಸಂತ ಚಿಸ್ತಿ ದರ್ಗಾವನ್ನೇ ನೆಲಸಮ ಮಾಡಿದವರಲ್ಲವೇ ಇವರು? ಆದ್ದರಿಂದ ಇದು ಚಿಕ್ಕಮಗಳೂರನ್ನು ಇನ್ನೊಂದು ಅಯೋಧ್ಯಾ ಮಾಡುವ ತೊಗಾಡಿಯಾ ಸಂತತಿಯ ಈಚಿಗಿನ ವರಸೆ. ವಿಹೆಚ್‌ಪಿ ನಾಯಕರ ಉದ್ರೇಕಕಾರಿ ಮಾತುಗಳನ್ನು ತಡೆಯಲಿಲ್ಲ ಎಂಬುದು ಒಂದು ಅಂಶ. ಇದಕ್ಕೆ ಕೆಲವೇ ದಿನಗಳ ಮೊದಲು ಹಿಂದು-ಮುಸ್ಲಿಂ ಯುವಕ ಯುವತಿ ವಿವಾಹವಾಗಲಿದ್ದಾರೆಂದು ಗುಲ್ಲೆಬ್ಬಿಸಿ ಗಲಾಟೆ ನಡೆಸಿದ್ದರು.

ಬೆಂಗಳೂರಿನ ಪಕ್ಕದ ತಲಘಟ್ಟಪುರದಲ್ಲಿ ಮತಾಂತರ ನಡೆಸಲಾಗುತ್ತಿದೆಯೆಂದು ಚರ್ಚ್ ಹಾಗೂ ಪಾದ್ರಿಯ ಮೇಲೆ ಇದೇ 'ಖಾವಿ ಪಡೆ' ಧಾಳಿ ಮಾಡಿದ್ದೂ ಆಗಿದೆ.

ಅಯೋಧ್ಯೆಯಲ್ಲಿನ ಉತ್ಖನನದಿಂದ ಉತ್ತೇಜಿತರಾದ ಚೆಡ್ಡಿಪಡೆ ಈಗ ಕಾರವಾರದ ಕಡಲ ನಡುವಿನ ಸುಂದರ ಅಂಜುದ್ವೀಪ ಕಣ್ಣಿಗೆ ಬಿದ್ದು, ಹಾರೆ ಪಿಕಾಸಿ ಹಿಡಿದು ಹೊರಟಿದೆ. ಹೊರಟಿರುವುದು ಸಮಾರು 461 ವರುಷಗಳ ಹಿಂದೆ ಕಟ್ಟಲಾದ ಚರ್ಚ್ ಕೆಡವಲು. 'ಅದು ಮೂಲತಃ ಚರ್ಚ್ ಅಲ್ಲ. ಅಲ್ಲಿದ್ದದ್ದು 'ಆರ್ಯಾದುರ್ಗಾ' ದೇವಸ್ಥಾನವೆಂದು' ವಾದ ಹೂಡುತ್ತಾ ಚರ್ಚ್ ಮೇಲೆ 'ಕರಸೇವೆ' ನಡೆಸಿ, ರಕ್ತದೋಕುಳಿಯಾಡಲು ಸಿದ್ಧರಾಗಿದ್ದಾರೆ. ಅದಕ್ಕಾಗಿ ಏನೇನೋ ಪುರಾಣ-ಇತಿಹಾಸ ಹೇಳತೊಡಗಿದ್ದಾರೆ. ಇದು ಭಾರೀ ಅನಾಹುತಕಾರಿ ಪ್ರಸಂಗವಾಗುವ ಲಕ್ಷಣಗಳಿವೆ.

ಈಗ ದೊರೆತ ಮಾಹಿತಿಯಂತೆ ವಿಶ್ವಹಿಂದೂ ಪರಿಷತ್, ಬಜರಂಗ ದಳದ ಪಡೆ ಮಡಿಕೇರಿ ಯಲ್ಲಿರುವ 'ಮಹಾರಾಜ'ರ ಗೋರಿ(ಗದ್ದುಗೆ) ಬಳಿಯ ವಿಶಾಲ ಬಯಲಿನಂಚಿನಲ್ಲಿ 30 ವರುಷಗಳ ಹಿಂದಿನಿಂದಲೂ ವಾಸವಾಗಿರುವ (ಅ)'ಆಕ್ರಮಣಕಾರರ'ನ್ನು ತೊಲಗಿಸಬೇಕೆಂದು ಚಳುವಳಿ ಹೂಡಲು ಸಿದ್ಧಗೊಳ್ಳುತ್ತಿದೆ. ಅದಕ್ಕೆ ಕೋರ್ಟ್ - ಕಾನೂನು ಎಂದೇನನ್ನೋ ಹೇಳತೊಡಗಿದೆ. ಅಲ್ಲಿ ಸತ್ತುಹೋಗಿರುವ ರಾಜರ (ಈ ರಾಜರು ಮಹಾ ಪ್ರಜಾಪೀಡಕರೆಂಬ ಕುಖ್ಯಾತಿಯಿದೆ) ಗದ್ದುಗೆ ಉಳಿಸಲು ಬದುಕಿರುವವರ ಜೀವ ತೆಗೆದುಕೊಳ್ಳುವ ಅಪಾಯವಿದೆ. ಶನಿವಾರದಂದು ಸಿಕ್ಕ ವರದಿಯಂತೆ ಮೋಹರಂ ಹಬ್ಬದ ಸಂದರ್ಭ ಬಳಸಿ ಚಾಮರಾಜನಗರದಲ್ಲಿ ಗಲಭೆಗಳು ಎದ್ದಿವೆ. ಕೆಲ ದಿನಗಳ ಹಿಂದೆ ನಾಗಮಂಗಲದ ದರ್ಗಾ ಧ್ವಂಸದ ಯತ್ನಗಳು ನಡೆದಿವೆ.

ಹೀಗೆ ಒಂದೇ ಎರಡೇ.... ಆರ್‌ಎಸ್‌ಎಸ್ ತನ್ನ ದೀರ್ಘಾವಧಿ ಯೋಜನೆಯನ್ನು ಜಾರಿ ಮಾಡಲು ಅತ್ಯಂತ ವ್ಯವಸ್ಥಿತವಾದ ತಯಾರಿ ಮಾಡಿಕೊಂಡು ಇಳಿದಿದೆ. ಇನ್ನು ಪ್ರತಿ ಊರುಕೇರಿಗಳಲ್ಲಿಯೂ ಇಂತಹ ವ್ಯಾಜ್ಯಗಳು ಭುಗಿಲೇಳಲಿವೆ. ಆದರೆ ಕೃಷ್ಣರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷ ಇದನ್ನು 'ಸಾಂತ್ವನ'ಗೊಳಿಸುವ ಸೂತ್ರ ಹಿಡಿದು ಕೋಮುಸೌಹಾರ್ದತೆ ಕಾಪಾಡುವ ನಾಟಕ ಆಡುತ್ತಿದೆ.

ಕೇಸರೀಕರಣ : ಬೆನ್ನಟ್ಟಿದ ಬಿಜೆಪಿ!

'ಕರ್ನಾಟಕದಲ್ಲಿ ಶಿಕ್ಷಣದ ಕೇಸರೀಕರಣವಾಗಿದೆಯೇ?' ಹೀಗೆಂದು ವಿಧಾನಸಭೆಯಲ್ಲಿ ಕೇಳಿದವರು ಬೇರಾರೂ ಅಲ್ಲ. ಸ್ವತಃ ಬಿಜೆಪಿ ಶಾಸಕರು. ಆದರೆ ಇದಕ್ಕೆ ಸ್ಪಷ್ಟ ಉತ್ತರ ನೀಡಲಾಗದೇ ಚಡಪಡಿಸಿದವರು ಬುದ್ಧಿಜೀವಿ ಶಿಕ್ಷಣಸಚಿವ ಪ್ರೊ. ಬಿ.ಕೆ.ಚಂದ್ರಶೇಖರ್‌ರವರು. ಈಗಾಗಲೇ ವರದಿಯಾದಂತೆ ಇರುವುದನ್ನಾದರೂ ಗುರುತಿಸಿ ಸ್ಪಷ್ಟನೆ ನೀಡಿ ಸರಿಪಡಿಸುವ ದೃಢ ಕ್ರಮ, ಆಗತ್ಯದ ಬಗ್ಗೆ ಹೇಳಬಹುದಿತ್ತು. ಅಥವಾ ಈ ಸಂದರ್ಭವನ್ನೇ ಖಾವಿ ಪಡೆಯ ಕೋಮುವಾದೀಕರಣದ ಬಗ್ಗೆ ಮರುಧಾಳಿ ಮಾಡಿ ರಾಜಕೀಯ ಎಚ್ಚರ ಮೂಡಿಸಬಹುದಿತ್ತು. ಇದಾವುದನ್ನು ಮಾಡದೇ 'ಯಾಕಿದ್ದೀತು ಮಾರಾಯ. ಹಿಂಗೆ ಮುಗಿಸಿಬಿಡೋಣ' ಎಂಬಂತೆ ಸಚಿವರು ಆಡಿದ್ದು ಚೆಡ್ಡಿಗಳು ಮೇಲಿಂದ ಮೇಲೆ ಬೆನ್ನು ತಟ್ಟಿದ್ದು ಅನಾಹುತದ ಸೂಚನೆಯಾಗಿದ್ದಿತು.

ಕ್ಷೇತ್ರಗಳ ಪುನರ್‌ವಿಂಗಡಣೆ

ದೇಶದಲ್ಲಿ ಹಾಗೆಯೇ ರಾಜ್ಯದಲ್ಲಿ ವಿಧಾನಸಭಾ ಕ್ಷೇತ್ರಗಳ ವಿಂಗಡಣೆಯ ಪ್ರಕ್ರಿಯೆ ನಡೆದಿದೆ. ಅದನ್ನು ಅನುಸರಿಸಿ ಅನೇಕ ಊಹಾಪೋಹಗಳು ಪ್ರಚಲಿತದಲ್ಲಿವೆ. ಕೆಲವರಂತೂ ಈಗಾಗಲೇ ಆ ಕ್ಷೇತ್ರಗಳ ಮೀಸಲಾತಿ ಪಟ್ಟಿಯನ್ನೇ ಪ್ರಕಟಿಸುತ್ತಿದ್ದಾರೆ. ಜೆಡಿ(ಎಸ್) ಅದ್ಯಕ್ಷ ಸಿದ್ದರಾಮಯ್ಯನವರು ಇದು ಕಾಂಗ್ರೆಸ್‌ಗೆ ಅನುಕೂಲಕರ ಪಟ್ಟಿ ಎಂದು ಆಡಿದರೆಂಬ ಮಾತನ್ನೇ ಹಿಡಿದು ಕೆಲವು ಶಾಸಕರು 'ಹಕ್ಕುಚ್ಯುತಿ' ನಿರ್ಣಯ ತರಲು ಹೊರಟು ದಿನದ ಕಲಾಪ ತಳ್ಳಿದಾರೆ. ಒಟ್ಟಾರೆ ಅಸಲೀ ಸಂಗತಿ ಏನೆಂದು ಜನ ಕೇಳತೊಡಗಿದ್ದಾರೆ.

ಫೆಬ್ರವರಿ 13 ರಂದು ಚುನಾವಣಾ ಆಯೋಗವು ನೀಡಿದ ಪತ್ರಿಕಾ ಪ್ರಕಟಣೆಯಂತೆ ಈ ಪಟ್ಟಿ ಅಂತಿಮವಾಗಿಸಲು ಕರಡು ಸಿದ್ಧಗೊಳಿಸಲಾಗುತ್ತಿದೆ ಎಂದಿದೆ. ಅದಕ್ಕಾಗಿ 25.2.2003 ರಂದು ಕ್ಷೇತ್ರ ಪುನರ್ ವಿಂಗಡಣಾ ಸಮಿತಿಯ ಸಭೆಯೊಂದು ಸೇರಲಿದ್ದು ಸಹ ಸದಸ್ಯರ ಅಭಿಪ್ರಾಯ ಪಡೆಯಲಾಗುವುದು ಎಂದು ಪ್ರಕಟಿಸಿತ್ತು. ಇಂತಹ ಸನ್ನಿವೇಶದಲ್ಲಿ ಆ ಸಮಿತಿಯ ಸದಸ್ಯರೂ ಆಗಿರುವ ವಿಧಾನಸಭಾಧ್ಯಕ್ಷರಾದ ಎಂ.ವಿ.ವೆಂಕಟಪ್ಪನವರು ಸಹ ಈ ತಿಂಗಳ ಅಂತ್ಯದಲ್ಲಿ ಕರಡು ಪಟ್ಟಿ ತಮ್ಮ ಕೈ ಸೇರುವುದಾಗಿ ನಂತರ ಅದರನ್ವಯ ತಾವು ಎಲ್ಲಾ ಕ್ಷೇತ್ರಗಳ ಪ್ರತಿನಿಧಿಗಳನ್ನು ಸಂಪರ್ಕಿಸಿ, ಅಭಿಪ್ರಾಯ ಪಡೆದು ಆಯೋಗಕ್ಕೆ ಸಲ್ಲಿಸಲಾಗುವುದು ಎಂದರು. ನಂತರ ಸಾರ್ವಜನಿಕ ಆಕ್ಷೇಪಗಳಿಗೂ ಅವಕಾಶವಿದೆಯೆಂದಿದ್ದಾರೆ. ಇದಕ್ಕೆ ಕಾಲಾವಕಾಶ ಬೇಕಾಗುತ್ತದೆ.

ಈ ಕ್ಷೇತ್ರ ಪುನರ್ ವಿಂಗಡನೆ ಪ್ರಕ್ರಿಯೆ ಆರಂಭಗೊಂಡಿರುವಾಗ ಸಹಜವಾಗಿ ಎಲ್ಲರಲ್ಲೂ ಕುತೂಹಲ, ಕೆಲವರಲ್ಲಿ ಆಂತಕಗಳು ಎದ್ದಿವೆ. ಇದನ್ನು ಬಹಳ ವಿಶಾಲವಾದ ಸಂವಾದದೊಂದಿಗೆ ಮಾಡಲಾಗುವುದೆಂದರೂ ರಾಜ್ಯದಲ್ಲಿ ಹಿಂದಿನ ಅನುಭವವು ಅಧಿಕಾರಸ್ಥ ಕಾಂಗ್ರೆಸ್ ಅನುಕೂಲವಾಗಿಯೇ ಮಾಡಲಾಗಿದೆಯೆಂಬ ಮಾತುಗಳು ಹಲವು ದಶಕಗಳ ನಂತರವೂ ಕೇಳಿಬರುತ್ತಿದೆ. ಸದ್ಯ ಕರಡು ಪಟ್ಟಿ ಸಿದ್ಧಗೊಳ್ಳುತ್ತಿದೆಯೆಂಬುದು ಮಾತ್ರ ಖಚಿತವಿದೆ. ಪೂರ್ಣ ಹೊರಬಂದ ನಂತರವಷ್ಟೇ ಏನಾದರೂ ಹೇಳಲಾದೀತು. ಆದರೆ ಪಿತೂರಿ ಮತ್ತು ಮೇಲಾಟಗಳನ್ನೇ ವಿಧಾನವಾಗಿಸಿಕೊಂಡಿರುವ ಬಲಪಂಥೀಯ ಪಕ್ಷಗಳಿಗೆ; ಅದರ ನಾಯಕರಿಗೆ ಇದು ನಿತ್ಯ ರಸಗವಳವಾಗಿದೆ.

ಅಖಿಲ ಭಾರತ ಕಿಸಾನ್ ಸಭಾದ ಐತಿಹಾಸಿಕ 30ನೇ ಸಮ್ಮೇಳನ ಪಂಜಾಬ್‌ನ ಜಲಂಧರ್‌ನಲ್ಲಿ ಜರುಗಿತು. ಅದರ ಕೆಲವು ಕಲಾಪಗಳ ಸಂಕ್ಷಿಪ್ತ ವರದಿ ಇಲ್ಲಿದೆ.

ತಳಮಳ ಮತ್ತು ಬೆಳವಣಿಗೆಯ ದಿಕ್ಸೂಚಿ

ಎ.ಐ.ಕೆ.ಎಸ್. ಸಮ್ಮೇಳನ

ವರದಿ : ಯು.ಬಸವರಾಜು

ಅಖಿಲ ಭಾರತ ಕಿಸಾನ್ ಸಭಾದ 30ನೇ ಸಮ್ಮೇಳನವು ಬಾಬಾ ಸೋಹಾನ್‌ಸಿಂಗ್ ನಗರದಲ್ಲಿ (ಜಲಂಧರ್) ಮಾರ್ಚ್, 06,2003 ರಂದು, ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಅಖಿಲ ಭಾರತ ಕಿಸಾನ್ ಸಭಾದ ಸ್ಥಾಪಕ ಸದಸ್ಯರಲ್ಲಿ (1934) ಒಬ್ಬರಾದ ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಹಿರಿಯ ಉಪಾಧ್ಯಕ್ಷರು, ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಹರಿಕಿಷನ್ ಸಿಂಗ್ ಸುರ್ಜಿತ್‌ರವರು ಕೆಂಬಾವುಟವನ್ನು ಹಾರಿಸುವುದರೊಂದಿಗೆ ವಿದ್ಯುಕ್ತವಾಗಿ ಆರಂಭಗೊಂಡಿತು.

ದೇಶದಾದ್ಯಂತ ಒಟ್ಟು 23ರಾಜ್ಯಗಳನ್ನು ಹಾಗೂ 1,57,72,167 ಸದಸ್ಯರನ್ನು ಪ್ರತಿನಿಧಿಸಿ 657 ಜನಪ್ರತಿನಿಧಿಗಳು ಹಾಗೂ 25 ಜನ ವೀಕ್ಷಕರು ಹಾಗೂ ಚೀನಾ, ವಿಯೆಟ್ನಾಂ, ಜನತಾ ಪ್ರಜಾಸತ್ತಾತ್ಮಕ ಗಣರಾಜ್ಯ ಕೋರಿಯಾ, ಕ್ಯೂಬಾ, ಶ್ರೀಲಂಕಾ ಹಾಗೂ ಟ್ರೇಡ್ ಯೂನಿಯನ್ ಇಂಟರ್ ನ್ಯಾಷನಲ್ ಸಂಘಟನೆಯ ಅಧ್ಯಕ್ಷರಾದ ಫ್ರಾನ್ಸ್‌ನ ಇವರು ಸೌಹಾರ್ದ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು!

ಧ್ವಜಾರೋಹಣ ಮುಕ್ತಾಯವಾಗುತ್ತಿದ್ದಂತೆಯೇ ಕಾಂ.ಹರಿಕಿಷನ್‌ಸಿಂಗ್ ಸುರ್ಜಿತ್ ರವರು ಹುತಾತ್ಮರ ವೇದಿಕೆಗೆ ತೆರಳಿ ಪುಷ್ಪಗಳನ್ನು ಅರ್ಪಿಸಿ ಮುನ್ನಡೆದರು. ಎಸ್. ರಾಮಚಂದ್ರನ್ ಪಿಳ್ಳೈ, ಉಪಾಧ್ಯಕ್ಷರಾದ ಬಿನಾಯ್ ಕೊನೇರ ನಂತರ ವಿದೇಶೀ ಸೌಹಾರ್ದ ಪ್ರತಿನಿಧಿಗಳು ಮತ್ತು ಪ್ರತಿನಿಧಿ ವೀಕ್ಷಕರು, ಸ್ವಯಂ ಸೇವಕರು ತಮ್ಮ ಗೌರವ ವಂದನೆಯನ್ನು ಸಲ್ಲಿಸಿದರು.

ಎಸ್.ಆರ್.ಪಿಳ್ಳೈ ಅಧ್ಯಕ್ಷತೆಯೊಂದಿಗೆ ಅಗಲಿದ ಸಂಗಾತಿ ಹೃದಯಪೂರ್ವಕ ಶ್ರದ್ಧಾಂಜಲಿ ಸಲ್ಲಿಸುವುದರೊಂದಿಗೆ, ಉದ್ಘಾಟನಾ ಸಮಾರಂಭ ಆರಂಭಗೊಂಡಿತು. ಹರಿಕಿಷನ್ ಸಿಂಗ್ ಸುರ್ಜಿತ್ ಉದ್ಘಾಟಿಸಿದರು.

ಈ ಬಹಿರಂಗ ಅಧಿವೇಶನವು

ಇರಾಕ್ ಮೇಲೆ ಅಮೇರಿಕಾದ ದಾಳಿಯನ್ನು ಖಂಡಿಸಿ ನಿರ್ಣಯ ಅಂಗೀಕರಿಸಿತು. ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ಹಾಗೂ ರೈತ ವಿರೋದಿ ಬಜೆಟನ್ನು ಧಿಕ್ಕರಿಸಿ ನಿರ್ಣಯವನ್ನು ಅಂಗೀಕರಿಸಿತು. ಅದೇರೀತಿ

ತ್ರಿಪುರಾದಲ್ಲಿ ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಂಬಲಿಸಿದ ಹಾಗೂ ದೇಶವಿರೋಧಿ ಐಎನ್‌ಪಿಟಿ ಹಾಗೂ ಮಿತ್ರಪಕ್ಷವಾದ ಕಾಂಗ್ರೆಸ್ನು ಅದೇ ರೀತಿ ಕೋಮುವಾದಿ ಬಿಜೆಪಿಯನ್ನು ಸೋಲಿಸಿದ ತ್ರಿಪುರಾದ ಜನತೆಯನ್ನು ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅಭಿನಂದಿಸಿ ನಿರ್ಣಯ ಅಂಗೀಕರಿಸಿತು.

ಎಂ.ಕೆ.ಪಂಧೆ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್‌ನ ಅಖಿಲ ಭಾರತ ಅಧ್ಯಕ್ಷರು ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿ ಶುಭ ಕೋರಿದರು.



ದೇಶದ ಇನ್ನೆರಡು ಸಂಘಟನೆಗಳಾದ ಅಖಿಲ ಭಾರತ ಕಿಸಾನ್ ಸಭಾ (ಅಜೇಯ್ ಭವನ) ಮತ್ತು ಮಹಾರಾಷ್ಟ್ರ ಸಂಘಟನೆ ಪಾಲ್ಗೊಂಡು ಶುಭಾಷಯ ಕೋರಿದವು. ಮಾತ್ರವಲ್ಲ ಜಂಟಿ ಹೋರಾಟದಲ್ಲಿ ಪಾಲ್ಗೊಳ್ಳುವುದಾಗಿ ಘೋಷಿಸಿದವು. ಅಲ್ಲದೆ ವಿಯೆಟ್ನಾಂ ದೇಶದ ರೈತರ ಸಂಘಟನೆಯಿಂದ ಶುಭ ಹಾರೈಸಿ ಸಾಮ್ರಾಜ್ಯಶಾಹಿ ಆಕ್ರಮಣವನ್ನು ಎದುರಿಸಲು ಒಗ್ಗೂಡಿ ಹೋರಾಡೋಣವೆಂದು ಶುಭ ಹಾರೈಸಿದರು. ಪ್ರಧಾನ ಕಾರ್ಯದರ್ಶಿ ವಂದಿಸಿದರೆ, ಸಮ್ಮೇಳನ ಯಶಸ್ವಿಯಾಗಿ ನಡೆಸಿಕೊಡಲು ರಚಿಸಲಾಗಿದ್ದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ರಾಜ್‌ಪಾಲ್‌ಸಿಂಗ್ ಪಂಜಾಬ್‌ನ ಸಮರಧೀರ ಹೋರಾಟಗಳ ಕಥೆಯನ್ನು ವಿವರಿಸುತ್ತಾ, ತ್ಯಾಗ- ಬಲಿದಾನಗಳಿಗೆ ಹೆಸರಾದ ಪಂಜಾಬ್ ನಾಡಿಗೆ ಪ್ರತಿನಿಧಿಗಳನ್ನು ಸ್ವಾಗತಿಸಿ ಬರಮಾಡಿಕೊಂಡರೆ, ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕೆ. ವರದರಾಜನ್ ವಂದಿಸುವುದರೊಂದಿಗೆ ಬಹಿರಂಗ ಅಧಿವೇಶನ ಮುಕ್ತಾಯಗೊಂಡಿತು. ಪತ್ರಕರ್ತರು, ಟಿ.ವಿ.ಮಾಧ್ಯಮದವರು, ಬೆಂಬಲಿಗರು ಕಿಕ್ಕಿರಿದು ನೆರೆದಿದ್ದರು.

ಸಂಜೆ ಪ್ರತಿನಿಧಿಗಳ ಅಧಿವೇಶನ ಆರಂಭಗೊಂಡಿತು. ಅಖಿಲ ಭಾರತ ಕಿಸಾನ್ ಸಭಾದ ಅಧ್ಯಕ್ಷರಾದ ಎಸ್.ಆರ್.ಪಿಳ್ಳೈ, ಉಪಾಧ್ಯಕ್ಷರಾದ ಬಿನಾಯ್ ಕೊನಾರ್, ರಾಮನಾರಾಯಣ ಗೋಸ್ವಾಮಿ, ಪಲ್ಲೋಳಿ ಮಹಮ್ಮದ್ ಕುಟ್ಟಿ ಸರದಿಯಂತೆ ಅಧಿವೇಶನಗಳ ಅಧ್ಯಕ್ಷತೆಯನ್ನು ವಹಿಸಿಕೊಂಡು ಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ನಂತರ ಕೇಂದ್ರ ಕಿಸಾನ್ ಕೌನ್ಸಿಲ್ ಪರವಾಗಿ ಎ.ಐ.ಕೆ.ಎಸ್ ಪ್ರಧಾನ ಕಾರ್ಯದರ್ಶಿಗಳಾದ ಕೆ.ವರದರಾಜನ್ ಪ್ರಧಾನ ಕಾರ್ಯದರ್ಶಿಗಳ ವರದಿಯನ್ನು ಮಂಡಿಸಿದರು. ಕಳೆದ ಕೋಜಿಕೊಡ್ ಸಮ್ಮೇಳನ ನಡೆದ ಈ 4 ವರ್ಷಗಳ ಅವಧಿಯಲ್ಲಿ ಕೃಷಿ ರಂಗದ ಮೇಲೆ ಮಾಡಿದ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಪರಿಣಾಮಗಳನ್ನು ಮತ್ತು ಅವುಗಳಿಂದಾಗಿ ಉದ್ಭವಿಸಿದ ತಳಮಳಗಳನ್ನು ಮತ್ತು ಅದರಲ್ಲಿ ನಾವು ಮಾಡಿದ ಮಧ್ಯ ಪ್ರವೇಶವನ್ನು ಹಾಗೂ ಆ ಮಧ್ಯ ಪ್ರವೇಶದಿಂದಾದ ಬೆಳವಣಿಗೆಯ ದಿಕ್ಕಿನ ಅನುಭವಗಳನ್ನು, ಮುಂದೆ ದೇಶದ ರೈತರು ಸಾಗಬೇಕಾದ ದಿಕ್ಕನ್ನೂ, ಮತ್ತು ಕಿಸಾನ್ ಚಳುವಳಿಯ ಮುಂದಿರುವ ಗುರಿಗಳನ್ನು ವಿವರಿಸಿದರು.

ಒಟ್ಟು 23 ರಾಜ್ಯಗಳ 34 ಪ್ರತಿನಿಧಿಗಳು ಸುಮಾರು ಒಟ್ಟು 8 ತಾಸುಗಳ ಕಾಲ ಬೇರೆ ಬೇರೆ ರಾಜ್ಯಗಳಲ್ಲಾದ ಪರಿಸ್ಥಿತಿ ಮತ್ತು ಅನುಭವದ ಆಧಾರದಲ್ಲಿ ಚರ್ಚೆಯಲ್ಲಿ ಪಾಲ್ಗೊಂಡರು.

ನಂತರ ಕೆಲ ಸ್ಪೇರ್ಪಡೆಗಳೊಂದಿಗೆ ಮುಂಬರುವ ಸಮ್ಮೇಳನದ ಅವಧಿಗೆ ವರದಿಯಂತೆ ನಡೆಯಲು ಒಪ್ಪಿಗೆ ನೀಡುವಂತೆ ಪ್ರಧಾನ ಕಾರ್ಯದರ್ಶಿಗಳು ಕೋರುವುದರೊಂದಿಗೆ ಸರ್ವಾನುಮತದಿಂದ ಅಖಿಲಭಾರತ ಕಿಸಾನ್ ಸಭಾದ ಘಟಕಗಳು ಮೇಲಿನಿಂದ ಕೆಳಗಿನವರೆಗೆ ಅವು ಮುಂದೆ ಸಾಗಬೇಕಾದ ದಾರಿಯನ್ನು ಸಮ್ಮೇಳನ ಅಂಗೀಕರಿಸಿತು.

30ನೇ ಅಖಿಲ ಭಾರತ ಸಮ್ಮೇಳನದಲ್ಲಿ ಆಯ್ಕೆಯಾದ ಪದಾಧಿಕಾರಿಗಳು

ಅಧ್ಯಕ್ಷರು: ಕಾಂ.ಎಸ್.ರಾಮಚಂದ್ರನ್ ಪಿಳ್ಳೆ (ಕೇಂದ್ರ)

ಉಪಾಧ್ಯಕ್ಷರು: ಕಾಂ.ಹರಿಕಿಷನ್ ಸಿಂಗ್ ಸುರ್ಜಿತ್ (ಕೇಂದ್ರ), ಕಾಂ. ಬಿನಾಯ್ ಕೊನಾರ್ (ಪಶ್ಚಿಮ ಬಂಗಾಳ), ಕಾಂ.ರಾಮ್ ನಾರಾಯಣ ಗೋಸ್ವಾಮಿ (ಪಶ್ಚಿಮ ಬಂಗಾಳ), ಕಾಂ.ಪಲ್ಲೋಳಿ ಮಹಮದ್ ಕುಟ್ಟಿ (ಕೇರಳ), ಕಾಂ.ಬಜುಬಾನ್ ರಿಯಾಂಗ್ (ತ್ರಿಪುರ), ಕಾಂ.ಎಸ್.ಮಲ್ಲಾರೆಡ್ಡಿ (ಆಂಧ್ರಪ್ರದೇಶ)

ಪ್ರಧಾನ ಕಾರ್ಯದರ್ಶಿ: ಕಾಂ.ಕೆ.ವರದರಾಜನ್

ಕಾರ್ಯದರ್ಶಿಗಳು : ಕಾಂ.ಎನ್.ಕೆ ಶುಕ್ಲ (ಕೇಂದ್ರ) ಕಾಂ.ಮಹಮದ್ ಜಹಿಡಿ (ಪಶ್ಚಿಮ ಬಂಗಾಳ) ಕಾಂ.ಸೂರ್ಯಕಾಂತ್ ಮಿಶ್ರ (ಪಶ್ಚಿಮ ಬಂಗಾಳ) ಕಾಂ.ಅಶೋಕ್ ಧಾವಳೆ (ಮಹಾರಾಷ್ಟ್ರ), ಕಾಂ. ಲಂಬಾರ್‌ಸಿಂಗ್ ಟಗ್ಗರ್ (ಪಂಜಾಬ್)

ಒಟ್ಟು 135 ಜನರ ಅಖಿಲ ಭಾರತ ಕೌನ್ಸಿಲ್‌ನ್ನು ಸಮ್ಮೇಳನ ಆಯ್ಕೆ ಮಾಡಿತು. ಇದರಲ್ಲಿ ಒಟ್ಟು 22 ರಾಜ್ಯಗಳು ಪ್ರಾತಿನಿಧ್ಯ ಪಡೆದಿವೆ. ಕರ್ನಾಟಕದಿಂದ 5 ಜನರನ್ನು ಅಖಿಲ ಭಾರತ ಕಿಸಾನ್ ಕೌನ್ಸಿಲ್‌ನ ಸದಸ್ಯರನ್ನಾಗಿ ಆಯ್ಕೆ ಮಾಡಿತು. ಈಗ ನಾಲ್ಕು ಜನರನ್ನು ಭರ್ತಿ ಮಾಡಲಾಗಿದೆ.

ಈ ಹಿಂದೆ 4 ಜನರ ಪ್ರಾತಿನಿಧ್ಯವನ್ನು ಕರ್ನಾಟಕಕ್ಕೆ ನೀಡಲಾಗಿತ್ತು. ಮತ್ತು ಈ ಬಾರಿ ಕೇಂದ್ರ ಕಿಸಾನ್ ಕೌನ್ಸಿಲ್‌ಗೆ ಇಬ್ಬರನ್ನು ಮೊದಲ ಬಾರಿಗೆ ಆಯ್ಕೆ ಮಾಡಿದೆ.


1. ಕಾಂ. ಮಾರುತಿ ಮಾನ್ಪಡೆ
2. ಕಾಂ.ಜಿ.ಸಿ.ಬಯ್ಯಾರೆಡ್ಡಿ
3. ಕಾಂ.ಯು ಬಸವರಾಜ
4. ಕಾಂ.ಕೆ.ಎಂ.ವೆಂಕಟೇಶ್

ನಂತರ ಸಮ್ಮೇಳನ ಈ ಅವಧಿಯೊಳಗೆ ಎದ್ದುಬಂದ ಮತ್ತು ಮುಂದಿನ ಅವಧಿಯಲ್ಲಿ ತೀವ್ರವಾಗಿ ಮಧ್ಯ ಪ್ರವೇಶಿಸಬೇಕಾದ ವಿಭಾಗ ಹಾಗೂ ರಂಗಗಳ ಕುರಿತು ವಿಶೇಷ ಚರ್ಚೆ ಹಾಗೂ ತೀರ್ಮಾನ ಕೈಗೊಳ್ಳಲು 4 ಕಮಿಷನ್‌ಗಳನ್ನಾಗಿ ಪರಿವರ್ತಿಸಲಾಯಿತು. ಆನಂತರ ಈ ಸಮ್ಮೇಳನ ಕಮಿಷನ್ ವರದಿಗಳನ್ನು ಅಂಗೀಕರಿಸಿದೆ.

1. ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಕುರಿತು ಕಮಿಷನ್ ಕಾಂ.ಅಶೋಕ ಧಾವಳೆ ಮಂಡಿಸಿದ ವರದಿಯ ಮೇಲೆ ಚರ್ಚಿಸಿತು.
2. ಬಾಲಕೃಷ್ಣನ್.ಕೆ ಮಂಡಿಸಿದ ವರದಿಯ ಆಧಾರದಲ್ಲಿ ದಲಿತರು ಹಾಗೂ ಆದಿವಾಸಿಗಳ ಮೇಲೆ ಸಾಮಾಜಿಕ ದಬ್ಬಾಳಿಕೆಯನ್ನು ವಿರೋಧಿಸುವ ಕಮಿಷನ್ ಚರ್ಚಿಸಿತು.
3. ಸೂರ್ಯಕಾಂತ ಮಿಶ್ರ, ಪಂಚಾಯತ್ ರಾಜ್ ಸಚಿವರು ಹಾಗೂ ಅಖಿಲ ಭಾರತ ಕಿಸಾನ್ ಸಭಾದ ಕಾರ್ಯದರ್ಶಿಗಳು ಮಂಡಿಸಿದ 'ನೀರಾವರಿ' ವರದಿಯ ಮೇಲೆ ಕಮಿಷನ್ ಚರ್ಚಿಸಿದೆ.
4. 'ಸಾಲದ ಸರ್ವಸ್ವ' ಕುರಿತು ಮತ್ತೊಂದು ಕಮಿಷನ್ ಚರ್ಚಿಸಿದೆ.

ಈ ನಡುವೆ ಬಿಲಾಯ್ ಕೋನಾರ್ ಮುಂದಾಳತ್ವದ ನಿರ್ಣಯಗಳ ಸಮಿತಿಯು ಬರಗಾಲ- ನೆರೆಹಾವಳಿ, ಕೋಮುವಾದ- ಜಾತಿವಾದದ ಅಪಾಯ, ಪರಿಸರನಾಶದ ವಿರುದ್ಧ ಭೂಸುಧಾರಣೆಗಳ ಕುರಿತು, ಆದಿವಾಸಿಗಳನ್ನು ಒಕ್ಕಲೆಬ್ಬಿಸುವುದರ ವಿರುದ್ಧ ಮುಂತಾಗಿ ಒಟ್ಟು 10 ನಿರ್ಣಯಗಳನ್ನು ಮಂಡಿಸಿತು.

ಸಾಮ್ರಾಜ್ಯಶಾಹಿಗಳ ಆಕ್ರಮಣದ ವಿರುದ್ಧ :



ಕಾಂ.ಎಸ್.ರಾಮಚಂದ್ರನ್ ಪಿಳ್ಳೆ ಕಾಂ.ಕೆ.ವರದರಾಜನ್

ಕೋಮುವಾದ- ಜಾತಿವಾದದ ವಿಚಿದ್ರಕಾರಿ ಶಕ್ತಿಗಳ ವಿರುದ್ಧ ಸಾಮಾಜಿಕ ದಬ್ಬಾಳಿಕೆ ವಿರೋಧಿಸಿ, ಭೂಸುಧಾರಣೆಗಾಗಿ ಬಡರೈತ- ಕೂಲಿಕಾರ ಸುತ್ತ ಎಲ್ಲಾ ರೈತರನ್ನೂ ಸೇರಿಸಿ ದೇಶವ್ಯಾಪಿ ಐಕ್ಯಚಳುವಳಿಗೆ ಅಣಿನೆರೆಸಲು ಮುಂದಾಗುವ ಬದ್ಧಾಭಿಪ್ರಾಯದೊಂದಿಗೆ ಸಮ್ಮೇಳನ ನೀಡಿದ ಗುರಿಗಳನ್ನು ಸಾಧಿಸಲು ಹೊಸದೊಂದು ಅಖಿಲ ಭಾರತ ಕಿಸಾನ್ ಕೌನ್ಸಿಲ್ ಆಯ್ಕೆಯೊಂದಿಗೆ ಮುಗಿಲು ಮುಟ್ಟುವ ಘೋಷಣೆಗಳೊಂದಿಗೆ ಸಮ್ಮೇಳನದ ಕಲಾಪ ಮುಕ್ತಾಯವಾಯಿತು.

ಮಾರ್ಚ್ 09, 2003 ರಂದು ಪಂಜಾಬ್ ರಾಜ್ಯದ ಮೂಲೆ-ಮೂಲೆಗಳಿಂದ ಅಖಿಲ ಭಾರತ ಕಿಸಾನ್ ಸಭಾದ 30ನೇ ಅಧಿವೇಶನದ ನಿರ್ಣಯಗಳನ್ನು ಕೇಳಲು, ಜಗತ್ತಿಗೆ ಸಾರಲು 50 ಸಾವಿರ ರೈತರ ಬೃಹತ್ ರ್‍ಯಾಲಿಯು, ಬಹಿರಂಗ ಸಭೆಯು ಜಲಂಧರ್‌ನ ಪ್ರಾಂಗಣದಲ್ಲಿ ನೆರವೇರಿತು.

ಬೃಹತ್ ರೈತರ ಅಧಿವೇಶನದಲ್ಲಿ ಎಸ್.ಆರ್.ಪಿಳ್ಳೈ ಅಧ್ಯಕ್ಷರು, ಹರಿಕಿಶನ್ ಸಿಂಗ್ ಸುರ್ಜಿತ್ ಉಪಾಧ್ಯಕ್ಷರು, ಬುದ್ಧದೇವ್ ಬಟ್ಟಾಚಾರ್ಯ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿಗಳು, ಹೆಚ್.ಡಿ.ದೇವೆಗೌಡ, ಮಾಜಿ ಪ್ರಧಾನ ಮಂತ್ರಿಗಳು, ಕ್ಯೂಬಾದ ಪ್ರತಿನಿಧಿ ಇವರು ಮಾತನಾಡಿದರು.

ಶ್ರಮಿಸಿದ ಸಂಗಾತಿಗಳು

ಜಲಂದರ್ ಮಹಾನಗರ ರೈತರ ಈ ಸಮ್ಮೇಳನಕ್ಕಾಗಿ ಕೆಂಪು ಸೀರೆ ಹೊದ್ದಂತೆ ಶೃಂಗರಿಸಲ್ಪಟ್ಟಿತ್ತು. ಸಾವಿರಾರು ಕಾರ್ಯಕರ್ತರು ಈ ಸಮ್ಮೇಳನದ ಯಶಸ್ವಿಗಾಗಿ ಹಗಲಿರುಳು ದುಡಿದಿದ್ದಾರೆ. ನಗರದ ತುಂಬಾ ಪಂಜಾಬಿನಲ್ಲಿ ಬ್ಯಾನರ್‌ಗಳು, ಬೋರ್ಡ್‌ಗಳು, ಕೆಂಬಾವುಟಗಳು ತುಂಬಿ ತುಳುಕಾಡಿ ಜಲಂದರ್ ನಗರದ ಮಹಾಜನತೆಯ ಗಮನ ಸೆಳೆದವು.

ಈ ಸಮ್ಮೇಳನ ನಡೆಯುವ ಒಂದು ವಾರ ಪೂರ್ವದಲ್ಲಿ ಸುಮಾರು 5000 ಕಿ.ಮೀಗಳಷ್ಟು ಪಂಜಾಬಿನಾದ್ಯಂತ ನೂರಾರು ಸಭೆಗಳನ್ನು 82 ರ ಹರೆಯದ ಹರಿಕಿಷನ್‌ಸಿಂಗ್ ಸುರ್ಜಿತ್ ನಡೆಸಿದ್ದಾರೆ.

ಸಂಗಾತಿಗಳ ಅವಿರತ, ಅಪೂರ್ವ ಶ್ರಮ ಅವರ ಕೆಲಸ ಕಾರ್ಯಗಳಲ್ಲಿ, ಶಿಸ್ತುಬದ್ಧ ನಡವಳಿಕೆಯಲ್ಲಿ ಬಿಂಬಿತವಾಗಿತ್ತು.

(ವಿವರ ಲೇಖನ ಮುಂದಿನ ವಾರ)

ಚಿತ್ರ ವಿಮರ್ಶೆ

ಪೋಲೀಸ್ ರಾಜ್ಯ ಬಯಸುವ 'ಬೆಂಗಳೂರು ಬಂದ್'



ಇಂದಿನ ಸಮಾಜದ ಎಲ್ಲಾ ದುರವಸ್ಥೆ ಗಳಿಗೂ ರಾಜಕಾರಣಿಗಳೇ ಕಾರಣ, ಇದನ್ನು ಸರಿ ಮಾಡಬೇಕಾದಲ್ಲಿ ಇರುವುದು ಒಂದೇ ದಾರಿ ಅದು ಪೋಲೀಸರಿಗೆ 'ಸುಪ್ರೀಂ ಪವರ್' ಅಂದರೆ ಸರ್ವರೀತಿಯ ಅಧಿಕಾರವನ್ನು ಕೊಡಬೇಕು. ಆಗ ಎಲ್ಲವೂ ಸರಿದಾರಿಗೆ ಬಂದುಬಿಡುತ್ತದೆ ಎಂದು ಸಾರುವ, ಒಂದೇ ಸಾಲಿನಲ್ಲಿ ಕಥೆ ಹೇಳಿಬಿಡಬಹುದಾದ ಚಿತ್ರವೇ 'ಬೆಂಗಳೂರು ಬಂದ್'.

ಈ ಚಿತ್ರ ನಿರ್ದೇಶಿಸಿದ ಮಹಾಶಯ (ಟೇಶಿ ವೆಂಕಟೇಶ್)ನಿಗೆ ಪೋಲೀಸರಿಂದ ಅದ್ಯಾವ ಮಹದುಪಕಾರವಾಗಿತ್ತೋ ಕಾಣದು. ದರೋಡೆಯಂತಹ ಕೃತ್ಯಗಳಿಗೆ ಕೈಹಾಕಿರುವ ಪೋಲೀರನ್ನು ನಾವಿಂದು ನೋಡುತ್ತಿದ್ದೇವೆ. ಕಾರ್ಮಿಕರು ಮುಷ್ಕರ ನಿರತರಾಗಿರುವಾಗ ಮಾಲೀಕರ ಪರ ವಹಿಸಿ ದಾಳಿಗೆ ಮುಂದಾಗುವ ಪೋಲೀಸರು, ಅಮಾಯಕರನ್ನು ಠಾಣೆಗೆ ಎಳೆತಂದು ಹಿಂಸಿಸುವುದು, ಲಾಕಪ್‌ಡೆತ್ ಪ್ರಕರಣಗಳು ಹೆಚ್ಚಾಗುತ್ತಿರುವುದನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಅಷ್ಟಕ್ಕೂ ಈಗ ಅವರಿಗೆ ಇನ್ನಾವ ಹೆಚ್ಚಿನ ಅಧಿಕಾರ ಕೊಡಬೇಕೋ ಕಾಣೆ. ಈಗಿರುವ ಅಧಿಕಾರ ಸಾಲದೆ? ಸರ್ವಾಧಿಕಾರವನ್ನು ಬಯಸುವ ಈ ನಿರ್ದೇಶಕನಿಗೆ ಅದರ ಪರಿಣಾಮಗಳ ಅರಿವಿದೆಯೇ? ಅಥವಾ ಬುದ್ಧಿ ಸ್ತೀಮಿತವಿಲ್ಲದೆ ಐಲು ಹಿಡಿದಿದೆಯೇ?

ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಈ ದೇಶ ಒಪ್ಪಿಕೊಂಡಿದೆ. ಇದರಲ್ಲಿ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಅನಿವಾರ್ಯ. ಪ್ರಭುತ್ವವು ಕೃಷಿಕಾರ್ಮಿಕರ ಕೈಗೆ ಸಿಗದೆ ಭೂಮಾಲೀಕ-ಬಂಡವಾಳಿಗರ ಕೈಗೆ ಸಿಕ್ಕು ಅವರ ಅನುಕೂಲಕ್ಕೆ ತಕ್ಕಂತೆ ಅದನ್ನು ಬಳಸಿಕೊಳ್ಳುತ್ತಿದ್ದಾರೆ. ಇದು ಬದಲಾಗಬೇಕಾದರೆ ಸಾಮಾನ್ಯರು ರಾಜಕೀಯ ಪ್ರವೇಶಿಸಬೇಕು. ಬದಲಾವಣೆಯ ಹರಿಕಾರರಾಗಬೇಕು. ನಮ್ಮನ್ನಾಳುವವರನ್ನು ಆರಿಸುವ ಅಧಿಕಾರ ಜನಸಾಮಾನ್ಯರ ಕೈಯಲ್ಲೇ ಇದೆ. ಇದನ್ನು ಅರಿತು ಸಮರ್ಥರನ್ನು ಆರಿಸಬೇಕು. ಅದು ಬಿಟ್ಟು ರಾಜಕೀಯ ಸರಿಯಿಲ್ಲ, ರಾಜಕಾರಣಿಗಳಿಂದಲೇ ಈ ದೇಶ ಹೊಲಸೆದ್ದು ಹೋಗುತ್ತಿದೆ ಎಂದು ಬೊಬ್ಬೆ ಹೊಡೆಯುತ್ತಾ ಇತರರನ್ನು ಮೂಢರನ್ನಾಗಿಸುವುದು ಸರಿಯಲ್ಲ. ಈ ದೇಶದ ಜನರ ಬದುಕು-ಬವಣೆಗಳು ನಿರ್ಧಾರವಾಗುವುದು ಆಳುವ ವರ್ಗಗಳ ನೀತಿ ನಿರ್ಧಾರಗಳಿಂದ. ಹಾಗಾಗೀ ದೂರದಲ್ಲಿ ನಿಂತು ರಾಜಕೀಯ ಸರಿಯಿಲ್ಲವೆಂದು ಹೇಳುತ್ತಾ ರಾಜಕಾರಣಿಗಳಿಗೆ ಈ ದೇಶವನ್ನು ಕೊಳ್ಳೆಹೊಡೆಯಲು ಅವಕಾಶ ಮಾಡಿಕೊಡಬೇಕೆ? ಪ್ರತಿಯೊಬ್ಬರಲ್ಲೂ ರಾಜಕೀಯ ಪ್ರಜ್ಞೆ ಇದ್ದಲ್ಲಿ ಇಂತಹ ಅನಾಹುತಗಳಿಗೆ ಅವಕಾಶವಿರುವುದಿಲ್ಲವೆಂಬುದನ್ನು ಎಲ್ಲರೂ ಅರಿಯಬೇಕು.

ಗಲಭೆ-ದೊಂಭಿಗಳಲ್ಲಿ ಹೆಚ್ಚಾಗಿ ಹಾನಿಗೀಡಾಗುವವರು ಮತ್ತು ಸಾವಿಗೀಡಾಗುವವರು ಪೋಲೀಸರು ಮತ್ತು ಅವರ ಕುಟುಂಬಗಳು ಮಾತ್ರವೇ ಎಂಬುದು ಈ ಸಿನಿಮಾದಲ್ಲಿನ ಇನ್ನೊಂದು ಅಂಶ. ಇದು ಎಲ್ಲೂ ಕೇಳರಿಯದಂತದ್ದು. ಈ ನಿರ್ದೇಶಕನಿಗೆ ನಿಜಕ್ಕೂ ಸಂತ್ರಸ್ತರಾದವರಾರೂ ಕಣ್ಣಿಗೆ ಬಿದ್ದಿಲ್ಲವೆ?

ರಾಜಕಾರಣಿಗಳನ್ನು ಕೆಳಗಿಳಿಸಿ ಪೋಲೀಸರಿಗೆ ಅಧಿಕಾರ ಕೊಟ್ಟಲ್ಲಿ ಅದು 'ಬಾಣಲೆಯಿಂದ ಬೆಂಕಿಗೆ ಬಿದ್ದಂತೆ' ಎಂಬುದನ್ನು ಅರಿಯದ ಈ ನಿರ್ದೇಶಕರು ಸರ್ವಾಧಿಕಾರವನ್ನು ಎತ್ತಿ ಹಿಡಿಯಲು ಹೊರಟಂತಿದೆ. 'ಶೇಕಡ 80 ಭಾಗದ ಜನರ ಆಸೆಯಾದ ದೇವಾಲಯವನ್ನು ಕಟ್ಟಲು ತಿಣುಕುತ್ತಿರುವ ದೇಶ ನಮ್ಮದು' ಎಂಬ ಡೈಲಾಗುಗಳಿಂದ ಸಮಾಜ ಉದ್ಧಾರವಾಗುವುದಿಲ್ಲ. ಇಷ್ಟು ಸಾಲದೆಂಬಂತೆ ಅಂತ್ಯದಲ್ಲಿ ಪೋಲೀಸರ ಬಾಯಲ್ಲೇ 'ಕ್ರಾಂತಿಯಾಗಬೇಕು' ಎಂದು ಕೂಡ ಹೇಳಿಸುವ ಈ ನಿರ್ದೇಶಕ ಪೋಲೀಸರಿಂದ ಯಾವ ಕ್ರಾಂತಿಯನ್ನು ನಿರೀಕ್ಷಿಸುತ್ತಿದ್ದಾರೋ!.

ರಾಜಕಾರಣಿಗಳನ್ನು ಹೀಗೆಳೆಯುವ ಪ್ರಯತ್ನದಲ್ಲಿ ತಮಿಳುನಾಡಿನ ಕರುಣಾನಿಧಿಯ ಪಾತ್ರವನ್ನು ಸೃಷ್ಟಿಸಿ ಅವರ ಬಂಧನದ ಪ್ರಕರಣವನ್ನು ಮರುಸೃಷ್ಟಿಸಲಾಗಿದೆ. ಈ ಪಾತ್ರವನ್ನು ಪೋಷಿಸಿರುವ ಮು.ಮಂತ್ರಿ ಚಂದ್ರುರವರೂ ಕೂಡ ಒಬ್ಬ ಶಾಸಕರಾಗಿರುವುದು ವಿಪರ್ಯಾಸ. ಇದೂ ಸಾಲದೆಂಬಂತೆ ಅರೆಬೆತ್ತಲೆ ಹುಡುಗಿಯ ಮೈಸವರುತ್ತಾ ಕುಣಿದಾಡುವುದಂತೂ ಈ ಶಾಸಕರಿಗೆ ಘನತೆ ತರುವಂತದ್ದಲ್ಲ. ಹೈಟೆಕ್ ಮುಖ್ಯಮಂತ್ರಿಯ ಪಾತ್ರದಲ್ಲಿ ಅನಂತನಾಗ್ ಹಾವಭಾವಗಳು ಎಸ್.ಎಂ. ಕೃಷ್ಣರನ್ನು ಅನುಕರಿಸಲು ಯತ್ನಿಸಿದಂತಿದೆ.

ಈ ಚಿತ್ರದಲ್ಲಿ ಮೆಚ್ಚಿಕೊಳ್ಳುವಂಥಹ ಯಾವ ಅಂಶಗಳೂ ಇಲ್ಲ. ಪೋಲೀಸ್ ಅಧಿಕಾರಿಯಾಗಿ ಸಾಯಿಕುಮಾರ್ ಅರಚಾಟ ತಲೆಚಿಟ್ಟು ಹಿಡಿಸುತ್ತದೆ. ಕನ್ನಡಿಗರನ್ನು ಮೆಚ್ಚಿಸುವ ಇರಾದೆಯ ಡೈಲಾಗುಗಳು ಅವರನ್ನು ಮೇಲಕ್ಕೆತ್ತಲು ಸಾಧ್ಯವಿಲ್ಲ. ಇದಕ್ಕೆ ಪ್ರತಿಕ್ರಿಯೆಯೂ ಜನರಿಂದ ನ್ಯಾಯವಾಗೇ ಸಿಕ್ಕಿದೆ. ಮೊದಲ ವಾರದಲ್ಲೇ ಚಿತ್ರಮಂದಿರ ಖಾಲಿ ಹೊಡೆಯುತ್ತಿದೆ.

- ಎಂ.ರಾಮು

ನಾಟಕವಾದ 'ಬದುಕು ಬಂದೀಖಾನೆ'

ನೀಲಾರವರ 'ಬದುಕು ಬಂದೀಖಾನೆ' ನಾಟಕವಾಗಿ ರಂಗದ ಮೇಲೆ ಪ್ರದರ್ಶಿತವಾಯಿತು. ಗಮನಸೆಳೆದ ಪ್ರದರ್ಶನದ ವರದಿ

ಗುಲ್ಬರ್ಗಾದ ಕೆ.ನೀಲಾ ಮಹಿಳಾ ಹೋರಾಟಗಾರ್ತಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರು ತೊಗರಿ ಬೆಂಬಲ ಬೆಲೆಗಾಗಿ ನಡೆದ ಹೋರಾಟದಲ್ಲಿ ಆಕೆ ಬಂಧಿತರಾಗುತ್ತಾರೆ. ಜೈಲಿನಲ್ಲಿ ಕಳೆದ ದಿನಗಳಲ್ಲಿ ಭೆಟ್ಟಿಯಾದ ಮಹಿಳಾ ಕೈದಿಗಳ ಬವಣೆಗಳನ್ನು ತಮ್ಮ ಆತ್ಮಕಥೆ ಬದುಕು ಬಂದೀಖಾನೆಯಲ್ಲಿ ದಾಖಲಿಸಿದ್ದಾರೆ, ಚರ್ಚಿಸಿದ್ದಾರೆ.

ಅವರ ಈ ಆತ್ಮಕಥೆಯನ್ನು ರಂಗರೂಕ್ಕಿಳಿಸಿ ಪ್ರದರ್ಶಿಸುವ ಮಹತ್ವದ ಪ್ರಯತ್ನವೊಂದು ಇತ್ತೀಚೆಗೆ ಶಿವಮೊಗ್ಗೆಯ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆಯಿತು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ರಂಗಾಸಕ್ತ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸೇರಿ ರಂಗಕ್ಕೆ ತಂದ ಈ ಆತ್ಮಕಥೆಯನ್ನು 'ನಾಟಕ'ವಾಗಿಸಿದವರು ಖ್ಯಾತ ವಿಮರ್ಶಕ ಡಾ.ಕೇಶವ ಶರ್ಮ. ನಿರ್ದೇಶಿಸಿದವರು ಹೊನ್ನಾವರದ ಶ್ರೀಪಾದ ಭಟ್.

ತೊಗರಿ ಬೆಂಬಲ ಬೆಲೆಗಾಗಿ ಹೋರಾಟಕ್ಕಿಳಿದ ಯುವಕರಿಗೆ ಕೈ ಕೋಳ ತೊಡಿಸಿದ್ದನ್ನು ಪ್ರಶ್ನಿಸಲು ಪ್ರತಿಭಟಿಸಲು ಹೋದ ನೀಲಾ ಮತ್ತು ಅವರ ಸಹಚರರೇ ದೌರ್ಜನ್ಯಕ್ಕೊಳಗಾಗಿ ಜೈಲು ಸೇರುವ ಘಟನೆಯ ಕುರಿತು ನೀಲಾರ ಸ್ವಗತದೊಂದಿಗೆ ಆತ್ಮಕಥೆ ಹರಡಿಕೊಳ್ಳಲಾರಂಭಿಸುತ್ತದೆ. ಜೈಲಿನೊಳಗಡೆ ನೀಲಾ ಹಲವಾರು ಮಹಿಳೆಯರನ್ನು ಭೆಟ್ಟಿಯಾಗುತ್ತಾರೆ. ಅವರಲ್ಲಿ ನಾಲ್ವರು ಮಹಿಳಾ ಕೈದಿಗಳನ್ನು, ಈ ಮಹಿಳೆಯರು ಜೈಲಿಗೆ ಬಂದ ಕಾರಣಗಳನ್ನು ಅವರು ಹುಡುಕತೊಡಗುತ್ತಾರೆ. ವರದಕ್ಷಿಣೆಯ ಕಾರಣಕ್ಕೆ ಸೊಸೆಯನ್ನು ಕೊಂದ ಪಾರವ್ವ, ಮಾನ ಕಳೆಯಲು



ಬಂದ ಗೌಡನನ್ನು ಕೊಂದ ಮಹಿಳೆ, ಬಡತನ ತಾಳಲಾರದೆ ಮಕ್ಕಳಿಗೆ ವಿಷವುಣಿಸಿದ ವಾಸಂತಿ, ಯುವತಿಯೊಬ್ಬಳನ್ನು ಕೊಂದ ಮಗನನ್ನು ರಕ್ಷಿಸಲು ಬಂದ ತಾಯಿ ಹೀಗೆ ಒಬ್ಬೊಬ್ಬರ ಕತೆಯೂ ಬೇರೆ ಬೇರೆ. ಎಲ್ಲದಕ್ಕೂ ಕಾರಣ ಸಾಮಾಜಿಕ ಅನಿಷ್ಟಗಳೇ. ಇವರೆಲ್ಲರ ಮೂಲಕ ವಿವಿಧ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು 'ಬದುಕು ಬಂದೀಖಾನೆ' ಅನಾವರಣಗೊಳಿಸುತ್ತದೆ. ನೀಲಾ ತನ್ನ ಸ್ವಗತದಲ್ಲಿ ಇವುಗಳನ್ನೆಲ್ಲ ಸಾಕಷ್ಟು ಪರಿಣಾಮಕಾರಿಯಾಗಿ ವಿಶ್ಲೇಷಿಸುತ್ತಾರೆ.


ನಾಟಕವಾಗಿಸಲು ಹಲವಾರು ತೊಂದರೆಗಳನ್ನೊಡ್ಡುವ ಈ ಆತ್ಮಕಥೆಯನ್ನು ಡಾ.ಕೇಶವ ಶರ್ಮ ಸಾಕಷ್ಟು ಶ್ರಮ ವಹಿಸಿಯೇ ರಂಗಕ್ಕಿಳಿಸಿದ್ದಾ[ರೆ]. ನಾಲ್ವರು ಮಹಿಳೆಯರ ಘಟನೆಗಳನ್ನ[ು] ಕೇಂದ್ರವಾಗಿಟ್ಟುಕೊಂಡು, ಅವುಗಳ ಕುರಿತ[ು] ಚರ್ಚಿಸುತ್ತಲೇ ಸಮಾಜದ ಇನ್ನಿತರ ಸಮಸ್ಯೆಗ[ಳ] ಮೇಲೆ ಬೆಳಕು ಚೆಲ್ಲುತ್ತಾರೆ. ತುಂಬ[...] ಪ್ರಭಾವಶಾಲಿಯಾದ ಕಾವ್ಯಾತ್ಮಕ ಸಂಭಾಷಣೆಗ[ಳ] ಮೂಲಕ ದೃಶ್ಯಗಳಿಗೆ ಶಕ್ತಿ ತುಂಬುತ್ತಾರ[ೆ]. ಆತ್ಮಕಥೆಯನ್ನು ರಂಗಕ್ಕೆ ಒಗ್ಗಿಸುತ್ತಾರೆ.

ನಾಟಕವನ್ನು ನಿರ್ದೇಶಿಸಿದ ಶ್ರೀಪಾ[ದ ...] ಗುಂಪನ್ನು ಪ್ರಭಾವಶಾಲಿಯಾಗಿ ಬಳಸುವುದ[...] ಮೂಲಕ ನಾಟಕವನ್ನು ಪೋಷಿಸಲು ಜತೆ[...] ನಾಟಕಕ್ಕೆ ಮೆರಗು ತರಲು ಯತ್ನಿಸಿದ್ದಾರೆ. ಕ[...] ಬಟ್ಟೆ ತೊಟ್ಟು ಜೇಡರ ಬಲೆಯ ಮುಖವರ್ಜಿ[...] ಹೊತ್ತ ಹುಡುಗಿಯರು ಕೇಂದ್ರ ಪಾತ್ರಗಳ ಸು[...] ಸುತ್ತುತ್ತಾ, ಶೋಷಣೆಗೆ, ದೌರ್ಜನ್ಯ[...] ಸಂಕೇತವಾಗುತ್ತಾರೆ. ಮತ್ತು ಆ ಕಾರಣಕ್ಕಾಗಿಯ[ೇ] ನಾಟಕ ಹೆಚ್ಚು ಸಂವಹನಶೀಲವಾಗುತ್ತದೆ. 'ಬದು[ಕು] ಬಂದೀಖಾನೆ' ಎನ್ನುವ ಟೈಟಲ್ ಹಾಡಿನೊಂದ[ಿಗೆ] ಪ್ರಾರಂಭವಾಗುವ ನಾಟಕ ಕೊನೆಯಲ್ಲಿ 'ನಾ[...] ಗೆದ್ದೇ ಗೆಲ್ಲುವೆವು' ಹಾಡಿನೊಂದಿಗೆ ಆಶಾವಾದ[...] ಸೆಳಕು ಕೊಡುತ್ತದೆ.

ತಾಲೀಮುಗಳ ಕೊರತೆ, ಕೊನೆಯ ಕ್ಷಣ[ದ] ಗಲಿಬಿಲಿಗಳ ನಡುವೆಯೂ ನಾಟಕ ಯಶಸ[್ಸು] ಕಂಡಿದ್ದರೆ ಅದಕ್ಕೆ ಕಾರಣ ವಿದ್ಯಾರ್ಥಿಗಳಲ್ಲಿ[...] ರಂಗನಿಷ್ಠೆ. ಹಾಡುಗಾರರೂ ನಾಟಕದ ಧ್ವನಿ[...] ಧ್ವನಿಗೂಡಿಸಿ 'ಬಂದೀಖಾನೆ'ಯನ್ನು ಕಟ್ಟಿದ್ದಾರೆ.

'ಅಭಿನಯ'ಕ್ಕೆ ನಾಟಕದ ಹೆಚ್ಚಿನ ಮಾರ್ಕುಗ[ಳು] ಸಲ್ಲುತ್ತದೆ

- ಕಿರಣ ಭಟ್



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH